ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಸ್ವಾತಂತ್ರ್ಯ ಅಮೃತ ಮಹೋತ್ಸವ ಪುಸ್ತಕ ಮಾಲೆ

# ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ
# ಸಾರವಾಡ

ಪ್ರಧಾನ ಸಂಪಾದಕರು

**ಡಾ. ಬಿ.ವಿ. ವಸಂತಕುಮಾರ್**

ಸಂಪಾದಕರು

**ಡಾ. ಪ್ರಕಾಶ ಗ. ಖಾಡೆ**

ಲೇಖಕರು

**ಡಾ. ಸೋಮಶೇಖರ ವಾಲಿ**

**ಕರ್ನಾಟಕ ಸಾಹಿತ್ಯ ಅಕಾಡೆಮಿ**

ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು–೫೬೦ ೦೦೨

ದೂರವಾಣಿ: ೦೮೦–೨೨೨೧೧೭೩೦ / ೨೨೧೦೬೪೬೦

www.karnatakasahithyaacademy.org

ಇ–ಮೇಲ್: sahithya.academy@gmail.com

**SARAVAD:** An Introducing Book on the Places in Karnataka that Played a Major Role in the Freedom Struggle, Written by Dr. Somashekhar Wali, Published by Kariyappa N., Registrar, Karnataka Sahithya Academy, Kannada Bhavana, J.C. Road, Bengaluru-560002

ಹಕ್ಕು: ಕರ್ನಾಟಕ ಸಾಹಿತ್ಯ ಅಕಾಡೆಮಿ

**ಪ್ರಧಾನ ಸಂಪಾದಕರು**
ಡಾ. ಬಿ.ವಿ. ವಸಂತಕುಮಾರ್
ಅಧ್ಯಕ್ಷರು, ಕರ್ನಾಟಕ ಸಾಹಿತ್ಯ ಅಕಾಡೆಮಿ

**ಸಂಪಾದಕ ಮಂಡಳಿ**
ಡಾ. ಎಸ್. ಜಿ. ರಾಮದಾಸ ರೆಡ್ಡಿ
ಡಾ. ಮೃತ್ಯುಂಜಯ ರುಮಾಲೆ
ಶ್ರೀ ನರೇಂದ್ರಕುಮಾರ್ ಎಸ್.ಎಸ್.
ಡಾ. ಪ್ರಕಾಶ ಗ. ಖಾಡೆ
ಶ್ರೀಮತಿ ಕೋಡಿಬೆಟ್ಟು ರಾಜಲಕ್ಷ್ಮಿ

**ಲೇಖಕರು**
ಡಾ. ಸೋಮಶೇಖರ ವಾಲಿ

ಮೊದಲ ಮುದ್ರಣ: ೨೦೨೨
ಪ್ರತಿಗಳು: ೧೦೦೦
ಬೆಲೆ: ರೂ. ೩೦/-
ಪುಟ: ೭೨


ಮುಖಪುಟ ಚಿತ್ರ: ಮುರಳೀಧರ ವಿ. ರಾಥೋಡ್

ಪ್ರಕಾಶಕರು:
ಕರಿಯಪ್ಪ ಎನ್., ರಿಜಿಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ಮುದ್ರಕರು
**ರಶ್ಮಿ ಪ್ರಿಂಟರ್ಸ್**
ಸುಧಾಮನಗರ, ಬೆಂಗಳೂರು
ಮೊ: ೯೯೦೧೯೧೬೫೮೧

**ಬಸವರಾಜ ಬೊಮ್ಮಾಯಿ**
ಮುಖ್ಯಮಂತ್ರಿ

ವಿಧಾನಸೌಧ
ಬೆಂಗಳೂರು–560 001



## ಶುಭ ಸಂದೇಶ

ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭದಲ್ಲಿ ದೇಶದಾದ್ಯಂತ ದೇಶಪ್ರೇಮವನ್ನು ಬೆಳೆಸುವ ಸಾವಿರಾರು ಕಾರ್ಯಕ್ರಮಗಳು ನಡೆಯುತ್ತಿರುವ ಹೊತ್ತಿನಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಕರ್ನಾಟಕದ ೩೧ ಜಿಲ್ಲೆಗಳಲ್ಲಿ ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ೭೫ ಸ್ಥಳಗಳನ್ನು ಗುರುತಿಸಿ, ೭೫ ಪುಸ್ತಕಗಳನ್ನು ಹೊರತರುತ್ತಿರುವುದು ಸಂತೋಷದ ವಿಚಾರ.

ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಕರ್ನಾಟಕದ ಕೊಡುಗೆ ಬಹಳ ಮಹತ್ವದ್ದು. ಕರ್ನಾಟಕದ ಹಲವು ಮಹನೀಯರು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ನಡೆಸಿದ ತ್ಯಾಗ ಬಲಿದಾನಗಳು ಅಪಾರ. ಅಂತೆಯೇ ಕರ್ನಾಟಕದ ಸಾವಿರಾರು ಸ್ಥಳಗಳು ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿ ನಿಂತಿವೆ. ವಿದುರಾಶ್ವತ್ಥ, ಈಸೂರು, ಶಿವಪುರಗಳನ್ನೂ ಒಳಗೊಂಡಂತೆ ಕರ್ನಾಟಕದ ೩೧ ಜಿಲ್ಲೆಗಳ ಸಾವಿರಾರು ಸ್ಥಳಗಳಲ್ಲಿ ಭಾರತದ ಸ್ವಾತಂತ್ರ್ಯ ಸಂಗ್ರಾಮವು ನಡೆದುದಕ್ಕೆ ಸಾಕ್ಷಿಯಾಗಿ ಹಲವಾರು ಕುರುಹುಗಳು, ಅವಶೇಷಗಳು, ಸ್ಮಾರಕಗಳು ಇತಿಹಾಸದ ಪುಟಗಳಲ್ಲಿ ದಾಖಲಾಗಿವೆ. ಆದಾಗ್ಯೂ ಇನ್ನೂ ದಾಖಲಾಗಬೇಕಾದ ಸಂಗತಿಗಳು ಉಳಿದಿವೆ. ಭಾರತ ಸ್ವಾತಂತ್ರ್ಯದ ಅಮೃತೋತ್ಸವದ ಸಂದರ್ಭದಲ್ಲಿ ಈ ಎಲ್ಲ ಅಂಶಗಳನ್ನು ದಾಖಲಿಸುವ ಕೆಲಸ ತುರ್ತಾಗಿ ಆಗಬೇಕಾಗಿದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸಾಕ್ಷಿಯಾಗಿರುವ ಕರ್ನಾಟಕದ ವಿವಿಧ ಸ್ಥಳದಲ್ಲಿ ನಡೆದ ಘಟನೆಗಳು, ತ್ಯಾಗ, ಬಲಿದಾನಗಳು, ಹೋರಾಟಗಳು ಇತ್ಯಾದಿ

ವಿವರಗಳೆಲ್ಲವನ್ನೂ ಪುಸ್ತಕ ರೂಪದಲ್ಲಿ ದಾಖಲಿಸುವ ಮೂಲಕ, ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಕೊಡುಗೆಯ ಮೇಲೆ ಬೆಳಕು ಚೆಲ್ಲುವ ಪ್ರಯತ್ನವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮಾಡಿದೆ. ಇದು ನಿಜಕ್ಕೂ ಒಂದು ಸಂಶೋಧನಾತ್ಮಕ ಪ್ರಯತ್ನವೇ ಸರಿ.

ಈ ಸಾರ್ಥಕ ಕಾರ್ಯವನ್ನು ಯಶಸ್ವಿಗೊಳಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷರು ಹಾಗೂ ಬಳಗದವರನ್ನು ನಾನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ.

ಎಲ್ಲರಿಗೂ ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಶುಭಾಶಯಗಳು.

(ಬಸವರಾಜ ಬೊಮ್ಮಾಯಿ)
ಮುಖ್ಯಮಂತ್ರಿ
ಕರ್ನಾಟಕ ಸರ್ಕಾರ

**ವಿ ಸುನಿಲ್ ಕುಮಾರ್**

ಸ್ವಾತಂತ್ರ್ಯದ ಅಮೃತಮಹೋತ್ಸವ

ಇಂಧನ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು



## ಶುಭ ಸಂದೇಶ

**'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ'**

ಜಗತ್ತಿನಲ್ಲಿ ಭಾರತ ಒಂದು ವಿಶಿಷ್ಟವಾದ ಮಹತ್ವದ ರಾಷ್ಟ್ರ. ವಿಶ್ವಕ್ಕೆ ವಿಶ್ವಮಾನವನನ್ನು, ವಿಶ್ವಕುಟುಂಬವನ್ನು, ವಿಶ್ವನಾಥನನ್ನು, ಜಗನ್ಮಾತೆಯನ್ನು ನೀಡಿರುವ ಆಧ್ಯಾತ್ಮದ ಪುಣ್ಯಭೂಮಿ. ವೇದ, ಉಪನಿಷತ್ತುಗಳ ಕಾಲದಿಂದ ಹಿಡಿದು, ರಾಮ, ಕೃಷ್ಣ, ಶಿವ, ಬುದ್ಧ, ಬಸವ, ಗಾಂಧಿ, ಅಂಬೇಡ್ಕರ್, ಮೈತ್ರೇಯಿ, ಗಾರ್ಗಿ, ಅರುಂಧತಿ, ಸೀತೆ, ಮಂಡೋದರಿ, ಮೀರಾ, ಅಕ್ಕಮಹಾದೇವಿ ಮೊದಲಾದ ಪೌರಾಣಿಕ, ಐತಿಹಾಸಿಕ ವ್ಯಕ್ತಿತ್ವಗಳ ಅಂತಃಶಕ್ತಿಯಿಂದ ಜಗತ್ತನ್ನು ಬೆಳಗಿದ ದೇಶ ಭಾರತ. ಇಂಥ ದೇಶದ ಮೇಲೆ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗೆ ಆಕ್ರಮಣ ಮಾಡಲು ಪ್ರಯತ್ನಿಸಿ, ಸೋತು ಭಾರತೀಯ ಸಂಸ್ಕೃತಿಯ ಅಗಾಧತೆಗೆ ಶರಣಾಗಿ ಭಾರತೀಯರೇ ಆಗಿಹೋಗಿದ್ದಾರೆ. ಹಾಗೇ ಭಾರತವನ್ನು ಭಾರತವನ್ನಾಗಿ ಉಳಿಸಿರುವ ಮಹಾನ್ ಶಕ್ತಿಯೇ ಸ್ವಾತಂತ್ರ್ಯದ ತೀವ್ರ ತುಡಿತ.

ಭಾರತದ ಸ್ವಾತಂತ್ರ್ಯ ಸಂಗ್ರಾಮ ಸುಮಾರು ಮುನ್ನೂರು ವರ್ಷಗಳಿಗೂ ಹಳೆಯದು. ಇಡೀ ಭಾರತವೇ ಬ್ರಿಟಿಷರ ವಿರುದ್ಧ ಹೋರಾಡಿ ದಾಸ್ಯದಿಂದ ಮುಕ್ತವಾಗಿ ಸ್ವಾತಂತ್ರ್ಯವನ್ನು ಪಡೆದುಕೊಂಡು ಈಗ ೭೫ ವರ್ಷಗಳಾಗಿವೆ. ಈ ಸ್ವಾತಂತ್ರ್ಯದ ಅಮೃತ ಮಹೋತ್ಸವ ಸಂದರ್ಭವನ್ನು ಅರ್ಥಪೂರ್ಣವಾಗಿ ಆಚರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ.

ಇಡೀ ದೇಶವನ್ನೇ ಜಾಗೃತಗೊಳಿಸಿದ ಭಾರತದ ಸ್ವಾತಂತ್ರ್ಯ ಸಂಗ್ರಾಮ,

ನಮ್ಮ ಕರ್ನಾಟಕದಲ್ಲಿಯೂ ಸಹ ಸ್ವಾತಂತ್ರ್ಯ ಸಂಗ್ರಾಮದ ಪಾಂಚಜನ್ಯವನ್ನು ಮೊಳಗಿಸಿತು. ಕರ್ನಾಟಕದ ಕಲಿಗಳು ಸ್ವಾತಂತ್ರ್ಯ ಹೋರಾಟಕ್ಕೆ ಧುಮುಕಿ, ಭಾರತದ ಸ್ವಾತಂತ್ರ್ಯ ಸಂಗ್ರಾಮಕ್ಕೆ ವಿಶಿಷ್ಟ ಕೊಡುಗೆ ನೀಡಿರುವುದನ್ನು ಸ್ಮರಿಸಬೇಕಿದೆ. ಕರ್ನಾಟಕದಲ್ಲಿ ಸಾವಿರಾರು ಸ್ವಾತಂತ್ರ್ಯ ಹೋರಾಟದ ಘಟನೆಗಳನ್ನು ಸಾರುವ ಐತಿಹಾಸಿಕ ಸ್ಥಳಗಳಿವೆ. ಅಂಥ ಸ್ಥಳಗಳು ಅರಿವಿಗೆ ಬಾರದೆ ಮರೆಯಾಗಿ ಹೋಗುತ್ತಿವೆ. ಸ್ವಾತಂತ್ರ್ಯದ ಹಣತೆ ಹೊತ್ತಿಸಿದ ಪ್ರಮುಖ ಸ್ಥಳಗಳಲ್ಲಿ ತ್ಯಾಗ, ಬಲಿದಾನಗಳನ್ನು ನೆನಪಿಸುವ ನಿಟ್ಟಿನಲ್ಲಿ ಮತ್ತು ಇಂದಿನ ಪೀಳಿಗೆಗೆ ತಿಳಿಸಿಕೊಡುವ ಕೆಲಸ ಈ ಅಮೃತ ಮಹೋತ್ಸವದ ಸಂದರ್ಭದಲ್ಲಿ ಆಗುತ್ತಿರುವುದು ಸಂತಸದ ವಿಷಯ. ಈ ನಿಟ್ಟಿನಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಒಂದು ಬೃಹತ್ ಆಂದೋಲನವನ್ನು ಹಮ್ಮಿಕೊಂಡಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕರ್ನಾಟಕದ ಐತಿಹಾಸಿಕ ಮಹತ್ವಗಳನ್ನು ತಿಳಿಸಿಕೊಡುವ ೭೫ ಸ್ಥಳಗಳ ಬಗ್ಗೆ ೭೫ ವಿವಿಧ ಲೇಖಕರಿಂದ ಒಟ್ಟು ೭೫ ಪುಸ್ತಕಗಳನ್ನು, ಅದರ ತಲಾ ೧೦೦೦ ಪ್ರತಿಯಂತೆ ೭೫೦೦೦ ಪ್ರತಿಗಳನ್ನು ಎರಡು ತಿಂಗಳಲ್ಲಿ ಬರೆಯಿಸಿ, ಮುದ್ರಿಸಿ ಓದುಗರಿಗೆ ತಲುಪಿಸುತ್ತಿರುವುದು ನಿಜಕ್ಕೂ ಹೆಮ್ಮೆಯ ವಿಷಯ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರತಿಯೊಬ್ಬರನ್ನೂ ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ.

ನಾವೆಲ್ಲರೂ ಕೂಡಿ ನಮ್ಮ ನಮ್ಮ ಮನೆಮನಗಳಿಂದ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿ, ಪರಂಪರೆಗಳನ್ನು ಬೆಳೆಸೋಣ. ರಸಋಷಿ ಕುವೆಂಪು ಅವರು ಹೇಳಿರುವ 'ಜಯ ಭಾರತ ಜನನಿಯ ತನುಜಾತೆ, ಜಯ ಹೇ ಕರ್ನಾಟಕ ಮಾತೆ' ಎಂಬ ಆದರ್ಶದೊಂದಿಗೆ ಕರ್ನಾಟಕದ ಮೂಲಕ ಭಾರತವನ್ನೂ, ಭಾರತದ ಮೂಲಕ ಕರ್ನಾಟಕವನ್ನೂ ಅಭಿನ್ನಗೊಳಿಸೋಣ, ಬಲಿಷ್ಠಗೊಳಿಸೋಣ. ಭವ್ಯ ಕರ್ನಾಟಕ, ಭವ್ಯ ಭಾರತ ನಿರ್ಮಿಸೋಣ.

**(ವಿ ಸುನಿಲ್ ಕುಮಾರ್)**
ಇಂಧನ, ಕನ್ನಡ ಮತ್ತು ಸಂಸ್ಕೃತಿ
ಇಲಾಖೆ ಸಚಿವರು

## ಪ್ರಧಾನ ಸಂಪಾದಕರ ಮಾತು

ಸ್ವಾತಂತ್ರ್ಯ ಎಂಬುದು ಲೌಕಿಕವಾಗಿಯೂ ಲೋಕೋತ್ತರವಾಗಿಯೂ ಮಹೋನ್ನತವಾದ ಮೌಲ್ಯ. ಭಾರತೀಯ ಸಂಸ್ಕೃತಿಯು ಧರ್ಮ, ಅರ್ಥ, ಕಾಮ, ಮೋಕ್ಷಗಳನ್ನು ಪುರುಷಾರ್ಥವೆಂದು ಕರೆದಿದೆ. ಮೋಕ್ಷವೆಂದರೆ ಬಿಡುಗಡೆ, ಸ್ವಾತಂತ್ರ್ಯ ಎಂದರ್ಥ. ಹುಟ್ಟು ಸಾವುಗಳಿಂದ ಬಿಡುಗಡೆ ಎಂಬುದು ಲೋಕೋತ್ತರವಾದ ಅರ್ಥವಾದರೆ, ಸಾವಿಲ್ಲದ, ನೋವಿಲ್ಲದ ಸ್ಥಿತಿಗಾಗಿ ಕಲ್ಯಾಣ ನಾಡಿನ ನಿರ್ಮಾಣಕ್ಕಾಗಿ ನಾವು ಗಳಿಸುವ ನಮ್ಮ ಸ್ವಯಂ ನಿಯಂತ್ರಣದ ಸ್ವಾತಂತ್ರ್ಯ ಎಂಬುದು ಲೌಕಿಕವಾದ ಅರ್ಥ. ಲೌಕಿಕ ಹಾಗೂ ಅಲೌಕಿಕಗಳು ಪರಸ್ಪರ ವಿರೋಧಿಗಳಲ್ಲ; ಅವು ಪರಸ್ಪರ ಪೂರಕವಾದವು. ಲೋಕವನ್ನು ಲೋಕೋತ್ತರದ ಔನ್ನತ್ಯಕ್ಕೆ ಏರಿಸುವ ದರ್ಶನವೇ ಭಾರತೀಯ ದರ್ಶನ. ಸ್ವಾತಂತ್ರ್ಯ ನಮ್ಮ ಧರ್ಮ, ನಮ್ಮ ಆತ್ಮ, ನಮ್ಮ ಜೀವನದ ಪರಮ ಪುರುಷಾರ್ಥ. ಅದನ್ನು ಬಯಲು ಎಂದೂ ಕರೆದಿದ್ದಾರೆ. ಅಂತಹ ಸ್ವಾತಂತ್ರ್ಯಕ್ಕಾಗಿ ಭಾರತವು ತನ್ನ ಪುರಾತನ ಕಾಲದಿಂದಲೂ ಬದುಕುತ್ತಾ ಬಂದಿದೆ. ಸ್ವಾತಂತ್ರ್ಯಕ್ಕೆ ಚ್ಯುತಿ ಬಂದಾಗಲೆಲ್ಲ ಭಾರತೀಯರು ಭರತಮಾತೆಯ ಪದತಲದಲ್ಲಿ ತಮ್ಮ ತನು–ಮನ–ಧನಗಳನ್ನು ಅರ್ಪಿಸಿದ್ದಾರೆ. ಅದನ್ನು ರಸಋಷಿ ಕುವೆಂಪು ಅವರು "ಇಂದು ರಕ್ತದ ಬಿಂದು ನಾಳೆ ಸೌಖ್ಯದ ಸಿಂಧು" ಎಂದು ಕರೆದಿದ್ದಾರೆ.

ನಮ್ಮ ದೇಶದ ಸ್ವಾತಂತ್ರ್ಯ ಎಂದರೆ ಅದು ತ್ಯಾಗ, ಬಲಿದಾನಗಳ ಫಲ. ಭಾರತದ ಮೇಲೆ ದಾಳಿ ಮಾಡಲು ಬಂದ ಅಲೆಗ್ಸಾಂಡರನಿಂದ ಹಿಡಿದು ಮೊಘಲರಾದಿಯಾಗಿ ಬ್ರಿಟಿಷರವರೆಗಿನ ಎಲ್ಲ ದಾಳಿಕೋರರ ಕ್ರೌರ್ಯವನ್ನು ಮೆಟ್ಟಿ ನಿಂತು ಭಾರತೀಯರು ಭಾರತಾಂಬೆಯ ಆತ್ಮಗೌರವವನ್ನು ಎತ್ತಿಹಿಡಿದಿರುವುದರ ಪ್ರತೀಕ ನಮ್ಮ ಸ್ವಾತಂತ್ರ್ಯ.

ಪ್ರಸ್ತುತ ೧೫.೦೮.೧೯೪೭ ರಂದು ನಾವು ಗಳಿಸಿದ ಸ್ವಾತಂತ್ರ್ಯದ ಅಮೃತಘಳಿಗೆಗೆ ಇದೀಗ ೧೫.೦೮.೨೦೨೧ಕ್ಕೆ ೭೫ನೆಯ ಸ್ವಾತಂತ್ರ್ಯ ಅಮೃತ ಮಹೋತ್ಸವ ಸಂಭ್ರಮ. ೧೫.೦೮.೨೦೨೨ಕ್ಕೆ ೭೫ ವರ್ಷಗಳನ್ನು ಪೂರೈಸಿ ೭೬ನೆಯ ಸ್ವಾತಂತ್ರ್ಯೋತ್ಸವದ ಆತ್ಮನಿರ್ಭರ ಭಾರತದ ನವನಿರ್ಮಾಣದ ಅವಕಾಶಗಳ ಸಂಭ್ರಮ. ಈ ಒಂದು ವರ್ಷ ಕಾಲ ಭಾರತ ಸರ್ಕಾರ, ಕರ್ನಾಟಕ ಸರ್ಕಾರ "ಸ್ವಾತಂತ್ರ್ಯದ ಅಮೃತ ಮಹೋತ್ಸವ"ವನ್ನು ಆಚರಿಸುತ್ತಿದೆ. ಅದರ ಅಂಗವಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಆಗಸ್ಟ್– ೨೦೨೧ರ ತಿಂಗಳು ಪೂರ್ತಿ "ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ" ಎಂಬ ಹೆಸರಿನಲ್ಲಿ ಕರ್ನಾಟಕದ ಎಲ್ಲ ಜಿಲ್ಲೆಗಳಲ್ಲಿ ನಡೆದಿರುವ ಸ್ವಾತಂತ್ರ್ಯ ಹೋರಾಟ ಕುರಿತ ಆನ್ಲೈನ್ ಉಪನ್ಯಾಸಗಳನ್ನು ನಡೆಸಿದೆ. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರಾದ ಶ್ರೀ ಸುನಿಲ್ ಕುಮಾರ್ ಅವರು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ರಾಜ್ಯಾದ್ಯಂತ ಬೃಹತ್ ಸ್ವರೂಪದಲ್ಲಿ ಅರ್ಥಪೂರ್ಣವಾಗಿ ಆಚರಿಸಬೇಕೆಂದು ತೀರ್ಮಾನಿಸಿದ್ದಾರೆ. ಅವರಿಗೆ ರಾಜ್ಯದ ೭೫ ಸ್ಥಳಗಳಲ್ಲಿ ೭೫ ಸ್ವಾತಂತ್ರ್ಯ ಜಾಥಾಗಳು ನಡೆಯಬೇಕು, ಎಲ್ಲ ಜಿಲ್ಲೆಗಳಿಂದ ರಥಯಾತ್ರೆ ಆಗಬೇಕು, ಬೆಂಗಳೂರು ಮಹಾನಗರದಲ್ಲಿ ಮೂರು ದಿನಗಳ ಸಮಾವೇಶ, ಪ್ರದರ್ಶನಿ, ಪುಸ್ತಕ ಮಾರಾಟ ಮೊದಲಾದ ಹತ್ತು ಹಲವು ಚಟುವಟಿಕೆಗಳನ್ನು ನಡೆಸುವ ಮೂಲಕ ಹೊಸ ತಲೆಮಾರಿಗೆ ಸ್ವಾತಂತ್ರ್ಯದ ಅಮೃತವನ್ನುಣಿಸಬೇಕೆಂಬ ಕನಸಿದೆ. ಅದರ ಭಾಗವಾಗಿ ಅವರು ರಾಜ್ಯದ ೭೫ ಸ್ವಾತಂತ್ರ್ಯ ಹೋರಾಟದ ಸ್ಥಳಗಳನ್ನು ಗುರುತಿಸಿ ೭೫ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸುವ ಜವಾಬ್ದಾರಿಯನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿದ್ದಾರೆ. ನಮಗೆ ಜವಾಬ್ದಾರಿ ವಹಿಸಿದ್ದು ದಿನಾಂಕ: ೩೦.೧೧.೨೦೨೧ರಂದು ಮಾನ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ. ಅಂದಿನಿಂದಲೇ ಕಾರ್ಯಪ್ರವೃತ್ತರಾದ ನಾವು ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎಲ್ಲ ಜಿಲ್ಲಾ ಸಹಾಯಕ ನಿರ್ದೇಶಕರಿಂದ ಸ್ಥಳಗಳ ಮಾಹಿತಿ ಪಡೆದೆವು. ಜೊತೆಗೆ ರಾಜ್ಯದ ಐದು ಜನರನ್ನು ಸಂಪಾದಕರನ್ನಾಗಿ ನಿಯೋಜಿಸಿ ದಿನಾಂಕ: ೦೩.೧೨.೨೦೨೧ರಂದು ಅಕಾಡೆಮಿಯಲ್ಲಿ ಸಂಪಾದಕರ ಸಭೆ ನಡೆಸಿದೆವು. ಸಂಪಾದಕರಾಗಿ ಡಾ. ಮೃತ್ಯುಂಜಯ ರುಮಾಲೆ, ಹೊಸಪೇಟೆ, ಡಾ. ಎಸ್. ಜಿ. ರಾಮದಾಸ ರೆಡ್ಡಿ, ಮೈಸೂರು, ಡಾ. ಪ್ರಕಾಶ ಗ. ಖಾಡೆ, ಬಾಗಲಕೋಟೆ,



ಶ್ರೀ ನರೇಂದ್ರಕುಮಾರ್ ಎಸ್.ಎಸ್., ಬೆಂಗಳೂರು ಹಾಗೂ ಶ್ರೀಮತಿ ರಾಜಲಕ್ಷ್ಮಿ ಕೋಡಿಬೆಟ್ಟು, ಮಂಗಳೂರು ಇವರೊಂದಿಗೆ ಎಲ್ಲ ಸ್ಥಳಗಳ ಬಗ್ಗೆ ಚರ್ಚಿಸಿ ೭೫ ಸ್ಥಳಗಳನ್ನು ಆಯ್ಕೆ ಮಾಡಿದೆವು. ಒಬ್ಬೊಬ್ಬ ಸಂಪಾದಕರಿಗೆ ೧೫ ಸ್ಥಳಗಳನ್ನು ಹಂಚಿ, ೧೫ ಲೇಖಕರಿಂದ ೧೫ ಕಿರುಪುಸ್ತಕಗಳನ್ನು ಬರೆಯಿಸಿಕೊಡುವ ಜವಾಬ್ದಾರಿ ನೀಡಿದೆವು. ಎರಡು ತಿಂಗಳ ಅವಧಿಯಲ್ಲಿ ಈ ೭೫ ಪುಸ್ತಕಗಳು ಪ್ರಕಟವಾಗುತ್ತಿವೆ. ಈ ಕೃತಿಗಳು ಇತಿಹಾಸದ ಶಾಸ್ತ್ರೀಯ ಮಾದರಿ, ವರದಿಯ ಕಥನ ಮಾದರಿ ಹಾಗೂ ಸೃಜನಶೀಲ ಅಭಿವ್ಯಕ್ತಿಯ ಸಾಹಿತ್ಯ ಮಾದರಿಗಳಿಂದ ಕೂಡಿರುವುದು ಗಮನಾರ್ಹ. ಅತೀ ಕಡಿಮೆ ಅವಧಿಯಲ್ಲಿ ಕ್ಷೇತ್ರಕಾರ್ಯ ಮತ್ತು ಅಧ್ಯಯನ ಮಾಡಿ ಮೌಲಿಕವಾದ ಕೃತಿಗಳನ್ನು ಬರೆದುಕೊಟ್ಟಿರುವ ಎಲ್ಲಾ ಲೇಖಕರ, ಸಂಪಾದಕರ ಶ್ರಮ ಸಾರ್ಥಕತೆ ಪಡೆದಿದೆ. ಈ ನಿಟ್ಟಿನ ಅಧ್ಯಯನಗಳಿಗೆ ಈ ಕೃತಿಗಳು ಪ್ರೇರೇಪಿಸುತ್ತವೆ. ಇದೊಂದು ತುರ್ತಾದ ಆಂದೋಲನಾತ್ಮಕವಾದ ಪ್ರಯತ್ನ. ಇದಕ್ಕೆ ಸಂಪೂರ್ಣ ಸಹಕಾರ ನೀಡಿದ ಮಾನ್ಯ ಸಚಿವರಾದ ಶ್ರೀ ವಿ ಸುನಿಲ್ ಕುಮಾರ್ ಅವರಿಗೆ, ಎಲ್ಲಾ ಸಂಪಾದಕರಿಗೆ, ಎಲ್ಲಾ ಲೇಖಕರಿಗೆ, ಇಲಾಖೆಯ ಕಾರ್ಯದರ್ಶಿಗಳಾದ ಡಾ. ಎನ್. ಮಂಜುಳಾ ಅವರಿಗೆ, ನಿರ್ದೇಶಕರಾದ ಶ್ರೀ ಎಸ್. ರಂಗಪ್ಪ ಅವರಿಗೆ, ಜಂಟಿ ನಿರ್ದೇಶಕರಾದ ಶ್ರೀ ಅಶೋಕ್ ಎನ್. ಚಲವಾದಿ ಅವರಿಗೆ ಹಾಗೂ ಎಲ್ಲಾ ಅಧಿಕಾರಿ ವರ್ಗಕ್ಕೆ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೆ ಪ್ರೀತಿಯಿಂದ ವಂದಿಸುತ್ತೇನೆ. ಯೋಜನೆ ಪೂರ್ಣಗೊಳ್ಳಲು ವಿಶೇಷವಾಗಿ ನೆರವಾದ ಮಿತ್ರರಾದ ಶ್ರೀ ಮಾಲತೀಶ್ ಭಟ್, ಶ್ರೀ ಹರ್ಷ ನಾರಾಯಣ, ಶ್ರೀಮತಿ ನಯನಾ ಎಸ್. ಅವರನ್ನು ನೆನೆಯುತ್ತಾ ವಂದಿಸುತ್ತೇನೆ. ಕಡಿಮೆ ಅವಧಿಯಲ್ಲಿ ಹಗಲಿರುಳು ಶ್ರಮಿಸಿದ ದಣಿವರಿಯದ ದುಡಿಮೆಗಾರರಾದ ರಿಜಿಸ್ಟ್ರಾರ್ ಎನ್. ಕರಿಯಪ್ಪ, ನಮ್ಮ ಬಳಗ ವಿ. ಹರೀಶ್‌ಕುಮಾರ್, ಹರೀಶ್, ಸೈಯದ್ ಜಾವೀದ್, ಸುಚಿತ್ರ ಎಸ್. ಜಿ., ಗೋಪಾಲ ಎನ್., ಸುನೀಲ್ ಅವರಿಗೆ ಹಾಗೂ ಸುಂದರವಾಗಿ ಮುದ್ರಿಸಿದ ರಶ್ಮಿ ಪ್ರಿಂಟರ್ಸ್ ಬಳಗಕ್ಕೆ, ಮುಖಪುಟ ರಚಿಸಿಕೊಟ್ಟ ಶ್ರೀ ಮುರಳೀಧರ ವಿ. ರಾಥೋಡ್ ಅವರಿಗೆ ವಂದಿಸುತ್ತೇನೆ.

**ಬಿ. ವಿ. ವಸಂತಕುಮಾರ್**

ಅಧ್ಯಕ್ಷರು

# ಲೇಖಕರ ಮಾತು

ಭಾರತ ಸ್ವಾತಂತ್ರ್ಯ ಎಪ್ಪತ್ತೈದನೆಯ ಅಮೃತ ಮಹೋತ್ಸವದ ಅಂಗವಾಗಿ ಡಾ॥ ಪ್ರಕಾಶ ಖಾಡೆಯವರು ಅಖಂಡ ವಿಜಯಪುರ ಜಿಲ್ಲೆಯ ಸ್ವಾತಂತ್ರ್ಯ ಯೋಧರನ್ನು ಕುರಿತು ಎರಡು ಸಾವಿರದ ಇಪ್ಪತ್ತೊಂದು ಅಗಸ್ಟ್ ಮಾಹೆಯಲ್ಲಿ ಬೆಳಕಾಯಿತು ಬಾಗಲಕೋಟೆ ಆನ್‌ಲೈನ್ ಸರಣಿ ಉಪನ್ಯಾಸ ಕಾರ್ಯಕ್ರಮಗಳನ್ನು ನಡೆಸುತ್ತಿದ್ದು ಬಾಗಲಕೋಟೆಯ ಶ್ರೀ ರಾ. ಗಂ. ರವರ ಪರಿಕಲ್ಪನೆ ಹಾಗೂ ಡಾ॥ ಬಿ.ಆರ್.ಪೊಲೀಸಪಾಟೀಲರವರ ಮಾರ್ಗದರ್ಶನದಲ್ಲಿ ಉಪನ್ಯಾಸಗಳು ಅದ್ಭುತವಾಗಿ ಮೂಡಿಬಂದವು. ಈ ಸಂದರ್ಭದಲ್ಲಿ ಡಾ॥ ಪ್ರಕಾಶ ಖಾಡೆಯವರು ದೂರವಾಣಿಯಲ್ಲಿ ನನಗೆ ವಿಜಯಪುರ ಜಿಲ್ಲೆಯ ಹಿರಿಯ ಸ್ವಾತಂತ್ರ್ಯ ಯೋಧರಾದ ಚನ್ನಬಸಪ್ಪ ಅಂಬಲಿಯವರನ್ನು ಕುರಿತು ಮಾತನಾಡಲು ಸೂಚಿಸಿದರು. ಆಗ ನಾನು ಸರ್ ಸಾರವಾಡ ಗ್ರಾಮದಲ್ಲಿ ನಮ್ಮ ದೊಡ್ಡಪ್ಪ ಶ್ರೀ ಗಿರಮಲ್ಲಪ್ಪ ಶಿವಪ್ಪ ವಾಲಿ ಹಾಗೂ ನಮ್ಮ ತಂದೆ ಶ್ರೀ ಮಳಸಿದ್ದಪ್ಪ ಶಿವಪ್ಪ ವಾಲಿ ಹೀಗೆ ಒಟ್ಟು ಹದಿಮೂರು ಜನ ಸ್ವಾತಂತ್ರ್ಯ ಹೋರಾಟಗಾರರಾಗಿ ಹೋಗಿದ್ದಾರೆ. ಯಾವುದೇ ಪ್ರಚಾರ ಪ್ರಿಯರಲ್ಲದ ಇವರ ಪರಿಚಯವಾಗಿಲ್ಲ ಎಂದು ತಿಳಿಸಿದಾಗ ಸರಿ ನೀವು ಅವರನ್ನೇ ಕುರಿತು ಮಾತನಾಡಿ ಎಂದು ತಿಳಿಸಿದರು. ಅದು ಇದೇ ವರ್ಷ ಎರಡು ಸಾವಿರದ ಇಪ್ಪತ್ತೊಂದನೆಯ ಅಗಸ್ಟ್ ಒಂದರಂದು ಸಾರವಾಡದ ಸ್ವಾತಂತ್ರ್ಯ ಯೋಧರನ್ನು ಕುರಿತು ನಲವತ್ತೈದು ನಿಮಿಷಗಳ ಆನ್‌ಲೈನ್ ಉಪನ್ಯಾಸ ನೀಡಿದೆನು. ಮುಂದೆ ಡಾ. ಪ್ರಕಾಶ ಖಾಡೆಯವರು ಎರಡು ಸಾವಿರದ ಇಪ್ಪತ್ತೊಂದರ ಡಿಸೆಂಬರ್ ಮಾಹೆ ಮೂರನೇ ತಾರೀಖಿನಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ ದೂರವಾಣಿ ಮೂಲಕ ಮಾತನಾಡಿ ನೀವು ಈಗಾಗಲೇ ಮಾತನಾಡಿದ ಸಾರವಾಡದ ಸ್ವಾತಂತ್ರ್ಯ ಯೋಧರನ್ನು ಕುರಿತು ಕರ್ನಾಟಕ ಸಾಹಿತ್ಯ ಅಕಾಡೆಮಿಯು ಹೊರತರುತ್ತಿರುವ

ಭಾರತ ಸ್ವಾತಂತ್ರ್ಯ ಎಪ್ಪತ್ತೈದನೇ ಅಮೃತ ಮಹೋತ್ಸವದ ಸವಿನೆನಪಿಗಾಗಿ ಎಪ್ಪತ್ತೈದು ಪುಸ್ತಕಗಳನ್ನು ಹೊರತರುತ್ತಿದ್ದು, ತಾವು ನಲವತ್ತು ಪುಟಗಳ ಲೇಖನವನ್ನು ಶೀಘ್ರವಾಗಿ ಬರೆದು ಕೊಡಬೇಕೆಂದು ತಿಳಿಸಿದ ಹಿನ್ನೆಲೆಯಲ್ಲಿ ಪ್ರಚಾರ ಪ್ರೀಯರಲ್ಲದ ಉಪೇಕ್ಷೆಗೊಳಗಾಗದ ಸಾರವಾಡ ಸ್ವಾತಂತ್ರ್ಯ ಯೋಧರನ್ನು ಕುರಿತು ನಮ್ಮ ತಂದೆ ಹಾಗೂ ನಮ್ಮ ದೊಡ್ಡಪ್ಪ ಮತ್ತು ಸಾರವಾಡ ಸ್ವಾತಂತ್ರ್ಯ ಯೋಧರು ನಾನು ಚಿಕ್ಕವನಿದ್ದಾಗ ತಾವು ಮಾಡಿದ ಸತ್ಯಾಗ್ರಹದ ವಿಚಾರಗಳನ್ನು ಕೇಳಿ ತಿಳಿದಿದ್ದೆ. ಈ ಸಂದರ್ಭದಲ್ಲಿ ಆ ನೆನಪುಗಳನ್ನು ಮೆಲಕು ಹಾಕಿಕೊಂಡು ಲೇಖನವನ್ನು ಸಿದ್ಧಪಡಿಸಿದ್ದೇನೆ.

ಮರೆತು ಹೋಗುತ್ತಿರುವ ಮಹನೀಯರು ಮಾಡಿದ ಮಹಾತ್ಕಾರ್ಯವನ್ನು ನೆನಪಿಸಿಕೊಂಡು ಲೇಖನ ಬರೆಯಲು ಅವಕಾಶ ಮಾಡಿಕೊಟ್ಟ ಬಾಗಲಕೋಟೆಯ ಡಾ. ಪ್ರಕಾಶ ಖಾಡೆಯವರಿಗೂ ಎಪ್ಪತ್ತೈದು ಸ್ವಾತಂತ್ರ್ಯ ಯೋಧರ ಕಿರು ಪುಸ್ತಕಗಳನ್ನು ಸ್ವಾತಂತ್ರ್ಯ ಅಮೃತ ಮಹೋತ್ಸವದ ಸವಿನೆನಪಿಗಾಗಿ ಹೊರ ತರುತ್ತಿರುವ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಡಾ. ಬಿ.ವ್ಹಿ. ವಸಂತಕುಮಾರ ರವರಿಗೂ ಮಾನ್ಯ ರಿಜಿಸ್ಟರ್‌ರಾದ ಶ್ರೀ ಕರಿಯಪ್ಪ ಎನ್. ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸರ್ವ ಸದಸ್ಯರಿಗೂ ಅಭಿನಂದನೆಗಳು. ಡಿ.ಟಿ.ಪಿ. ಕಾರ್ಯ ನಿರ್ವಹಿಸಿಕೊಟ್ಟ ಶ್ರೀ ಉಲ್ಲಾಸ ಪಾಟೀಲ (ಕುಲಕರ್ಣಿ), ಉಲ್ಲಾಸ ಗ್ರಾಫಿಕ್ಸ, ವಿಜಯಪುರ ಇವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ.

ವಂದನೆಗಳೊಂದಿಗೆ,

೨೭-೧೨-೨೦೨೧ **ಡಾ. ಸೋಮಶೇಖರ ಎಂ. ವಾಲಿ**
ವಿಜಯಪುರ-೫೮೬ ೧೦೩

## ಪರಿವಿಡಿ


ಶುಭ ಸಂದೇಶ ೩
ಶುಭ ಸಂದೇಶ ೪
ಪ್ರಧಾನ ಸಂಪಾದಕರ ಮಾತು ೭
ಲೇಖಕರ ಮಾತು ೧೧
ಪೀಠಿಕೆ ೧೩
ಸಾರವಾಡದ ಸ್ವಾತಂತ್ರ್ಯಯೋಧರ ಪರಿಚಯ ೧೪
ಪ್ರಾಚೀನ ಭಾರತದ ಭವ್ಯ ಪರಂಪರೆ ಸಿರಿ ಸಂಪತ್ತು ೧೬
ಭಾರತಕ್ಕೆ ಬ್ರಿಟೀಷರ ಆಗಮನ : ಆಡಳಿತ ಕೈವಶ ೧೭
ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ೧೭
ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಮೊದಲಿಗರು ಹಾಗೂ ಗಾಂಧೀಯುಗ ೨೦
ಅಂದಿನ ಮೈಸೂರು ಕರ್ನಾಟಕದ ಇತರೆಡೆ ಸ್ವಾತಂತ್ರ್ಯ ಚಳುವಳಿ ೨೨
ವಿಜಯಪುರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ ೨೩
ಸಾರವಾಡ ಗ್ರಾಮದ ಪರಂಪರೆ ೨೬
ಮುಳವಾಡ ಸರಕಾರಿ ಪ್ರವಾಸಿ ಮಂದಿರ ದಹನ ೩೨
ಸ್ವಾತಂತ್ರ್ಯಯೋಧರ ದಸ್ತಗಿರಿ ೩೪
ಬ್ರಿಟೀಷ್ ನ್ಯಾಯಾಧೀಶರಿಂದ ವಿಚಾರಣೆ ೩೭
ಯರವಾಡಾ ಜೈಲಿನ ಕಾರಾಗೃಹವಾಸ ೩೮
ಜೈಲಿನಲ್ಲಿ ನೂಲುವ ನಾಟಕ ಮಾಡುವುದು ೩೯
ಸ್ವಾತಂತ್ರ್ಯಯೋಧರ ಕುಟುಂಬದ ಮಹಿಳೆಯರ ಸ್ಥಿತಿ ಗತಿ ೪೧

ಸ್ವಾತಂತ್ರ್ಯ ಯೋಧರಿಗೆ ಜೈಲಿನಿಂದ ಬಿಡುಗಡೆ ಭಾಗ್ಯ ೪೨

ಬಿಡುಗಡೆಗೊಂಡ ವೀರಯೋಧರಿಗೆ ಮಾನ ಸನ್ಮಾನದ ಬೀಳ್ಕೊಡುಗೆ ೪೩

ಸಾರವಾಡ ಮಾದರಿ ಗ್ರಾಮ ರೂಪಿಸುವೆಡೆಗೆ ೪೪

ಸಾರವಾಡ ಸ್ವಾತಂತ್ರ್ಯಯೋಧರ ನಿಷ್ಠುರ ಸ್ವಭಾವ ೪೬

ಸಾರವಾಡ ಸ್ವಾತಂತ್ರ್ಯ ಯೋಧರ ನೆನಪಿನ ಗಾಂಧೀಜಿ ಸ್ಮಾರಕ ಹಾಗೂ ವಾಲಿ ಸಹೋದರರ ಹಿರಿಮೆ ೪೮

ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಗೆ ನೀಡಿದ ಸ್ವಾಗತ ಸಮಾರಂಭ ೪೯

ಸಾರವಾಡ ಸ್ವಾತಂತ್ರ್ಯಯೋಧರ ಸಂಕ್ಷಿಪ್ತ ಪರಿಚಯ ೫೧

ಶ್ರೀ ಗಿರಮಲ್ಲಪ್ಪ ಶಿವಪ್ಪ ವಾಲಿ ೫೧

ಶ್ರೀ ಮಳಸಿದ್ದಪ್ಪ ಶಿವಪ್ಪ ವಾಲಿ ೫೩

ಶ್ರೀ ಈಶ್ವರಪ್ಪ ನಿಂಗಪ್ಪ ಯಾದವಾಡ ೫೪

ಶ್ರೀ ಬಸಪ್ಪ ಅಲ್ಲಪ್ಪ ಬಳಗಲಿ ೫೫

ಶ್ರೀ ಈಶ್ವರಪ್ಪ ತುಕ್ಕಪ್ಪ ಅರ್ಜುಣಗಿ ೫೬

ಶ್ರೀ ಪಾಂಡು ಗೋವಿಂದ ಪರೀಟ ೫೭

ಶ್ರೀ ಚನ್ನಪ್ಪ ಮಲ್ಲಪ್ಪ ಗುಡದಿನ್ನಿ ೫೮

ಶ್ರೀ ಸಿದ್ದಗೊಂಡಪ್ಪ ಚನ್ನಪ್ಪ ಸಾವಳಗಿ ೫೯

ಶ್ರೀ ಶಂಕರಯ್ಯ ಮಲ್ಲಯ್ಯ ಪೂಜಾರಿ ೫೯

ಶ್ರೀ ದಾನಯ್ಯ ಗುರುಪಾದಯ್ಯ ಪೂಜಾರಿ ೬೦

ಶ್ರೀ ಈರಪ್ಪ ಖಾಟಿ ೬೧

ಶ್ರೀ ನಂದಬಸಪ್ಪ ಈಶ್ವರಪ್ಪ ಲಿಂಗದಳ್ಳಿ ೬೨

ಶ್ರೀ ಗುರುಪಾದಯ್ಯ ಚಂದ್ರಯ್ಯ ಮಠ ೬೩

- **ಅನುಬಂಧ**

ಛಾಯಾಚಿತ್ರಗಳು ೬೫

ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ ೬೮


---

## ಸಾರವಾಡದ ಸ್ವಾತಂತ್ರ್ಯಯೋಧರ ಒಂದು ಪರಿಚಯ

**ಪುಣ್ಯಭೂಮಿ ಹೇ ಭರತ ಮಾತೆ**
**ನಿನ್ನಡಿಗೆ ಶರಣು ಶರಣು**
**ನಿನಗಾಗಿ ದುಡಿದು ಬಲಿದಾನ ಗೈದು**
**ಅಮರರಾದ ಕೋಟಿ ಕೋಟಿ ದೇಶಭಕ್ತರಿಗೆ**
**ಭಾರತ ಸ್ವಾತಂತ್ರ್ಯ ಅಮೃತ**
**ಮಹೋತ್ಸವದ ಸಾವಿರದ ಶರಣು ಶರಣು ॥ ೧ ॥**

**ಗಂಡು ಮೆಟ್ಟಿನ ಕೆಚ್ಚೆದೆಯ**
**ಬೆಳವಲ ಬಯಲು ನಾಡಿದು**
**ವಿಜಯಪುರ ಡೋಣಿ ತೀರ**
**ಜಿಗುಟು ಫಲವತ್ತ ನೆಲದ**
**ಬಿಳಿಜೋಳ, ಗೋದಿ, ಸಿರಿಧಾನ್ಯ ಕಣಜವಣ್ಣ ॥ ೨ ॥**

**ಸತ್ಯ ಅಹಿಂಸೆ ತ್ಯಾಗ ಬಲಿದಾನ**
**ಸತ್ಯಾಗ್ರಹದ ಅಸ್ತ್ರ ಬಳಸಿದ**
**ಭಾರತ ಭಾಗ್ಯವಿಧಾತ ಪೂಜ್ಯ**
**ಮಹಾತ್ಮರ ಕರೆಗೆ ಓಗೊಟ್ಟು**
**ಸ್ವಾತಂತ್ರ್ಯ ಸಮರದಲಿ ಧುಮುಕಿದ ಸಾರವಾಡ**
**ವೀರಯೋಧರ ಸಾಹಸದ ಕಥೆ ಕೇಳಿರಣ್ಣಾ ॥ ೩ ॥**

ಭಾರತ ಸ್ವಾತಂತ್ರ್ಯ ಸಂಗ್ರಾಮದ ಅಮೃತ ಮಹೋತ್ಸವದ ಶುಭ ಸಂದರ್ಭದಲ್ಲಿ ಈ ದೇಶದ ಬಂಧ ವಿಮೋಚನೆಗಾಗಿ ಮಡಿದ ಮಹಾಕೋಟಿ ಕೋಟಿ ದೇಶಭಕ್ತರ ತ್ಯಾಗ ಬಲಿದಾನದ ಅಮರ ಕಥೆಗಳನ್ನು ಮೆಲಕು ಹಾಕುವುದರ ಜೊತೆಗೆ ಅವರೆಲ್ಲರಿಗೆ ಸಾವಿರದ ಶರಣು ಶರಣಾರ್ಥಿಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತೇನೆ.

## ಪ್ರಾಚೀನ ಭಾರತದ ಭವ್ಯ ಪರಂಪರೆ ಸಿರಿ ಸಂಪತ್ತು :

ಮುತ್ತು. ರತ್ನ. ವಜ್ರ ವೈಢೂರ್ಯಗಳನ್ನು ಬಳ್ಳದಿಂದ ಅಳೆದು ಮಾರಾಟ ಮಾಡುತ್ತಿದ್ದ ಪ್ರಾಚೀನ ಭಾರತದಲ್ಲಿ ಬಂಗಾರದ ಹೊಗೆ ಹಾಯುತ್ತಿತ್ತು. ಇಂದು ಜಗತ್ತಿನ ಹಲವಾರು ಮುಂದುವರೆದ ರಾಷ್ಟ್ರಗಳು ಸಾಂಸ್ಕೃತಿಕವಾಗಿ ಅಂಬೆಗಾಲಿಡುವ ಸಂದರ್ಭದಲ್ಲಿ ನಮ್ಮ ದೇಶವು ಸಿರಿ ಸಂಪತ್ತು, ಸಂಗೀತ, ಸಾಹಿತ್ಯ, ವೈಜ್ಞಾನಿಕ ಅವಿಷ್ಕಾರ, ಜ್ಞಾನಯೋಗದಲ್ಲಿ ಮುಂದುವರಿದ ರಾಷ್ಟ್ರವಾಗಿತ್ತು. ಅಂತೆ ವಿವಿಧ ದೇಶಗಳ ಮಹಾಜ್ಞಾನಿಗಳು ಮುತ್ಸದ್ದಿಗಳು ಪ್ರವಾಸಿಗರು ಭೆಟ್ಟಿಕೊಟ್ಟು ಪ್ರವಾಸಿ ಕಥನಗಳನ್ನು ಬರೆದಿದ್ದಾರೆ ಹಾಗೂ ಮಹಮ್ಮದ ಗಜನಿ, ಮಹಮ್ಮದ ಘೋರಿ ಮುಂತಾದ ದಾಳಿಕೋರರು, ಭವ್ಯ ಭಾರತದ ಸಿರಿ ಸಂಪತ್ತಿಗೆ ಆಸೆಪಟ್ಟು ಜೊಲ್ಲು ಸುರಿಸುತ್ತ ದಂಡೆತ್ತಿ ಬಂದು ನಮ್ಮ ಪವಿತ್ರ ದೇವಸ್ಥಾನಗಳನ್ನು ಕೆಡವಿ ಕೊಳ್ಳೆ ಹೊಡೆದು ಅಪಾರ ಸಂಪತ್ತನ್ನು ಲೂಟಿ ಹೊಡೆದದ್ದನ್ನು ಪ್ರಾಚೀನ ಭಾರತದ ಇತಿಹಾಸ ಸಾರಿ ಸಾರಿ ಹೇಳುತ್ತದೆ. ವಿದೇಶಿಯರು ನಮ್ಮ ಭೌತಿಕ ಸಂಪತ್ತನ್ನು ಲೂಟಿ ಹೊಡೆದರು. ನಮ್ಮ ಸಾಹಿತ್ಯ, ಸಂಸ್ಕೃತಿ, ಮಾನವೀಯ ಸಂಪತ್ತು ಸದೃಢವಾಗಿತ್ತು. ರಾಷ್ಟ್ರದ ಉತ್ತರ, ದಕ್ಷಿಣ, ಪೂರ್ವ, ಪಶ್ಚಿಮಗಳ ಎಲ್ಲೆಮೀರಿ ಸಮುದ್ರಗಳಾಚೆ ಏಕ ಚಕ್ರಾಧಿಪತ್ಯ ಸ್ಥಾಪಿಸಿದ ಚಕ್ರವರ್ತಿಗಳ ನಾಡಿನಲ್ಲಿ ಅವರ ದೌರ್ಬಲ್ಯಗಳನ್ನು ಮನಗಂಡ ಮಹಮ್ಮದಿಯರು ಹಂತ ಹಂತವಾಗಿ ಇಡೀ ಭರತಖಂಡವನ್ನು ತಮ್ಮ ಆಡಳಿತಕ್ಕೆ ಒಳಪಡಿಸಿಕೊಂಡರು. ತಮ್ಮ ಧರ್ಮ, ಭಾಷೆ, ಸಂಸ್ಕೃತಿಯನ್ನು ಒತ್ತಾಯವಾಗಿ ಬಡಭಾರತೀಯರ ಮೇಲೆ ಹೇರಲು ತೊಡಗಿದರು. ಆದರೂ ನಮ್ಮ ಸನಾತನ ಧರ್ಮದ ಅಂತರಜಲ ಗುಪ್ತಗಾಮಿನಿಯಾಗಿ ಹರಿದು ಇಂದಿಗೂ ನಮ್ಮೆಲ್ಲರ ನರನಾಡಿಗಳಲ್ಲಿ ಜಾಗ್ರತವಾಗಿದೆ.

ಹದಿನಾರನೆಯ ಶತಮಾನದಲ್ಲಿ ಪೂರ್ವದ ರಾಷ್ಟ್ರಗಳಲ್ಲಿ ಸಾಮ್ರಾಜ್ಯವಿಸ್ತರಿಸುವ ಹವ್ಯಾಸ ಬಲವಾಗಿ ಬೆಳೆದು ಯುರೋಪ ಖಂಡದ ಹಲವಾರು ಸಣ್ಣ ಸಣ್ಣ ರಾಷ್ಟ್ರಗಳು ಭಾರತದಲ್ಲಿ ದೊರೆಯುವ ಅಮೂಲ್ಯವಾದ ವಸ್ತುಗಳ ಅದರಲ್ಲೂ ಮೂಗರಳಿಸುವ, ಬಾಯಿ ರುಚಿ ಸೆಳೆಯುವ ಸಾಂಬಾರ ವಸ್ತುಗಳನ್ನು ಲೂಟಿ ಮಾಡುವ ಆಸೆಯಿಂದ ಇಲ್ಲಿ ಬೆಳೆಯುವ ವಸ್ತುಗಳನ್ನು ಕಡಿಮೆ ಬೆಲೆಗೆ ಕೊಂಡು ತಮ್ಮ ದೇಶಗಳಿಗೆ ಸಾಗಿಸಿ ಶ್ರೀಮಂತರಾಗಲು ಮುಂದಾದರು. ಇದಕ್ಕಾಗಿ ಭಾರತದಲ್ಲಿ ಆಳುತ್ತಿರುವ ಚಿಕ್ಕ ಚಿಕ್ಕ ಆಳರಸರಿಗೆ ವಿವಿಧ ಆಮಿಷಗಳನ್ನೊಡ್ಡಿ ತಮ್ಮ ವ್ಯಾಪಾರದ ಸುರಕ್ಷತೆಗಾಗಿ ಕೋಟೆ ಕೊತ್ತಲು ವಸಹಾತು, ಸಣ್ಣ ಪ್ರಮಾಣದ ಸೈನ್ಯದ ತುಕಡಿಗಳನ್ನು ಕಟ್ಟಿಕೊಂಡು ಕ್ರಮೇಣವಾಗಿ ಬಲಾಢ್ಯರಾಗಿ ಬೆಳೆಯುಹತ್ತಿದರು. ಇವರಲ್ಲಿ ಬ್ರಿಟೀಷರು, ಡಚ್ಚರು, ಪೋರ್ಚುಗೀಸರು, ಇನ್ನು ಹಲವಾರು ದೇಶದ ಸಾಮ್ರಾಜ್ಯಶಾಹಿಗಳು ಆಗಮಿಸಿದ್ದರು. ಇವರಲ್ಲಿಯೇ ಪೈಪೋಟಿ ಘರ್ಷಣೆಗಳು ನಡೆದು ಕೊನೆಯಲ್ಲಿ ಬ್ರಿಟೀಷರು ಮೇಲುಗೈ ಸಾಧಿಸಿ ಭಾರತದಲ್ಲಿ ನೆಲೆಯೂರಿದರು.



## ಭಾರತಕ್ಕೆ ಬ್ರಿಟೀಷರ ಆಗಮನ : ಆಡಳಿತ ಕೈವಶ

ಬೆಳೆಯುತ್ತಿರುವ ಬ್ರಿಟೀಷ ವ್ಯಾಪಾರ ಸಂಘಟನೆಗಳನ್ನು ಕಂಡ ಆಂಗ್ಲ ಸರ್ಕಾರ ತನ್ನ ನಿಯಂತ್ರಣ ಸಾಧಿಸಲು ಈಸ್ಟ್ ಇಂಡಿಯಾ ಕಂಪನಿಯನ್ನು ಸ್ಥಾಪಿಸಿ ಭಾರತದ ಎಲ್ಲ ವ್ಯವಹಾರಗಳನ್ನು ತನ್ನ ಕೈಗೆ ತೆಗೆದುಕೊಂಡಿತು. ಇಲ್ಲಿಯ ವ್ಯಾಪಾರದ ಜೊತೆಗೆ ಈ ದೇಶದ ಚಿಕ್ಕ ಚಿಕ್ಕ ಆಳರಸರ ನಡುವೆ ಇರುವ ದ್ವೇಷ ಅಸೂಯೆಗಳನ್ನು ಗುರುತಿಸಿ ಅವರವರ ಮಧ್ಯೆ ಜಗಳ ತಂದಿತ್ತು; ಒಬ್ಬರಿಗೆ ಸಹಾಯ ಮಾಡಿ ಇನ್ನೊಬ್ಬರನ್ನು ಬಗ್ಗು ಬಡಿದು ಮುಂದೆ ಅವರನ್ನು ಸೋಲಿಸಿ ತಮ್ಮ ಬೇಳೆ ಬಯಸಿಕೊಂಡು ರಾಜ್ಯ ಭ್ರಷ್ಟರನ್ನಾಗಿ ಮಾಡಿ ಮೋಸ, ವಂಚನೆ, ಅಪ್ರಮಾಣಿಕತನದಿಂದ ದಿನದಿಂದ ದಿನಕ್ಕೆ ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸಹತ್ತಿದರು. ಇಂಥ ಸಮಯದಲ್ಲಿ ಸ್ವಾಭಿಮಾನಿಗಳಾದ ಭಾರತದ ಹಲವಾರು ರಾಜ ಮಹಾರಾಜರು ಪ್ರತಿಭಟಿಸಿ ಸ್ವಾಭಿಮಾನದ ಯುದ್ಧ ಕೈಕೊಂಡು ವಿಜಯಿಗಳಾದದ್ದು ಉಂಟು. ಮುಂದೆ ಬ್ರಿಟೀಷರ ಕುತಂತ್ರತನದಿಂದ ಸೋತು ಸೆರೆಯಾದದ್ದನ್ನು ಇತಿಹಾಸ ಸಾರಿ ಸಾರಿ ಹೇಳುತ್ತಿದೆ. ಇಂಥ ಭಾರತ ಸ್ವಾತಂತ್ರ್ಯ ಸಂಗ್ರಾಮದ ಬೆಳ್ಳಿ ಚುಕ್ಕಿಯಾಗಿ ಇತಿಹಾಸ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ಬರೆಯಲ್ಪಟ್ಟ ಕರ್ನಾಟಕದ ವೀರ ಮಹಿಳೆಯರಾದ ಕಿತ್ತೂರು ವೀರರಾಣಿ ಚನ್ನಮ್ಮ, ಬೆಳವಡಿಯ ಮಹಾರಾಣಿ ಮಲ್ಲಮ್ಮ, ಉಳ್ಳಾಲದ ರಾಣಿ ಅಬ್ಬಕ್ಕ ಇನ್ನೂ ಹಲವಾರು ವೀರ ವನಿತೆಯರು ಪ್ರಾತಃಸ್ಮರಣೀಯರಾಗಿದ್ದಾರೆ.

## ಪ್ರಥಮ ಸ್ವಾತಂತ್ರ್ಯ ಸಂಗ್ರಾಮ :

**'ಕಿತ್ತೂರ ಚನ್ನಮ್ಮರಾಣಿ**
**ಕೆಳದಿ ಮಲ್ಲಮ್ಮರಾಣಿ**
**ಇವರ ಹೆಸರ ಕೇಳಿದರ**

**ಹತ್ತತ್ತೈತಿ ದಗಿ ದಗಕೀ**
**ಗೀಯ ಗೀಯ ಗೀಯ ॥'**

ಎಂದು ಇಂದಿಗೂ ಕರ್ನಾಟಕ ಜಾನಪದ ಲಾವಣಿಕಾರರು ಹಾಡಿ ಭಾರತೀಯರ ಹೃದಯದಲ್ಲಿ ವೀರ ವನಿತೆಯರ ಹೆಸರನ್ನು ಅಜರಾಮರವಾಗಿ ಉಳಿಸಿದ್ದಾರೆ. ಅಲ್ಲದೆ ಈ ಬ್ರಿಟೀಷರ ಆಡಳಿತದಿಂದ ಕೊಬ್ಬಿದ ಗ್ರಾಮೀಣ ಪ್ರದೇಶದ ಗೌಡ ಕುಲಕರ್ಣಿಯವರು ತಮ್ಮ ಗ್ರಾಮದ ಮುಗ್ಧ ರೈತರನ್ನು ತಮ್ಮ ಕೈಕೆಳಗಿನ ವಾಲೀಕಾರರನ್ನು ದೂಷಿಸುತ್ತಿರುವುದು ಸಾಮಾನ್ಯವಾಗಿತ್ತು. ಇವರ ದಬ್ಬಾಳಿಕೆ, ಅನ್ಯಾಯ, ಅತ್ಯಾಚಾರಗಳು ಅವ್ಯಾಹತವಾಗಿ ನಡೆದಾಗ ವೀರ ಸಿಂಧೂರ ಹುಲಿ ಲಕ್ಷ್ಮಣ ದನಿಯೆತ್ತಿ ತನ್ನ ಹೋರಾಟದ ಕೆಚ್ಚನ್ನು ಮೆರೆದ ಘಟನೆಗಳು ಜನಮನದಲ್ಲಿ ಹಚ್ಚ ಹಸಿರಾಗಿವೆ.

**ಪರಗಣಿ ಜತ್ತಿ ಉಮರಾಣಿ ದೇಶಕ್ಕೆ ವಾಯಿನಿ**
**ಆಳುವಂಥ ಧನಿ ಢಪಳೇ ಸರಕಾರ**
**ಜತ್ತಿ ಸಂಸ್ಥಾನ ಪೈಕಿ ಸಿಂಧೂರ ಒಂದ ಸಣ್ಣಹಳ್ಳಿ**
**ಸಿಂಧೂರಾಗ ಲಕ್ಷ್ಮಣ ಹುಟ್ಯಾನ**
**ಬಂಟನೆನಿಸ್ಯಾನ, ಕುಟಿಲ ಕುಲಕರ್ಣಿ**
**ಬಂಢ ಗೌಡರ ಸೊಕ್ಕು ಮುರಿದು**
**ಆಂಗ್ಲ ಸರಕಾರಕ ನಡಕ ಹುಟ್ಟಿಸ್ಯಾನ**
**ವೀರ ಸಿಂಧೂರ ಹುಲಿಯಾಗಿ**
**ಸ್ವಾಭಿಮಾನದ ಸ್ವಾತಂತ್ರ್ಯಕ್ಕಾಗಿ**
**ಹೋರಾಡಿ ನಾಡ ಜನರೆದೆಯಲಿ**
**ಸ್ವಾತಂತ್ರ್ಯ ಬೀಜ ಬಿತ್ಯಾನ**
**ಮಹಾಮಹಿಮನೆನಿಸ್ಯಾನ**
**ಗೀಯ ಗೀಯ ಹಾ ಗೀಯ ಗೀಯ ॥**

ಎಂದು ಕನ್ನಡ ಜನಪದ ಲಾವಣಿ ಹಾಡುಗಾರರು ಇಂದಿಗೂ ಈ ವೀರರ ಶೌರ್ಯ ಸಾಹಸಗಳನ್ನು ಕಣ್ಣಮುಂದೆ ಕಟ್ಟುವಂತೆ ವರ್ಣಿಸುತ್ತಿದ್ದಾರೆ. ಹೀಗೆ ಬ್ರಿಟೀಷರು ಹಂತ ಹಂತವಾಗಿ ಸಮಗ್ರ ದೇಶದ ಎಲ್ಲ ಪ್ರದೇಶಗಳನ್ನು ನುಂಗಿ ನೀರು ಕುಡಿಯುತ್ತ ತಮ್ಮ ವ್ಯಾಪಾರ ವಹಿವಾಟಿನ ಜೊತೆಗೆ ರಾಜ್ಯ ವಿಸ್ತಾರದಲ್ಲಿ ಮುನ್ನಡೆದಾಗ ಸಹಜವಾಗಿ ರಾಜ್ಯವನ್ನು ಕಳೆದುಕೊಂಡ ಹಲವಾರು ರಾಜ ಮಹಾರಾಜರು ತಮ್ಮ ಕೈಲಾದಷ್ಟು ಪ್ರತಿರೋಧ ಒಡ್ಡಿದರು. ದೈತ್ಯ



ಆಂಗ್ಲರ ಕುಟಿಲ ಕಾರಸ್ಥಾನದಿಂದ ಹಾಗೂ ತಮ್ಮ ತಮ್ಮಲ್ಲಿ ಒಕ್ಕಟ್ಟು ಇಲ್ಲದ್ದರಿಂದ ತಾತ್ಕಾಲಿಕವಾಗಿ ವಿಜಯ ಸಾಧಿಸಿದರೂ ಮುಂದೆ ತಮ್ಮ ರಾಜ್ಯಗಳನ್ನು ಕಳೆದುಕೊಂಡು ಒಳಗೊಳಗೆ ಅಸಹಾಯಕರಾಗಿ ತಳಮಳಿಸುತ್ತಿದ್ದರು. ತಾವೆಲ್ಲ ಸ್ವತಂತ್ರರಾಗಲು ಒಂದು ಅವಕಾಶಕ್ಕಾಗಿ ಹಲ್ಲು ಮಸೆಯುತ್ತಿದ್ದರು. ಇಂಥ ಸಂದರ್ಭದಲ್ಲಿ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಒಂದು ಮೈಲಿಗಲ್ಲೆಂದು ಹೇಳಬಹುದು. ಇದನ್ನು ಆಂಗ್ಲರು ಸಿಪಾಯಿದಂಗೆ ಎಂದು ಕರೆದರು. ಇದೇ ರೀತಿ ಭಾರತೀಯರಲ್ಲಿ ಸ್ವಾತಂತ್ರ್ಯದ ಅರಿವು ಹಂತ ಹಂತವಾಗಿ ಮೂಡಹತ್ತಿತು. ಕನ್ನಡ ಜನಪದ ತ್ರಿಪದಿಗಳ ಚಕ್ರವರ್ತಿ ಸರ್ವಜ್ಞ ಸ್ವಾತಂತ್ರ್ಯವನ್ನು ಕುರಿತು ಈ ರೀತಿ ನುಡಿದಿದ್ದಾನೆ. ಅವನ ಸ್ವಾತಂತ್ರ್ಯದ ಪ್ರೇಮ ಎಷ್ಟು ಸುಂದರವಾಗಿ ಮೂಡಿ ಬಂದಿದೆ.

**ತಂತಿ ವಾದ್ಯವು ಲೇಸು । ಮಂತ್ರಿಯ ಕೇಳೆ ಲೇಸು**
**ಯಂತ್ರವಾಹಕನ ದಯೆ ಲೇಸು । ಜಗದಿ**
**ಸ್ವಾತಂತ್ರ್ಯವೇ ಲೇಸು ಸರ್ವಜ್ಞ॥**

ಈ ಜಗತ್ತಿನಲ್ಲಿ ಯಾವುದೇನೇ ಇರಲಿ ಸರ್ವತಂತ್ರ ಸ್ವಾತಂತ್ರ್ಯವೇ ಮೇಲೆಂದು ವರ್ಣಿಸಿರುವುದನ್ನು ಕಾಣುತ್ತೇವೆ.

ಸಾಂಬಾರ ಪದಾರ್ಥ, ಬಟ್ಟೆಗಳ ವ್ಯಾಪಾರದ ನೆಪದಲ್ಲಿ ಭಾರತಕ್ಕೆ ಬಂದ ಬ್ರಿಟೀಷರು ಇಲ್ಲಿಯ ಸಂಸ್ಥಾನಿಕರ ದೌರ್ಬಲ್ಯಗಳಿಂದಾಗಿ ಮತ್ತು ಅನೈಕ್ಯತೆಯಿಂದಾಗಿ ಒಡೆದು ಆಳುವ ಧೋರಣೆಯನ್ನು ಅನುಸರಿಸಿ ಭಾರತದಲ್ಲಿ ಭದ್ರವಾಗಿ ನೆಲೆಯೂರಿ ಸುಮಾರು ೩೫೦ ವರ್ಷಗಳ ಕಾಲ ದೇಶವನ್ನಾಳಿದರು. ಭಾರತೀಯರ ಬಡತನ ಅಜ್ಞಾನ ಅನಾರೋಗ್ಯ ಮೂಢನಂಬಿಕೆಗಳು ಒಂದು ಕಡೆಯಾದರೆ, ಪ್ರಕೃತಿಯ ಪ್ರಕೋಪದಿಂದುಂಟಾದ ಬರಗಾಲ, ಅತಿವೃಷ್ಟಿ, ಅನಾವೃಷ್ಟಿಗಳು, ಹಸಿವು, ರೋಗ ರುಜಿನಗಳು, ಬ್ರಿಟೀಷರಿಗೆ ವರದಾನವಾಗಿ ದೌರ್ಜನ್ಯ, ದಬ್ಬಾಳಿಕೆಗೆ ಕಾರಣವಾದವು. ಭಾರತೀಯರನ್ನು ಶೋಷಿಸಲು ಪ್ರಾರಂಭಿಸಿದರು. ಭಾರತೀಯರ ಪರಿಸ್ಥಿತಿಯ ಲಾಭವನ್ನು ಪಡೆಯಲು ತೊಡಗಿದ ಬ್ರಿಟೀಷರು ದೇಶದ ಸಂಪತ್ತನ್ನೆಲ್ಲ ಲೂಟಿ ಮಾಡಿ ತಮ್ಮ ದೇಶಕ್ಕೆ ಒಯ್ಯುತ್ತಿದ್ದರು. ಅತ್ಯಂತ ಅಮಾನುಷವಾಗಿ ಭಾರತೀಯರನ್ನು ದುಡಿಸಿಕೊಂಡು ಅವರ ಬೆವರಿನ ಫಲವನ್ನು ಬಳಸಿಕೊಂಡು ತಮ್ಮ ರಾಷ್ಟ್ರದ ಅಭಿವೃದ್ಧಿಯನ್ನು ಸಾಧಿಸಿದರು. ಸುಮಾರು ೩೦೦ ವರ್ಷಗಳ ಕಾಲ ನಮ್ಮ ದೇಶದ ಸಂಪತ್ತನ್ನು ಅಪಹರಿಸಿ ಸೂರ್ಯ ಮುಳುಗದ ಸಾಮ್ರಾಜ್ಯವನ್ನು ಕಟ್ಟಿದುದು ಇತಿಹಾಸ.

ಆಂಗ್ಲರ ದಬ್ಬಾಳಿಕೆ, ದೌರ್ಜನ್ಯ, ಶೋಷಣೆಗೆ ಒಳಗಾದ ಭಾರತೀಯರಾದ ನಾವು ಗುಲಾಮರಂತಾಗಿ ನಮ್ಮ ದೇಶದಲ್ಲಿ ನಾವೇ ಹೀನಾಯವಾಗಿ ಬದುಕುವ ನಮ್ಮ ಬದುಕು ಶೋಚನೀಯವಾಗಿತ್ತು. ನಮ್ಮ ದೇಶದ ಸಂಪತ್ತು ನಮಗೆ ದೊರಕದೆ ಅದು ಪರಕೀಯರ ವಶವಾಗುತ್ತಿರುವುದನ್ನು ಕಂಡ ಕೆಲವು ಪ್ರಜ್ಞಾವಂತ ಭಾರತೀಯರಲ್ಲಿ ಜಾಗೃತಿಯ ಅರಿವು ಮೂಡಲಾರಂಭಿಸಿತು. ಅರಿವೇ ಗುರು ಎಂಬಂತೆ ತಮ್ಮ ಅರಿವಿನ ಒಳ ಕುದಿತವನ್ನು ಹೊರ ಹಾಕುವುದಕ್ಕಾಗಿ ಅವರು ದೇಶದ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಆರಂಭಿಸಿದರು. ಧಾರ್ಮಿಕ, ಸಾಮಾಜಿಕ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಅರಿವುಗಳನ್ನು ಮೂಡಿಸುವ ಮತ್ತು ಜನರನ್ನು ಬಡಿದೆಬ್ಬಿಸುವ ಕಾರ್ಯವನ್ನು ಬೇರೆ ಬೇರೆ ಸ್ವರೂಪದಲ್ಲಿ, ಬೇರೆ ಬೇರೆ ಸಂದರ್ಭಗಳಲ್ಲಿ, ಬೇರೆ ಬೇರೆ ವ್ಯಕ್ತಿಗಳಿಂದ ವಿಧಾನವಾಗಿ ಹುಟ್ಟಿಕೊಂಡವು. ಈ ಜಾಗೃತಿಯ ಅರಿವು ಸ್ವಾತಂತ್ರ್ಯ ಸಂಗ್ರಾಮಕ್ಕೆ ಬುನಾದಿಯಾಗಿ ದೇಶವನ್ನು ದಾಸ್ಯ ಸಂಕೋಲೆಯಿಂದ ಮುಕ್ತಗೊಳಿಸಲು ಸಾಧ್ಯವಾಯಿತು.

## ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಮೊದಲಿಗರು ಹಾಗೂ ಗಾಂಧೀಯುಗ :

ಈ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಾನ್ ದೇಶಭಕ್ತ ರಾಷ್ಟ್ರ ನಾಯಕರಾದ 'ಸ್ವರಾಜ್ಯವೇ ನನ್ನ ಜನ್ಮಸಿದ್ಧ ಹಕ್ಕು' ಎಂದ ಲೋಕಮಾನ್ಯ ಬಾಲಗಂಗಾಧರ ತಿಲಕರು, ಬ್ರಿಟೀಷರಿಗೆ ಸಿಂಹ ಸ್ವಪ್ನರಾಗಿದ್ದ ನೇತಾಜಿ ಸುಭಾಸಚಂದ್ರ ಭೋಸ, ವೀರಸಾವರಕರ, ದೇಶಕ್ಕಾಗಿ ನಗು ನಗುತ ನೇಣುಗಂಬವನೇರಿದ ಕ್ರಾಂತಿಕಾರಿಗಳಾದ ಭಗತ್‌ಸಿಂಗ್, ಸುಖದೇವ, ರಾಜಗುರು, ಚಂದ್ರಶೇಖರ ಆಜಾದ ಇವರ ತ್ಯಾಗ, ಬಲಿದಾನ, ಶೌರ್ಯ, ಪರಾಕ್ರಮಗಳನ್ನು ಸ್ಮರಿಸುವುದು ನಮ್ಮೆಲ್ಲರ ಕರ್ತವ್ಯ. ಲೋಕಮಾನ್ಯ ಬಾಲಗಂಗಾಧರ ತಿಲಕರವರು ಪ್ರತಿಯೊಬ್ಬರ ಮನೆಯ ಮಾಡಿನಲ್ಲಿ ಪೂಜಿಸಲ್ಪಡುವ ಗಣೇಶನನ್ನು ಸಾರ್ವಜನಿಕ ವೇದಿಕೆಗೆ ತಂದು ಸಾಂಸ್ಕೃತಿಕ ಕಾರ್ಯಕ್ರಮಗಳ ಜೊತೆಗೆ ಬ್ರಿಟೀಷರ ಅನ್ಯಾಯ, ದಬ್ಬಾಳಿಕೆಗಳನ್ನು ಜನರಲ್ಲಿ ಮನವರಿಕೆ ಮಾಡಿ ಸ್ವಾತ್ರಂತ್ರ್ಯದ ಕಿಚ್ಚನ್ನು ಬಿತ್ತಿದರು. ಇದೇ ಸಂದರ್ಭದಲ್ಲಿ ಇಂಗ್ಲೆಂಡದಿಂದ ಬಂದ ಎ.ಓ.ಹ್ಯೂಮ್ ಎಂಬ ಅಧಿಕಾರಿಯು ಭಾರತದಲ್ಲಿ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಿಸಿ ಈ ದೇಶದಲ್ಲಿಯೇ ನೆಲೆ ನಿಂತರು. ಸ್ವಾತಂತ್ರ್ಯಕ್ಕಾಗಿ ಅಲ್ಲಲ್ಲಿ ಹೋರಾಡುವ ವ್ಯಕ್ತಿಗಳನ್ನು ಕಂಡು ಕಳವಳಗೊಂಡರು. ತಿಲಕರಂತ ಮಹಾ ಮೇಧಾವಿಗಳನ್ನು ಕಂಡು ನೀವೆಲ್ಲ ಬಿಡಿ ಬಿಡಿಯಾಗಿ ಹೋರಾಡಿದರೆ ಸ್ವಾತಂತ್ರ್ಯ ಲಭಿಸದು.



'ಹತ್ತೂರು ಹಲಕಡ್ಡಿ ಒಬ್ಬರ ತಲೆಹೊರಿ' ಎಂಬ ಗಾದೆಯಂತೆ ಒಕ್ಕಟ್ಟೆ ಬಲ ಎಂದು ಅದಕ್ಕೆ ಒಂದು ಸಂಸ್ಥೆಯನ್ನು ಕಟ್ಟಿ ಎಂದು ಹೇಳಿ ನ್ಯಾಶನಲ್ ಕಾಂಗ್ರೆಸ್ ಸಂಸ್ಥೆಯನ್ನು ಕಟ್ಟಲು ಸೂಚಿಸಿದರು. ಅಂತೆ ಮುಂದೆ ಈ ಸಂಸ್ಥೆ ದೇಶವ್ಯಾಪಿ ತಿಲಕರ ನೇತ್ರತ್ವದಲ್ಲಿ ಸ್ವಾತಂತ್ರ್ಯದ ಕನಸು ನನಸುಗೊಳಿಸಿತು. ಇದೇ ಸಂದರ್ಭದಲ್ಲಿ ಮಹಾತ್ಮಾ ಗಾಂಧೀಜಿಯವರು ಇಂಗ್ಲೆಂಡದಲ್ಲಿ ಬ್ಯಾರಿಸ್ಟರ್ ಪದವಿ ಪಡೆದು ಭಾರತಕ್ಕೆ ಬಂದು ತಮ್ಮ ಸತ್ಯ, ಅಹಿಂಸೆ, ಸತ್ಯಾಗ್ರಹದ ಅಸ್ತ್ರವನ್ನು ಪ್ರಯೋಗ ಮಾಡಲು ದಕ್ಷಿಣ ಆಫ್ರಿಕಾಕ್ಕೆ ಹೋಗಿ ಅಲ್ಲಿ ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಭಾರತಕ್ಕೆ ಮರಳಿ ಬರುತ್ತಾರೆ. ಅಷ್ಟೊತ್ತಿಗೆ ಬಾಲ ಗಂಗಾಧರ ತಿಲಕರವರು ಕಾಲವಾಗಿದ್ದರಿಂದ ಕಾಂಗ್ರೆಸ್ ಅಧ್ಯಕ್ಷ ಸ್ಥಾನವನ್ನು ತುಂಬಿದ ಗಾಂಧೀಜಿಯವರು ಕಾರ್ಯಪ್ರವೃತ್ತರಾಗುತ್ತಾರೆ. ಆಗ ಸ್ವಾತಂತ್ರ್ಯ ಸಮರದ ಗಾಂಧೀಯುಗ ಪ್ರಾರಂಭವಾಗುತ್ತದೆ.

**'ಖಾದಿಯ ಉಟ್ಟಾರ । ಖಾದಿಯ ತೊಟ್ಟಾರ**
**ಕಾಂಗ್ರೆಸ್ ಪಕ್ಷ ಮುನ್ನಡೆಸ್ಯಾರ । ಅವರು**
**ಮಹಾತ್ಮಾ ಗಾಂಧೀಯವರ ॥'**

ಎಂದು ಜನಪದ ಗರತಿಯರು ಪ್ರತಿನಿತ್ಯ ಬೆಳಗಿನ ಜಾವದಲ್ಲಿ ಕೋಳಿಕೂಗುವ ಮುನ್ನ ಕಲ್ಲಿಗೆ ಮುಕ್ಟಾಕಿ ಬೀಸುತ್ತ ಗಾಂಧೀಜಿಯವರ ಈ ಹಾಡನ್ನು ಎಲ್ಲ ಮನೆಗಳಲ್ಲಿ ಹಾಡಿ ಜನರ ಮನದಲ್ಲಿ ಸ್ವಾತಂತ್ರ್ಯ ಸಮರದ ಬೀಜ ಬಿತ್ತುತ್ತಿದ್ದರು. ಬಾಪೂಜಿಯವರು ಇಡೀ ಭಾರತದ ಮೂಲೆ ಮೂಲೆಗಳಲ್ಲಿ ಸಂಚರಿಸಿ ಜನಜಾಗೃತಿ ಮಾಡಿದರು. ಉಪ್ಪಿನ ಸತ್ಯಾಗ್ರಹ, ಚಲೇಜಾವ ಚಳುವಳಿ, ಮಾಡು ಇಲ್ಲವೇ ಮಡಿ ಮುಂತಾದ ವಿದಾಯಕ ಚಳುವಳಿಗಳನ್ನು ಕೈಕೊಂಡರು ಜನಜಾಗೃತಿಗೆ ಮುಂದಾದರು. ಮಹಾತ್ಮಾ ಗಾಂಧೀಜಿಯವರ ಕರೆಗೆ ಭಾರತ ದೇಶದ ಜನಸಾಮಾನ್ಯರು ಸ್ವಾತಂತ್ರ್ಯ ಅಂದೋಲನದಲ್ಲಿ ಶಾಲಾ ಕಾಲೇಜು ವಿದ್ಯಾರ್ಥಿಗಳು ಶಿಕ್ಷಣ ತೊರೆದರು. ಇತರರು ತಮ್ಮ ಮನೆ ಮಾರು ಅಂಗಡಿ ಮುಂಗಟ್ಟುಗಳನ್ನು, ಹೆಂಡಿರು ಮಕ್ಕಳನ್ನು ತೊರೆದು ಸ್ವಾತಂತ್ರ್ಯ ಆಂದೋಲನದಲ್ಲಿ ಜಾತಿ ಮತ ಪಂಥವೆನ್ನದೆ ಧುಮುಕಿದರು. ಸ್ವಾತಂತ್ರ್ಯ ಹೋರಾಟ ಜನಾಂದೋಲನವಾಗಿ ಮಾರ್ಪಟ್ಟಿತು. ದೇಶದ ಸ್ವಾತಂತ್ರ್ಯ ಮೊದಲು ಆ ಮೇಲೆ ಕುಟುಂಬ ಎಂಬ ಸಂಕಲ್ಪದೊಂದಿಗೆ ಹಗಲಿರುಳು ತಾಯ್ನಾಡಿಗಾಗಿ ಹೋರಾಡಲು ಮುಂದಾದರು.

## ಅಂದಿನ ಮೈಸೂರು ಕರ್ನಾಟಕದ ಇತರೆಡೆ ಸ್ವಾತಂತ್ರ್ಯ ಚಳುವಳಿ :

ಅದರಂತೆ ಕರ್ನಾಟಕದಲ್ಲಿ ಆಲೂರು ವೆಂಕಟರಾಯರು ಮುದವೀಡು ಕೃಷ್ಣರಾಯರು, ಚಿಕ್ಕೋಡಿ ತಮ್ಮಣ್ಣಪ್ಪನವರು ಇನ್ನೂ ಸಾವಿರಾರು ಜನ ಸ್ವಾತಂತ್ರ್ಯ ಹೋರಾಟಗಾರರ ನೇತೃತ್ವದಲ್ಲಿ ಮಹಾತ್ಮಾಜಿಯವರ ಕರೆಗೆ ಓಗೊಟ್ಟು ಚಳುವಳಿಯಲ್ಲಿ ಜನಮನವನ್ನು ಹುರಿದುಂಬಿಸಿ ಮುನ್ನಡೆದರು. ಇಂಥ ಸಂದರ್ಭದಲ್ಲಿ ಮೈಸೂರು ಪ್ರಾಂತ್ಯದ ಶಿವಪುರದಲ್ಲಿ ೧೯೩೮ರಲ್ಲಿ 'ಶಿವಪುರ ಧ್ವಜ ಸತ್ಯಾಗ್ರಹ' ನಡೆದು ಸಾವಿರಾರು ಜನ ಹುತಾತ್ಮರಾದರು. ಶಿವಮೊಗ್ಗ ಜಿಲ್ಲೆಯ ಈಸೂರಿನಲ್ಲಿ ಅಲ್ಲಿಯ ದೇಶಾಭಿಮಾನಿಗಳು 'ಏಸೂರು ಕೊಟ್ಟರು ಈಸೂರು ಬಿಡೆವು' ಎಂಬ ಘೋಷಣೆಯೊಂದಿಗೆ 'ಈಸೂರಿನ ಸ್ವಾತಂತ್ರ್ಯ ಘೋಷಣೆ' ಬ್ರಿಟೀಷರ ಜಂಘಾಬಲವನ್ನು ಉಡುಗಿಸಿತು. ಕೋಲಾರ ಜಿಲ್ಲೆಯ ವಿದುರಾಶ್ವತ್ಥ ಗ್ರಾಮದ ಘಟನೆಯು 'ಕರ್ನಾಟಕದ ಜಾಲಿಯನ್ ವಾಲಾಬಾಗ' ಎಂದು ೧೯೩೮ರಲ್ಲಿ ಸಾವಿರಾರು ಸ್ವಾತಂತ್ರ್ಯ ಸೇನಾನಿಗಳು ಹುತಾತ್ಮರಾದರು. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಶ್ರೀ ಚನ್ನಪ್ಪ ವಾಲಿ ಅಂದಿನ ವಿಜಯಪುರ ಜಿಲ್ಲೆಯ ಇಂದಿನ ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಹಲಗಲಿ ಗ್ರಾಮದ ಹಲಗಲಿ ಬೇಡರ ಸತ್ಯಾಗ್ರಹ, ವಿಜಯಪುರ ಜಿಲ್ಲೆಯ ಸಾರವಾಡ ಗ್ರಾಮದ ದೊಡ್ಡವಾಲಿಯವರೆಂದೇ ಪ್ರಸಿದ್ಧರಾದ ಸ್ವಾತಂತ್ರ್ಯಯೋಧ ಶ್ರೀ ಗಿರಿಮಲ್ಲಪ್ಪ ಶಿವಪ್ಪ ವಾಲಿ ಇನ್ನು ಮುಂತಾದ ಘಟನೆಗಳನ್ನು ಕರ್ನಾಟಕದ ಹರಿದು ಹಂಚಿಹೋದ ಪ್ರದೇಶಗಳಲ್ಲಿ ಸ್ವಾತಂತ್ರ್ಯ ಚಳುವಳಿ ಬ್ರಿಟೀಷರ ಆಡಳಿತ ಯಂತ್ರವನ್ನು ಅಲುಗಾಡಿಸಲು ಸನ್ನದ್ಧವಾಯಿತು. ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ಈ ದೇಶಭಕ್ತರು ಬ್ರಿಟೀಷರಿಗೆ ಸಿಂಹಸ್ವಪ್ನರಾದರು.

ಸ್ವಾತಂತ್ರ್ಯ ಸಂಗ್ರಾಮದ ಅಂತಿಮ ಘಟ್ಟದಲ್ಲಿ ಅಖಂಡ ವಿಜಯಪುರ ಜಿಲ್ಲೆಯ ದೇಶಾಭಿಮಾನಿಗಳು ಹಿಂದೆ ಬೀಳಲಿಲ್ಲ. ಬದಾಮಿ ಚಾಲುಕ್ಯರು, ಆದಿಲ್‌ಶಾಹಿಗಳು, ವಿಜಯನಗರದರಸರು ಆಳಿ ಹೋದ ಈ ನಾಡಿನಲ್ಲಿ ಕನ್ನಡ ವಚನ ಸಾಹಿತ್ಯಕ್ಕೆ ಹೊಸ ಭಾಷ್ಯೆ ಬರೆದ ಭಕ್ತಿಭಂಡಾರಿ ಬಸವಣ್ಣ, ಉಗ್ರ ಶರಣ ಮಡಿವಾಳ ಮಾಚಿದೇವ, ನೂಲಿಯ ಚಂದಯ್ಯ ಇನ್ನೂ ಹಲವಾರು ವಚನಕಾರರು ಜನಿಸಿದ ಈ ನಾಡು ಅತಿವೃಷ್ಟಿ, ಅನಾವೃಷ್ಟಿ ಹಾಗೂ ಅಕಾಲ ವೃಷ್ಟಿಯಿಂದ ಅನಾನುಕೂಲ ಪರಿಸ್ಥಿತಿಯನ್ನು ಎದುರಿಸಿದರೂ ಸಹ ದೇಶಭಕ್ತಿಯ ವಿಷಯದಲ್ಲಿ ಈ ನಾಡಿನ ಜನ ಐಕ್ಯಮತ್ತೆಯನ್ನು ಸಾಧಿಸಿದ್ದಾರೆ. ಅಖಂಡ ಕರ್ನಾಟಕ ಹಾಗೂ ಅಖಂಡ ವಿಜಯಪುರ ಜಿಲ್ಲೆಯ ಜನರ ಮನೋಭಾವ



ಸ್ವಾತಂತ್ರ್ಯ ಪ್ರೇಮ ಹೇಗಿತ್ತು ಎಂಬುದನ್ನು ಈ ಕೆಳಗಿನ ಬದಾಮಿ ಕಪ್ಪೆ ಅರಭಟ್ಟನ ಶಾಸನ ವಿಶದೀಕರಿಸುತ್ತದೆ.

**'ಸಾಧುಗೆ ಸಾಧು । ಮಾಧುರ್ಯಂಗೆ ಮಾಧುರ್ಯಂ**
**ಬಾದಿಪ್ಪ ಕಲಿಗೆ ಕಲಿಯುಗ । ವಿಪರೀತನ್**
**ಮಾಧವನೀತನ್ ಪೆರನಲ್ಲ ॥'**

ವಿಜಯಪುರದ ಜನ ಒಳ್ಳೆಯವರಿಗೆ ನಾವು ಒಳ್ಳೆಯವರು, ಕೆಟ್ಟವರಿಗೆ ಕೆಟ್ಟವರು ಎಂದು ವರ್ತಿಸುತ್ತ ಇಲ್ಲಿಯ ಜನ ಸ್ವಾತಂತ್ರ್ಯಕ್ಕಾಗಿ ವೀರಾವೇಶದಿಂದ ಸಿಂಹಗಳಂತೆ ಹೋರಾಡುವ ಮನೋಭಾವದವರೆಂದು ಕನ್ನಡದ ಪ್ರಾಚೀನ ಕಾವ್ಯ ಪ್ರಕಾರವಾದ ತ್ರಿಪದಿಯಲ್ಲಿ ವರ್ಣಿಸಿರುವುದು ವಿದಿತವಾಗುತ್ತದೆ. ಹಾಗೆ ಅಖಂಡ ವಿಜಯಪುರ ಜಿಲ್ಲೆಯ ದೇಶಭಕ್ತರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು.

## ವಿಜಯಪುರ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಸಂಗ್ರಾಮ

ವಿಜಯಪುರ ಜಿಲ್ಲೆಯ ಕಾಂಗ್ರೆಸ್ ಸಂಸ್ಥೆಯಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ನಿಷ್ಠಾವಂತ ಧುರೀಣರಲ್ಲಿ ಮುಖ್ಯವಾಗಿ ಶ್ರೀ ರಾಜಾರಾಮ ದುಬೆ, ಶ್ರೀ ಮುರಿಗೆಪ್ಪ ಸುಗಂಧಿ, ಶ್ರೀ ಚನ್ನಬಸಪ್ಪ ಅಂಬಲಿ, ಶ್ರೀ ಶರಣಯ್ಯ ವಸ್ತ್ರದ, ಶ್ರೀ ಗುಲಾಬಚಂದ ಶಹಾ, ಪತ್ರಕರ್ತ ಶ್ರೀ ಮೋರೆ ಹಣಮಂತರಾಯರು, ಶ್ರೀ ಗಿರಮಲ್ಲಪ್ಪ ವಾಲಿ ಇನ್ನೂ ಮುಂತಾದ ಮಹನೀಯರು ನೇರವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು. ಪರಮ ಪೂಜ್ಯ ಬಂಥನಾಳ ಶ್ರೀ ಸಂಗನಬಸವ ಶಿವಯೋಗಿಗಳು, ಕರ್ನಾಟಕದ ಗಾಂಧಿ ಶ್ರೀ ಹರ್ಡೆಕರ ಮಂಜಪ್ಪನವರು, ವಚನ ಪಿತಾಮಹ ವಚನ ಗುಮ್ಮಟ ಎಂದು ಕರೆಯಲ್ಪಡುವ ಡಾ॥ ಫ.ಗು.ಹಳಕಟ್ಟಿಯವರು ಸಹ ತಮ್ಮ ಬದುಕಿನಲ್ಲಿ ಸಮಗ್ರ ಖಾದಿಧಾರಿಗಳಾಗಿ ಮಹಾತ್ಮಾಗಾಂಧೀಜಿಯವರ ವಿಚಾರಗಳನ್ನು ಅಳವಡಿಸಿಕೊಂಡು ಕೀರ್ತನ, ಪತ್ರಿಕಾ ಮಾಧ್ಯಮಗಳ ಮೂಲಕ ಸ್ವಾತಂತ್ರ್ಯ ಸಂಗ್ರಾಮದ ಕಹಳೆ ಮೊಳಗಿಸಿದರು.

ವಿಜಯಪುರ ಜಿಲ್ಲೆಯ ಪ್ರತಿಯೊಂದು ಗ್ರಾಮಗಳಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಬಿರುಗಾಳಿ ಜೋರಿನಿಂದ ಬೀಸಲಾರಂಭಿಸಿತು. ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ಉಪ್ಪಿನ ಸತ್ಯಾಗ್ರಹ, ಚಲೇಜಾವ್ ಚಳುವಳಿ, ವೈಯಕ್ತಿಕ ಸತ್ಯಾಗ್ರಹಗಳಲ್ಲಿ ಗ್ರಾಮೀಣ ಜನರು ಭಾಗವಹಿಸಲು ಮುಂದಾದರು. ಅಂಥವರಲ್ಲಿ ವಿಜಯಪುರ ಜಿಲ್ಲೆಯ ವಿಜಯಪುರ ತಾಲೂಕಿನ ಅಂದರೆ ಇಂದಿನ ಬಬಲೇಶ್ವರ

ತಾಲೂಕಿನ ಸಾರವಾಡ ಗ್ರಾಮದಲ್ಲಿ ಹದಿಮೂರು ಜನ ಸ್ವಾತಂತ್ರ್ಯ ಯೋಧರು, ನಾಗಠಾಣದಲ್ಲಿ ೭ ಜನರು, ಬಿಜ್ಜರಗಿ ಗ್ರಾಮದಲ್ಲಿ ಬಾಬು ಮತ್ತು ಸಾಬು ಎಂಬ ಇಬ್ಬರು, ಬಾಗೇವಾಡಿ ತಾಲೂಕಿನ ಮಸಬಿನಾಳದಲ್ಲಿ ೨೦ ಜನರು, ಮನಗೂಳಿಯಲ್ಲಿ ಇಬ್ಬರು, ಚಿಕ್ಕರೂಗಿಯಲ್ಲಿ ೧೯ ಜನರು ಹಾಗೂ ಆಲಮೇಲ, ಕಲಕೇರಿ, ಪಡಗಾನೂರ, ಬೇನಾಳ, ಇಂಡಿ, ಹಲಸಂಗಿ, ದೇವರಹಿಪ್ಪರಗಿ, ಕೊಂಡಗೂಳಿ, ಅರ್ಜುಣಗಿ ಇನ್ನೂ ಹಲವಾರು ಗ್ರಾಮಗಳಲ್ಲಿ ಚಲೇಜಾವ್ ಚಳುವಳಿಗಳಲ್ಲಿ, ವೈಯಕ್ತಿಕ ಸತ್ಯಾಗ್ರಹ, ಅಂಚೆ ಕಚೇರಿ ಲೂಟಿ, ತಾರತಂತಿ ಕತ್ತರಿಸುವುದು, ರೇಲ್ವೆ ಸ್ಟೇಶನ್ ಸುಡುವ ಮುಂತಾದ ಸತ್ಯಾಗ್ರಹ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು.

ಪಿಸುಮಾತಿನ ಪ್ರೇಮದ ಸ್ಮಾರಕ ಭವ್ಯ ದಿವ್ಯ ವಾಸ್ತು ಕಟ್ಟಡ ಗೋಲಗುಮ್ಮಟ ನಾಡು ವಿಜಯಪುರವನ್ನು ಕುರಿತು

**ಪಂಚನದಿಗಳು ಹರಿದಿಹ ನಾಡು**  
**ಸೂಫಿ ಸಂತರ ಶರಣರ ದಾಸರ ಬೀಡು**  
**ಸಂಗೀತ ಸಾಹಿತ್ಯ ಲಲಿತಕಲೆಗಳ ತವರೂರು**  
**ಸರ್ವಧರ್ಮಗಳ ಭಾವೈಕ್ಯದ ಗೂಡು**  
**ವಾಸ್ತುಶಿಲ್ಪ ಭವ್ಯ ಸ್ಮಾರಕಗಳ ನೆಲೆನಾಡು**  
**ಕನ್ನಡ ನಾಡಿನ ಮುಕುಟಮಣಿ**  
**ಸಂತ ಮಹಾಂತರ ಗಂಡುಗಲಿಗಳ ನಾಡು**  
**ವಿಶ್ವವಿಖ್ಯಾತಿಯ ಗುಮ್ಮಟನಗರ ವಿಜಯಪುರ ॥**

ಇಂಥ ವಿಜಯಪುರ ಜಿಲ್ಲೆಯ ಜನ ಆದಿಕಾಲದಿಂದಲೂ ಹಲವಾರು ರಾಜಮಹಾರಾಜರ, ಆದಿಲ್‌ಶಾಹಿಗಳ ಮರಾಠರ ಆಡಳಿತಯುದ್ಧ, ಕ್ಷಾಮ, ನೆರೆಹಾವಳಿ ಕಂಡ ಜನ ಮಹಾತ್ಮಾಗಾಂಧೀಜಿಯವರ 'ಬ್ರಿಟೀಷರೇ ಭಾರತ ಬಿಟ್ಟು ತೊಲಗಿ' ಎಂಬ ಸ್ವಾತಂತ್ರ್ಯ ಚಳುವಳಿಯಲ್ಲಿ ತಮ್ಮ ತನು ಮನ ಧನವನ್ನಿತ್ತು ಧುಮುಕಿದರು.

ಪ್ರಸ್ತುತ ಈ ಲೇಖನದಲ್ಲಿ ವಿಜಯಪುರ ಜಿಲ್ಲೆಯ ಅಂದು ವಿಜಯಪುರ ತಾಲೂಕು ಇಂದು ಬಬಲೇಶ್ವರ ತಾಲೂಕಿನಲ್ಲಿ ಬರುವ ಸಾರವಾಡ ಗ್ರಾಮದ ಸ್ವಾತಂತ್ರ್ಯಯೋಧರನ್ನು ಕುರಿತು ಪರಿಚಯಿಸುವುದಾಗಿದೆ.

ಇಂಗ್ಲೆಂಡ್‌ನಲ್ಲಿ ಬ್ಯಾರಿಸ್ಟರ್ ಪದವಿಯನ್ನು ಪಡೆದು ಭಾರತಕ್ಕೆ ಬಂದ



ಮಹಾತ್ಮಾಗಾಂಧೀಜಿಯವರು ಮೊದಲು ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರಿಂದ ಅಲ್ಲಿಯ ಭಾರತೀಯರ ಮೇಲೆ ನಡೆಯುತ್ತಿದ್ದ ಅನೀತಿ, ಅನ್ಯಾಯ, ಮತಭೇದ ನೀತಿಗಳನ್ನು ಖಂಡಿಸಿ ಅವರೆಲ್ಲರಿಗೂ ನ್ಯಾಯ ಒದಗಿಸಲು ಕಾನೂನಾತ್ಮಕವಾಗಿ ಹೋರಾಡಲು ತಮ್ಮ ವಕೀಲ ವೃತ್ತಿಯನ್ನು ಆರಂಭಿಸಿದರು. ಈ ಕಾರ್ಯದಲ್ಲಿ ತೊಡಗಿದ ಬಾಪೂಜಿಯವರಿಗೆ ಹಲವು ಕಷ್ಟ ನಷ್ಟಗಳು ತೊಂದರೆಗಳು ಬಂದರೂ ಧೈರ್ಯದಿಂದ ಎದುರಿಸಿ ವಿಜಯಿಗಳಾಗಿ ಭಾರತಕ್ಕೆ ಆಗಮಿಸುತ್ತಾರೆ. ಈಗಾಗಲೆ ಮಹಾತ್ಮಾಜಿಯವರಿಗೆ ರಸ್ಕಿನ್ ಮಹಾಶಯ ಬರೆದ 'ಅನ್ ಟು ದಿಸ್ ಲಾಸ್ಟ್' ಕೃತಿ ಅವರ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರಿತ್ತು. ಗಾಂಧೀಜಿಯವರು ಭಾರತಕ್ಕೆ ಮರಳಿ ಬರುವ ಸಂದರ್ಭದಲ್ಲಿ ಇವರು ಪ್ರಯಾಣಿಸುತ್ತಿದ್ದ ರೇಲ್ವೆ ಕೆಲವು ಸಮಯ ಒಂದು ನದಿಯ ಸೇತುವೆಯ ಮೇಲೆ ನಿಂತಿತ್ತು. ಸಹಜವಾಗಿ ನದಿ ದಂಡೆಯ ಮೇಲೆ ಬಾಪೂಜಿಯವರ ಚಿತ್ತ ಹರಿಯಿತು. ನದಿ ದಂಡೆಯ ಮರಳಿನ ಮೇಲೆ ಒಬ್ಬ ಹೆಣ್ಣುಮಗಳು ತಾನು ಉಟ್ಟುಕೊಂಡ ಸೀರೆಯಲ್ಲಿ ಸ್ನಾನ ಮಾಡಿ ಅರ್ಧ ಸೀರೆಯನ್ನು ಒಗೆದು ಬದಲಾಯಿಸಿ ಅದು ಒಣಗಿದ ನಂತರ ಆ ಅರ್ಧಸೀರೆಯನ್ನುಟ್ಟು ಇನ್ನರ್ಧ ಸೀರೆ ಒಗೆದುಹಾಕಿ ಒಣಗಿಸಿ ಉಡುತ್ತಿರುವ ದೃಶ್ಯವನ್ನು ಕಂಡ ಬಾಪೂಜಿಯವರಿಗೆ ಭಾರತೀಯ ಬಡ ಜನರ ಕಷ್ಟ ಕಾರ್ಪಣ್ಯ ಬಡತನದ ಕರಾಳ ಛಾಯೆಯ ದರ್ಶನವಾಯಿತು. ಅದೇ ಕ್ಷಣದಲ್ಲಿ ಬಾಪುಜಿಯವರು ತಾವು ತೊಟ್ಟುಕೊಂಡ ವಿದೇಶಿ ಬಟ್ಟೆಗಳನ್ನು ಕಿತ್ತೆಸೆದು ತುಂಡು ಬಟ್ಟೆಗಳನ್ನು ಧರಿಸಿದರು 'ಭಾರತೀಯ ಕಡುಬಡವರಿಗೆ ಎಂದು ಮೈತುಂಬ ಬಟ್ಟೆ ತೊಡುವ ಕಾಲ ಬರುವುದೋ ಆವಾಗ ನಾನು ಮೈತುಂಬ ಬಟ್ಟೆ ಧರಿಸುತ್ತೇನೆ' ಎಂದು ಸಂಕಲ್ಪ ಮಾಡುತ್ತಾರೆ. ಅಂದಿನಿಂದ ಅರೆ ಬಟ್ಟೆಯನ್ನು ಧರಿಸಿದ ಫಕೀರರಾಗಿ ಭಾರತಕ್ಕೆ ಆಗಮಿಸುತ್ತಾರೆ.

ಭಾರತ ಹಳ್ಳಿಗಳ ದೇಶ. ಈ ದೇಶ ಉದ್ಧಾರವಾಗಬೇಕೆಂದರೆ ಮೊದಲು ಹಳ್ಳಿಗಳ ಉದ್ಧಾರವಾಗಬೇಕು. ಅಂದರೆ ಸ್ವಾವಲಂಬನೆಯ ಬದುಕಿನಿಂದ. ಹಳ್ಳಿಯ ಜನರ ಉದ್ಧಾರವಾಗಬೇಕೆಂದು ನಿರ್ಧರಿಸಿದ ಬಾಪೂಜಿಯವರು ಭಾರತೀಯ ಕಾಂಗ್ರೆಸ್ ಸಂಸ್ಥೆಯ ನೇತೃತ್ವವನ್ನು ವಹಿಸಿದ ನಂತರ ಗ್ರಾಮೋದ್ಯೋಗಕ್ಕೆ ಹೆಚ್ಚಿನ ಮಹತ್ವ ನೀಡುತ್ತಾರೆ. ಪ್ರತಿಯೊಬ್ಬರು ನೂಲುವುದು, ತಾವೆ ಸ್ವತಃ ನೂತ ನೂಲಿನಿಂದ ಬಟ್ಟೆಯನ್ನು ನೆಯ್ದು ಬಳಸಬೇಕೆಂಬ ಕರೆಯನ್ನು ಕೊಟ್ಟು ಖಾದಿ ದೇಶದ ಸ್ವಾತಂತ್ರ್ಯದ ಹಾದಿಯೆಂದು ತಿಳಿಸಿ ಬಡಿಗೆತನ, ಕಮ್ಮಾರಿಕೆ, ಕುಂಬಾರಿಕೆ, ಒಟ್ಟಿನ ಮೇಲೆ ಸ್ವಾವಲಂಬಿ ಬದುಕಿಗೆ ಒತ್ತು ನೀಡುತ್ತಾರೆ.

ಸ್ವದೇಶಿ ವಸ್ತುಗಳನ್ನು ಬಳಸಿ ವಿದೇಶಿ ವಸ್ತುಗಳನ್ನು ಬಹಿಷ್ಕರಿಸಿ ಎಂದು ಕರೆಕೊಟ್ಟ ಬಾಪೂಜಿಯವರ ಮಾತಿಗೆ ಕೋಟಿ ಕೋಟಿ ಭಾರತೀಯರು ಮಂತ್ರ ಮುಗ್ಧರಾಗಿ ಸ್ವತಂತ್ರ ವಿಚಾರಶಕ್ತಿಯನ್ನು ಬೆಳೆಸಿಕೊಂಡು ಬ್ರಿಟೀಷರ ದಬ್ಬಾಳಿಕೆ, ಅನ್ಯಾಯ, ಅತ್ಯಾಚಾರ, ದರ್ಪಗಳನ್ನು ತಿರಸ್ಕರಿಸಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನು, ಮನ, ಧನವನ್ನರ್ಪಿಸಲು ಮುಂದಾಗುತ್ತಾರೆ.

## ಸಾರವಾಡ ಗ್ರಾಮದ ಪರಂಪರೆ

ವಿಜಯಪುರ ಜಿಲ್ಲೆಯ ಅಂದಿನ ವಿಜಯಪುರ ಇಂದಿನ ಬಬಲೇಶ್ವರ ತಾಲೂಕಿನಲ್ಲಿರುವ ಸಾರವಾಡ ಗ್ರಾಮ, ದೋಣಿ ನದಿ ದಂಡೆಯಲ್ಲಿರುವ ಈ ಗ್ರಾಮದಲ್ಲಿ ಹಿಂದೆ ದೋಣಿ ನದಿ ದಂಡೆಗಳಲ್ಲಿ ಉಪ್ಪು ತಯಾರಿಸುತ್ತಿದ್ದರು. ಕಾರಣ ಕ್ಷಾರ ಅಂದರೆ ಉಪ್ಪು. ಕ್ಷಾರ ತಯಾರಿಸುವ ವಾಡ ಅಂದರೆ ಊರು, ಉಪ್ಪು ತಯಾರಿಸುವ ಊರು ಸಾರವಾಡ ಎಂದು ಆಗಿರಬಹುದು. ಇಂದಿಗೂ ದೋಣಿ ನದಿ ದಂಡೆಗಳಲ್ಲಿ ಉಪ್ಪಿನ ಮಾಳೆಗಳಿರುವುದನ್ನು ಕಾಣಬಹುದು. ಇನ್ನೊಂದು ರೀತಿಯಿಂದ ವಿಚಾರಿಸಿದರೆ ಸಾ ಅಂದರೆ ಆರು, ಇಂದಿನ ಸಾರವಾಡದ ಸುತ್ತ ಮುತ್ತ ಸಣ್ಣ ಸಣ್ಣ ಜನವಸತಿ ಪ್ರದೇಶಗಳಿದ್ದು, ಉದಾ : ಚಿಕ್ಕಯ್ಯನಹಾಳ, ಸೋಮನಕೇರಿ, ಮಲ್ಲಪ್ಪನಕೇರಿ ಅವುಗಳಲ್ಲಿ ಒಂದೆಡೆ ಸೇರಿ ಆರು ಗ್ರಾಮಗಳು ಒಗ್ಗೂಡಿದ್ದರಿಂದ ಈ ಗ್ರಾಮ ಸಾರವಾಡವಾಯಿತೆಂದು ಪ್ರತೀತಿಯಿದೆ. ಇನ್ನೊಂದು ಐತಿಹ್ಯದ ಪ್ರಕಾರ ಈ ಗ್ರಾಮದಲ್ಲಿ ಜನಿಸಿ ಬಬಲಾದಿ ಮಠದ ಅಧಿಪತಿಗಳಾಗಿ ಕಾಲಜ್ಞಾನದ ಮುಂಡಿಗೆ ಪದಗಳನ್ನು ರಚಿಸಿ ನಾಡಿಗೆಲ್ಲ ಸಾರಿದ ಮಹಾಯೋಗಿ ಸದಾಶಿವಪ್ಪ ಹಾಗೂ ಚಿಕ್ಕಪ್ಪಯ್ಯನವರು ಮುಂದಾಗುವ ದಿನಗಳ ಕುರಿತು ಸಾರಿದ್ದರಿಂದ ಈ ಗ್ರಾಮಕ್ಕೆ ಸಾರು ಅಯ್ಯನವರ ವಾಡ, ಸಾರವಾಡವಾಗಿರಬಹುದೆಂಬ ಪ್ರತೀತಿಯಿದೆ ಹಾಗೂ ಈ ಭಾಗದ ಫಲವತ್ತಾದ ಕರಿ ಮಣ್ಣಿನ ಪ್ರದೇಶದಲ್ಲಿ ಕಡಲೆಯನ್ನು ಯಥೇಚ್ಛವಾಗಿ ಬೆಳೆಯುತ್ತಿದ್ದರು. ಆದಿಲ್‌ಶಾಹಿ ಅರಸರ ಕಾಲದಲ್ಲಿ ಒಂಟೆ ಹಾಗೂ ಕುದುರೆಗಳಿಗೆ ಈ ಪ್ರದೇಶದಲ್ಲಿ ಕಡಲೆ ಬೆಳೆಯನ್ನು ತಿನ್ನಿಸುತ್ತಿದ್ದರು. ಆ ಒಂಟೆಯ ಸವಾರರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಈ ಗ್ರಾಮಕ್ಕೆ ಸವಾರರವಾಡ, ಸಾರವಾಡವಾಗಿರಬಹುದೆಂದು ತರ್ಕಿಸಲಾಗಿದೆ. ಈ ಗ್ರಾಮದ ಹೆಸರಿನ ನಿಜ ನಿಷ್ಪತ್ತಿ ಗುರುತಿಸುವ ಶಾಸನಗಳಾಗಲಿ, ಪ್ರಾಚೀನ ಗ್ರಂಥಗಳಾಗಲಿ, ತಾಮ್ರಪತ್ರ, ತಾಡೋಲೆಗಳಾಗಲಿ ಲಭ್ಯವಾಗಿಲ್ಲ. ನಾನು ಚಿಕ್ಕವನಿದ್ದಾಗ ಗ್ರಾಮ ಪಂಚಾಯತಿ, ಹನುಮಪ್ಪನ ಗುಡಿ, ಈಶ್ವರ ದೇವಸ್ಥಾನದ ಆವರಣದಲ್ಲಿ ಶಾಸನ ಮುಕ್ಕಾದ



ಕಲ್ಲುಗಳು ಮೂರ್ತಿಗಳು, ಕಲ್ಲಿನ ಕಂಬ, ಬಾಗಿಲ ಹಣೆಪಟ್ಟಗಳು ಗೋಚರಿಸುತ್ತಿದ್ದವು. ಆಧುನಿಕ ಭರಾಟೆಯಲ್ಲಿ ಕಾಂಕ್ರೀಟ್ ಕಟ್ಟಡಗಳನ್ನು ಕಟ್ಟುವ ಭರದಲ್ಲಿ ಪ್ರಾಚೀನ ಶಿಲ್ಪ, ಶಾಸನ ಕಲ್ಲುಗಳನ್ನು ಮೌಢ್ಯ ಜನಪ್ರತಿನಿಧಿಗಳು ಹೊಳೆ, ನದಿಗಳಲ್ಲಿ ಮುಳುಗಿಸಿ, ಗ್ರಾಮದ ಪ್ರಾಚೀನತೆಯ ಕುರುಹುಗಳನ್ನು ನಾಶಮಾಡಿ ಇತಿಹಾಸಕ್ಕೆ ಗ್ರಾಮ ಚರಿತ್ರೆಗೆ ಅಪಚಾರವೆಸಗಿದ್ದಾರೆ.

'ದೋಣಿ ಬೆಳೆದರೆ ಓಣೆಲ್ಲ ಜೋಳ' ಎಂಬ ಗಾದೆ ಮಾತು ದೋಣಿ ನದಿ ದಂಡೆಯಲ್ಲಿರುವ ಎಲ್ಲ ಗ್ರಾಮಗಳಿಗೆ ಅಂದರೆ ದೋಣಿಸಾಲ ಪ್ರದೇಶಕ್ಕೆ ಅನ್ವಯಿಸುತ್ತದೆ. ಕಾರಣ ವಿಜಯಪುರ ಜಿಲ್ಲೆಯಲ್ಲಿ ಎಂಥ ಬರಗಾಲವಿದ್ದರೂ ಸಾರವಾಡ ಭೂಮಿಗೆ ಮಳೆಯಾಗುತ್ತದೆ. ಬೆಲೆ ಚೆನ್ನಾಗಿರುತ್ತದೆ ಎಂಬ ಮಾತಿದೆ. ಈ ಗ್ರಾಮದ ಗ್ರಾಮದೇವರು ಈಶ್ವರದೇವರಾಗಿದ್ದು ಆತನ ಕೃಪೆಯಿಂದ ಜೋಳ, ಗೋದಿ, ಕುಸುಬಿ, ಕಡಲಿ, ತೊಗರಿ ಬೆಳೆಯುತ್ತವೆಂಬ ಜನರ ನಂಬಿಕೆಯ ಜೊತೆಗೆ ಈ ಗ್ರಾಮದ ದಕ್ಷಿಣ, ಪೂರ್ವ, ಪಶ್ಚಿಮಗಳಲ್ಲಿ ದೋಣಿ ನದಿ ಹರಿದಿದ್ದು ಹನ್ನೆರಡು ತಿಂಗಳು ಖಜಾಪೂರ ಜಾಲಿ ಅಥವಾ ಸರ್ಕಾರಿ ಜಾಲಿ ಹಬ್ಬಿ ಹಸಿರಾಗಿರುವುದರಿಂದ ಮಳೆಗಾಲದಲ್ಲಿ ಮೋಡಗಳನ್ನು ಅಕರ್ಷಿಸಿ ಉಳಿದೆಡೆಗಿಂತ ಈ ಪ್ರದೇಶದಲ್ಲಿ ಮಳೆ ಹೆಚ್ಚಿನ ಪ್ರಮಾಣದಲ್ಲಾಗುತ್ತದೆ. ವಿಜಯಪುರ ಜಿಲ್ಲೆಗೆ ಅತೀವೃಷ್ಟಿ, ಅನಾವೃಷ್ಟಿ, ಅಕಾಲವೃಷ್ಟಿಗಳು ಸಹಜವಾಗಿರುವಂತೆ ನಮ್ಮ ಸಾರವಾಡದ ಹೊಲಗಳಲ್ಲಿ ಜಾಸ್ತಿ ಮಳೆಯಾದ ವರ್ಷ ತೆವರು ಅಂದರೆ ಕರಿಮಣ್ಣಿನ ಭೂಮಿ, ಕಡಿಮೆ ಮಳೆಯಾದ ವರ್ಷ ಬಿಳಚಿ ಅಂದರೆ ಉಸುಕು ಮಿಶ್ರಿತ ಜಮೀನು ಸಮತಟ್ಟಾದ ಒಡ್ಡಿನ ಹೊಲಗಳು ಸಮೃದ್ಧವಾಗಿ ಬೆಳೆಯುತ್ತವೆ. ಒಟ್ಟಿನ ಮೇಲೆ ಸಾರವಾಡ ಗ್ರಾಮಕ್ಕೆ ಅನ್ನದ ಕೊರತೆಯಿಲ್ಲ. ಈ ಮೊದಲು ಕುಡಿಯುವ ಸಿಹಿ ನೀರಿನ ಕೊರತೆಯಿತ್ತು. ಆದರೆ ಸವಳು ನೀರು ಸಮೃದ್ಧವಾಗಿದೆ. ಇತ್ತಿತ್ತಲಾಗಿ ಕರ್ನಾಟಕ ಸರ್ಕಾರದ ಬಹು ಹಳ್ಳಿ ಕುಡಿಯುವ ನೀರಿನ ಯೋಜನೆಯಂತೆ ಈ ಭಾಗದ ಜನಪ್ರಿಯ ಶಾಸಕರು ಮಾಜಿ ಜಲಸಂಪನ್ಮೂಲ ಸಚಿವರಾದ ಸನ್ಮಾನ್ಯ ಶ್ರೀಯುತ ಡಾ॥ ಎಂ. ಬಿ. ಪಾಟೀಲರವರ ಪ್ರಯತ್ನದಿಂದ ಕೃಷ್ಣಾನದಿ ನೀರು ದೊರೆಯುತ್ತಿದ್ದು, ಜನ ನೆಮ್ಮದಿಯಾಗಿದ್ದಾರೆ. ಸಾರವಾಡ ಗ್ರಾಮವು ವಿಜಯಪುರ ಜಿಲ್ಲಾ ಕೇಂದ್ರದಿಂದ ಜಮಖಂಡಿ ರಸ್ತೆ ಮಾರ್ಗದಲ್ಲಿ ಹದಿನಾಲ್ಕು ಕಿಲೋ ಮೀಟರ್ ಅಂತರದಲ್ಲಿ ಹಾಗೂ ಇದೆ ಮಾರ್ಗವಾಗಿ ತಾಲೂಕ ಕೇಂದ್ರ ಬಬಲೇಶ್ವರದಿಂದ ಎಂಟು ಕಿಲೋ ಮೀಟರ್ ಅಂತರದಲ್ಲಿದೆ.

ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಈ ಗ್ರಾಮದ ಒಟ್ಟು ಹದಿಮೂರು ಜನ ಸ್ವಾತಂತ್ರ್ಯಯೋಧರು ಭಾಗವಹಿಸಿ ತನು, ಮನ, ಧನವನ್ನರ್ಪಿಸಿ ನಾಡಿನ ಗ್ರಾಮದ ಕೀರ್ತಿಯನ್ನು ಹೆಚ್ಚಿಸಿದಂತೆ ಸಂಗೀತ, ಸಾಹಿತ್ಯ, ನಾಟಕ, ಬಯಲಾಟ, ಧಾರ್ಮಿಕ, ಆಡಳಿತಾತ್ಮಕ, ರಾಜಕೀಯ ರಂಗದಲ್ಲಿ ಚರಿತ್ರೆಯಲ್ಲಿ ಸ್ಥಿರಸ್ಥಾಯಿಯಾಗಿ ಉಳಿಯುವ ಕಾರ್ಯವೆಸಗಿದ್ದಾರೆ. ಸಾರವಾಡ ಗ್ರಾಮದಲ್ಲಿ ಕಾಲಜ್ಞಾನದ ಹಾಗೂ ಮುಂಡಿಗೆಯ ಪದಗಳನ್ನು ರಚಿಸಿದ ಗುರುಕುಲ ಚಕ್ರವರ್ತಿ ಸದಾಶಿವಯ್ಯನವರು ಹಾಗೂ ಪೂಜ್ಯ ಚಿಕ್ಕಪ್ಪಯ್ಯನವರು ಜನಿಸಿದ್ದು ಇದೇ ಗ್ರಾಮದಲ್ಲಿ ಅನಂತರ ಕೃಷ್ಣಾನದಿ ತೀರದ ಬಬಲಾದಿಯಲ್ಲಿ ಸೀತಿಮನಿ ಚಂದ್ರವ್ವ ತಾಯಿಯ ಶಕ್ತಿಪೀಠವನ್ನು ಸ್ಥಾಪಿಸಿ ನಿಜ ಜಂಗಮಜನಾರ್ಧನರಾಗಿರುತ್ತಾರೆ. ಅದೇ ರೀತಿಯಾಗಿ ಹದಿನಾರನೇ ಶತಮಾನದಲ್ಲಿ ಆದಿಲ್‌ಶಾಹಿ ಸುಲ್ತಾನರು ವಿಜಯಪುರ ಪ್ರದೇಶವನ್ನಾಳುತ್ತಿರುವ ಸಂದರ್ಭದಲ್ಲಿ ಅವರ ಆಸ್ಥಾನದಲ್ಲಿ ಮಂತ್ರಿಗಳಾಗಿದ್ದ ಕಾಖಂಡಕಿಯ ಮಹಿಪತಿದಾಸರು ವಿಜಯಪುರದ ಲಂಗೇವಾಲಾ ಫಕೀರರಿಂದ ಉಪದೇಶ ಪಡೆದು ಅವರ ಆಣತಿಯಂತೆ ಸಾರವಾಡ ಗ್ರಾಮದ ಭಾಸ್ಕರಸ್ವಾಮಿಗಳಿಂದ ಅನುಗ್ರಹಿತರಾಗಿ ಅವರನ್ನು ತಮ್ಮ ಗುರುಗಳಾಗಿ ಸ್ವೀಕರಿಸುತ್ತಾರೆ. ಇದೇ ಸಂದರ್ಭದಲ್ಲಿ ಆದಿಲ್‌ಶಾಹಿ ಅರಸರ ಪ್ರೇಯಸಿಯಾದ ರಂಭಾ ಇವರ ತಮ್ಮನ ಉಪಟಳದಿಂದ ಬೇಸತ್ತ ಸಾರವಾಡದ ಹಿರೇಮಠದ ಪೀಠಾಧಿಪತಿಗಳಾದ ಶ್ರೀ ತಿಪ್ಪೆರುದ್ರಮಹಾಸ್ವಾಮಿಗಳು ಚಿತ್ರದುರ್ಗ ಜಿಲ್ಲೆಯ ನಾಯಕನಹಟ್ಟಿ ಗ್ರಾಮಕ್ಕೆ ಹೋಗಿ ನೆಲೆಸುತ್ತಾರೆ. ದಿವಂಗತ ಶ್ರೀ ಎಸ್.ಎಂ.ಪಾಟೀಲರವರು ಬ್ರಿಟೀಷ ಆಡಳಿತದಲ್ಲಿ ತಹಶೀಲದಾರರಾಗಿ ಜನಾನುರಾಗಿಯಾಗಿ ಶಿಸ್ತಿನ ಜೀವನವನ್ನು ನಡೆಸಿ ಗ್ರಾಮಕ್ಕೆ ಹೆಸರು ತಂದಿರುತ್ತಾರೆ. ರಾಜಕೀಯ ಕ್ಷೇತ್ರದಲ್ಲಿ ಶುದ್ಧ ಹಸ್ತರಾಗಿ ಸೇವೆ ಸಲ್ಲಿಸಿದ ದಿವಂಗತ ಸನ್ಮಾನ್ಯ ಶ್ರೀ ಬಿ. ಕೆ. ಗುಡದಿನ್ನಿಯವರು ಲೋಕಸಭಾ ಸದಸ್ಯರಾಗಿ ದೇಶಸೇವೆಗೈದಿರುತ್ತಾರೆ ಹಾಗೆ ಸಾರವಾಡವೆಂದರೆ ಪ್ರಾಥಮಿಕ ಶಾಲಾಶಿಕ್ಷಕರ ಊರು ಎಂಬ ಪ್ರತೀತಿಯಿದೆ. ಈ ಗ್ರಾಮದಲ್ಲಿ ಮನೆಗೊಬ್ಬರು ಮಾಸ್ತರರಿದ್ದರು. ಈ ಗ್ರಾಮದ ಯಾವ ಮೂಲೆಯಲ್ಲಿ ನಿಂತ ಕಲ್ಲೊಗೆದರು ಅದು ಮಾಸ್ತರರ ಮನೆಗೆ ಬಡಿಯುತ್ತದೆ ಎಂದು ಜಿಲ್ಲೆಯ ಜನ ಮಾತನಾಡುತ್ತಾರೆ. ಅಳವಿನಂಚಿನಲ್ಲಿರುವ ಶ್ರೀಕೃಷ್ಣ ಪಾರಿಜಾತ ಕಂಪನಿ ಕಟ್ಟಿ ಶ್ರೀಕೃಷ್ಣನ ಪಾತ್ರ ಯಶಸ್ವಿಯಾಗಿ ನಡೆಸಿಕೊಂಡು ಬಂದ ಶ್ರೀ ಶಿವನಗೌಡ ಕೋಟಿಯವರು ಹಾಗೂ ಅನಕ್ಷರಸ್ಥರಾಗಿ ಬಡತನದ ಬವಣೆಯಲ್ಲಿದ್ದ ಶ್ರೀಮತಿ ಈಶ್ವರವ್ವ ಮಾದರ ಇವರಿಗೆ ಶ್ರೀಕೃಷ್ಣ ಪಾರಿಜಾತ ರಂಗ ಸಂಗೀತ ನೀಡಿ ಸ್ತ್ರೀಪಾತ್ರಧಾರಿಯಾಗಿ ಯಶಸ್ವಿ ಕಲಾವಿದೆಯನ್ನಾಗಿ



ರೂಪಿಸಿದ ಕೀರ್ತಿ ಶ್ರೀ ಶಿವನಗೌಡ ಕೋಟಿಯವರಿಗೆ ಸಲ್ಲುತ್ತದೆ. ಅದೇ ರೀತಿಯಾಗಿ ಶ್ರೀ ಸಿದ್ರಾಮಯ್ಯ, ಚಿಕ್ಕಯ್ಯನಮಠರವರ ಸತ್ಯಭಾಮಾ ಹಾಗೂ ಕೊರವಂಜಿ ಪಾತ್ರಗಳಿಗೆ ಜೀವ ತುಂಬಿದ ಕಲಾವಿದರಿವರು. ದೂತಿ ಪಾತ್ರದಲ್ಲಿ ಶ್ರೀ ಈಶ್ವರಯ್ಯ ಪೂಜಾರಿ ಪ್ರಮುಖರು. ಶಾಸ್ತ್ರ ಪ್ರವಚನ ಪುರಾಣ ಸಾಹಿತ್ಯದಲ್ಲಿ ಶ್ರೀ ಶಾಂತಣ್ಣ ಮ. ಕೋಟಿ, ವೇ. ಮೂರ್ತಿ, ಶ್ರೀ ರುದ್ರಸ್ವಾಮಿ ಹಿರೇಮಠ, ಶ್ರೀ ನಾಗಪ್ಪ ರಬಿನಾಳ, ಶ್ರೀಮತಿ ಮಲ್ಲಮ್ಮ ಕೋಟಿ ಇನ್ನು ಹಲವರನ್ನು ಹೆಸರಿಸಬಹುದು. ಹವ್ಯಾಸಿ ನಾಟಕ ಕಲಾವಿದರು ದೊಡ್ಡಾಟ ಕಲಾವಿದರು, ಸಂಗೀತ ಕಲಾವಿದರು ಅಡ್ಡ ಸೋಗ ಕುದುರೆ ಕುಣಿತ ಮುಂತಾದ ಜನಪದ ಕಲಾವಿದರ ತವರೂರು ಈ ಸಾರವಾಡ ಗ್ರಾಮ.

ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಅಖಿಲ ಭಾರತ ಕಾಂಗ್ರೆಸ್ ಪಕ್ಷದ ಅಧ್ಯಕ್ಷ ಸ್ಥಾನವನ್ನು ಮಹಾತ್ಮಾ ಗಾಂಧೀಜಿಯವರು ವಹಿಸಿಕೊಂಡ ನಂತರ ದೇಶಭಕ್ತರಲ್ಲಿ ಹೊಸಹುರುಪು ಮೂಡಿ ಬಾಪೂಜಿಯವರ ಕರೆಗೆ ಓಗೊಟ್ಟು ಲಕ್ಷಾಂತರ ಜನ ಹೋರಾಟದಲ್ಲಿ ತೊಡಗಿದರು. ಈ ಸಂದರ್ಭದಲ್ಲಿ ಮಹಾತ್ಮಾಜಿಯವರು ಭಾರತೀಯರಿಗೆ ವೈಯಕ್ತಿಕ ಸತ್ಯಾಗ್ರಹದ ಕರೆಕೊಡುತ್ತಾರೆ. ವಿಜಯಪುರ ಜಿಲ್ಲೆಯ ಎಲ್ಲ ಕಾಂಗ್ರೆಸ್ ಸಂಸ್ಥೆಯಲ್ಲಿರುವ ಸದಸ್ಯರಿಗೆ ಗಣ್ಯರಿಗೆ ಒಂದೊಂದು ಗ್ರಾಮಗಳನ್ನು ಹಂಚಿಕೊಡುತ್ತಾರೆ. ಈ ವೈಯಕ್ತಿಕ ಸತ್ಯಾಗ್ರಹದಲ್ಲಿ ಭಾಗವಹಿಸುವ ಸತ್ಯಾಗ್ರಹಿಗಳು ಮುಂಚಿತವಾಗಿ ಜಿಲ್ಲಾ ಕಲೆಕ್ಟರ್‌ರವರಿಗೆ ಇಂಥ ಗ್ರಾಮದ ಇಂಥ ಸ್ಥಳದಲ್ಲಿ ಇಂಥ ವೇಳೆಗೆ ನಾನು ಬ್ರಿಟೀಷ ಸರ್ಕಾರದ ವಿರೋಧವಾಗಿ ವೈಯಕ್ತಿಕ ಸತ್ಯಾಗ್ರಹವನ್ನು ಕೈಕೊಳ್ಳುತ್ತೇನೆ. ತಾವು ನನ್ನನ್ನು ಬಂಧಿಸಬಹುದೆಂದು ಪತ್ರ ನೀಡಿ ಒಪ್ಪಿಗೆ ಪಡೆಯುವುದು ನಿಯಮವಾಗಿತ್ತು. ಹಾಗೆ ಸಾರವಾಡ ಗ್ರಾಮಕ್ಕೆ ಸನ್ಮಾನ್ಯ ಶ್ರೀ ಮುರಿಗೆಪ್ಪ ಸುಗಂಧಿಯವರನ್ನು ನೇಮಿಸಲಾಗಿತ್ತು. ಶ್ರೀಯುತರ ಉಗ್ರವಾದ ಭಾಷಣವನ್ನು ಕೇಳಿದ ಸಾರವಾಡದ ನವತರುಣರಲ್ಲಿ ದೇಶಭಕ್ತಿಯ ಕಿಚ್ಚು ಪ್ರಜ್ವಲಿಸಹತ್ತಿತು. ನಾವು ಸಹ ಏಕೆ ಈ ಸತ್ಯಾಗ್ರಹದಲ್ಲಿ ಭಾಗವಹಿಸಬಾರದು? ಎಂದು ನಿಶ್ಚಯಿಸಿ ಶ್ರೀ ಗಿರಿಮಲ್ಲಪ್ಪ ಶಿವಪ್ಪ ವಾಲಿ ದೊಡ್ಡ ವಾಲಿಯವರ ನೇತೃತ್ವದಲ್ಲಿ ಸಾರವಾಡದ ಸ್ವಾತಂತ್ರ್ಯ ಯೋಧರ ಯುವಪಡೆ ನಿರ್ಧರಿಸಿತು. ಹೀಗೆ ಶ್ರೀ ಗಿರಿಮಲ್ಲಪ್ಪ ಶಿವಪ್ಪ ವಾಲಿಯವರು ಬಬಲೇಶ್ವರದಲ್ಲಿ ಶ್ರೀ ನಂದಬಸಪ್ಪ ಈಶ್ವರಪ್ಪ ಲಿಂಗದಳ್ಳಿಯವರು, ಬಿಜ್ಜರಗಿಯಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನು ಕೈಕೊಂಡು ಜೈಲುವಾಸ ಅನುಭವಿಸಿದರು. ಮುಂದೆ ಸಾರವಾಡದ ಊರಿಗೆ ಊರೇ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಲು ಮುಂದಾದರು. ಹತ್ತೊಂಬತ್ತು ನೂರಾ

ನಲವತ್ತೆರಡರ ಚಲೇಜಾವ ಚಳುವಳಿ ಬ್ರಿಟೀಷರೆ ಭಾರತವನ್ನು ಬಿಟ್ಟು ತೊಲಗಿ ಎಂಬ ಬಾಪೂಜಿಯವರ ಕರೆಗೆ ದೇಶಕ್ಕೆ ದೇಶವೇ ಚಳುವಳಿಯಲ್ಲಿ ಧುಮುಕಲು ಸಿದ್ಧರಾದರು. ಶಾಲಾ ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ಸ್ವಾತಂತ್ರ್ಯ ಮೊದಲು ಆ ಮೇಲೆ ವಿದ್ಯಾಭ್ಯಾಸ ಎಂದರು. ವಕೀಲವೃತ್ತಿ, ಸರಕಾರಿ ನೌಕರಿ, ವ್ಯವಸಾಯ, ವ್ಯಾಪಾರ ಯಾವುದೇ ವೃತ್ತಿಯಲ್ಲಿದ್ದರೂ ಅದೆಲ್ಲವನ್ನು ಬದಿಗೊತ್ತಿದರು. ವಿಜಯನಗರ ಸಾಮ್ರಾಜ್ಯ ಉದಯವಾಗುವ ಸಂದರ್ಭದಲ್ಲಿ ಯವನರ ದಬ್ಬಾಳಿಕೆಯಿಂದ ಬೇಸತ್ತು ಹಿಂದು ಸಾಮ್ರಾಜ್ಯ ಕಟ್ಟುವ ಸಂಘಟನೆಯಲ್ಲಿ ತೊಡಗಿದ ಹಕ್ಕ ಬುಕ್ಕರಿಗೆ ಪ್ರೇರಣೆ ನೀಡಿದ ವಿದ್ಯಾರಣ್ಯರು ವೇದ ಉಪನಿಷತ್ತುಗಳಿಗೆ ಭಾಷ್ಯ ಬರೆಯುತ್ತಿರುವ ಸಹೋದರ ಸಾಯಣ್ಣಾಚಾರ್ಯರಿಗೆ ಹೇಳುತ್ತಾರೆ. 'ಏಳು ಸಾಯಣ್ಣ ಕಟ್ಟು ರಾಜ್ಯವ' ಇದು ವೇದಗಳಿಗೆ ಭಾಷ್ಯ ಬರೆಯುವ ಕಾಲವಲ್ಲ ಹಿಂದೂ ಧರ್ಮದ ಹಿಂದು ಸಾಮ್ರಾಜ್ಯದ ಅಸ್ತಿತ್ವದ ಪ್ರಶ್ನೆಯಾಗಿದೆ. ಕಾರಣ ಭಾಷ್ಯ ಬರೆಯುವುದನ್ನು ಬಿಟ್ಟು ಸಾಮ್ರಾಜ್ಯ ಕಟ್ಟುವ ಕೆಲಸಕ್ಕೆ ಕೈಜೋಡಿಸು ಎಂದು ಹೇಳಿದಂತೆ ಬಾಪೂಜಿಯವರ "ಬ್ರಿಟೀಷರೇ ಭಾರತ ಬಿಟ್ಟು ತೊಲಗಿ ಮಾಡು ಇಲ್ಲವೇ ಮಡಿ" ಎಂಬ ಕರೆಗೆ ಸಾರವಾಡದ ಯುವ ಹೋರಾಟಗಾರರು ಜಾತಿ ಮತ ಪಂಥ ಲೆಕ್ಕಿಸದೇ ಒಂದಾಗಿ ಭಾಗವಹಿಸಿದರು. ಸಾರವಾಡದ ಈ ಯುವ ಪಡೆಗೆ ವಿಜಯಪುರ ಜಿಲ್ಲಾ ಕಾಂಗ್ರೆಸ್ ಸಂಸ್ಥೆಯವರು ಜುಮನಾಳ ರೇಲ್ವೆ ಸ್ಟೇಶನ್ ಸುಡಲು ಆದೇಶಿಸಿದ್ದರು. ಇವರ ಉತ್ಸಾಹ ರಾಷ್ಟ್ರಪ್ರೇಮವನ್ನು ಕಂಡ ಊರಿನ ನೂರಾರು ತರುಣರ ತಂಡ ಉತ್ಸಾಹದಿಂದ ಮುಂದೆ ಬಂದರು. ಗ್ರಾಮದ ಹೊರವಲಯದಲ್ಲಿರುವ ಮಳ್ಳಿಹಳ್ಳದಲ್ಲಿ ಕುಳಿತು ವಿಚಾರ ವಿನಿಮಯ ಮಾಡುವಾಗ ಒಂದಿಬ್ಬರು ಉದಾಸೀನದಿಂದ ಅಲ್ಲಿ ಪೊಲೀಸರಿರುತ್ತಾರೆ ಗುಂಡು ಹಾರಿಸಿದರೆ ಹೇಗೆ ಸತ್ತು ಹೋಗುತ್ತೇವೆಂದೂ ಮನೆಗೆ ನಾನೊಬ್ಬನೇ ಗಂಡುಮಗ ದುಡಿದು ಹಾಕುವವರು ಯಾರೂ ಇಲ್ಲ ಮುಂದೆ ಮನೆಯವರೆಲ್ಲ ಅನಾಥರಾಗುತ್ತಾರೆ ಎಂದು ಮುಂತಾಗಿ ನೆರೆದ ಎಲ್ಲರನ್ನು ಹೆದರಿಸಿ ಮರಳಿ ಮನೆ ಸೇರಿದ ಪ್ರಸಂಗ ನಡೆಯಿತು. ಹೀಗೆ ಸ್ವಾತಂತ್ರ್ಯ ಸಂಗ್ರಾಮದ ಬಿರುಗಾಳಿಯಲ್ಲಿ ಜೊಳ್ಳು ಕಾಳುಗಳೆಲ್ಲ ಹಾರಿಹೋಗಿ ಗಟ್ಟಿ ಕಾಳುಗಳು ಮಾತ್ರ ಉಳಿದುಕೊಂಡಂತೆ ಸಾರವಾಡದ ಸ್ವಾತಂತ್ರ್ಯ ಯೋಧರಲ್ಲಿ ಕೇವಲ ಹದಿಮೂರು ಜನ ಮಾತ್ರ ಉಳಿದುಕೊಂಡರು. ಈ ಮೊದಲು ಶ್ರೀ ದೊಡ್ಡ ವಾಲಿಯವರ ನೇತೃತ್ವದಲ್ಲಿ ಅಸಹಕಾರ ಚಳುವಳಿಯಲ್ಲಿ ಭಾಗವಹಿಸಿ ತಾರು ತಂತಿಗಳನ್ನು ಕತ್ತರಿಸುವುದು ಅಂಚೆ ಕಚೇರಿ ಹಾಗೂ ಅಂಚೆ ಬ್ಯಾಗುಗಳ ದೋಚುವುದು, ಸುಟ್ಟು ಹಾಕುವುದು,



ರೈಲು ಹಳಿಗಳನ್ನು ಕಿತ್ತಿ ಹಾಕುವುದು. ಹೀಗೆ ಬ್ರಿಟಿಷ ಸರಕಾರದ ಆಡಳಿತ ವ್ಯವಸ್ಥೆಯನ್ನು ದಿಕ್ಕು ತಪ್ಪಿಸುವ ಕಾರ್ಯ ಮಿಂಚಿನಂತೆ ನೆರವೇರಿಸಿದರು. ಇದೇ ವೇಳೆಗೆ ಬೆಳಗಾವಿ ಜಿಲ್ಲೆಯ ಬೈಲಹೊಂಗಲದಲ್ಲಿ ಸ್ವಾತಂತ್ರ್ಯಯೋಧ ಶ್ರೀ ಚನ್ನಪ್ಪ ವಾಲಿಯವರು ವಿಧ್ವಂಸಕ ಕಾರ್ಯದಲ್ಲಿ ತೊಡಗಿ ಭೂಗತರಾಗಿದ್ದು ಬ್ರಿಟೀಷರಿಗೆ ಚಳ್ಳೆಹಣ್ಣು ತಿನ್ನಿಸಿದ್ದರು. ಶ್ರೀಯುತರನ್ನು ಜೀವಂತವಾಗಿ ಹಿಡಿದುಕೊಟ್ಟವರಿಗೆ ಬಹುಮಾನ ಕೊಡುವುದಾಗಿ ಬ್ರಿಟೀಷ ಆಡಳಿತ ಘೋಷಣೆ ಮಾಡಿತ್ತು. ಇಂಥ ಸಂದರ್ಭದಲ್ಲಿ ಪೋಲೀಸ ಅಧಿಕಾರಿಗಳಿಗೆ ವಾಲಿ ಚನ್ನಪ್ಪ ಬೈಲಹೊಂಗಲದ ಬಳಿಯಿರುವ ಅಕ್ಕತಂಗಿಹಾಳದಲ್ಲಿ ಅಡಗಿ ಕುಳಿತಿದ್ದಾರೆಂಬ ಖಚಿತ ಮಾಹಿತಿ ದೊರೆತಾಗ ಇಡೀ ಬೆಳಗಾವಿ ಜಿಲ್ಲೆಯ ಎಲ್ಲಾ ಪೊಲೀಸರು ಬಂದೂಕುಧಾರಿಗಳಾಗಿ ಗ್ರಾಮದ ಸುತ್ತೆಲ್ಲ ಹಗಲು ರಾತ್ರಿ ಪಹರೆ ಕಾಯಹತ್ತಿದರು. ಗ್ರಾಮದ ಜನರು ಯಾರು ಹೊರ ಹೋಗುವಂತಿಲ್ಲ. ಹೊರಗಿನವರು ಊರ ಒಳಗೆ ಬರುವಂತಿಲ್ಲ ಎಂದು ಡಂಗುರ ಸಾರಲಾಯಿತು. ಅಕ್ಕತಂಗಿಹಾಳದಲ್ಲಿ ಅಡಗಿ ಒಬ್ಬ ವಯಸ್ಸಾದ ಅಜ್ಜಿಯ ಮನೆಯಲ್ಲಿ ಕುಳಿತಿರುವ ವಾಲಿ ಚನ್ನಪ್ಪ ಚಿಂತಾಕ್ರಾಂತರಾದಾಗ ಆ ಅಜ್ಜಿ "ತಮ್ಮಾ ಯಾಕ ಚಿಂತಿ ಮಾಡತಿ ನೀ ಸತ್ತಿಯಂತ ಗೂಟಕ ಬಡದ ಕೊಡಸತಿನಿ, ಸತ್ತ ಹೆಣ ಅಂತ ಹೇಳಿ ನಿನ್ನ ಹೊರಗ ಬಿಡತಾರ" ಅಂತಹೇಳಿ ಅಜ್ಜಿ ನನ್ನ ಮಗ ಸತ್ತಾನಂತ ಜೋರಾಗಿ ಅಳತಾಳ. ಆಗ ಗ್ರಾಮದ ಜನರು ವ್ಯಕ್ತಿ ಸತ್ತಿದ್ದಾನೆಂದು ಸ್ಮಶಾನಕ್ಕೆ ಗೋರಿ ತೋಡಲು ಹೋಗಲು ಅವಕಾಶ ಮಾಡಿಕೊಡಬೇಕೆಂದು ಕೇಳಿದಾಗ ನಾಲ್ಕು ಜನರನ್ನು ಮಾತ್ರ ಹೊರ ಹೋಗಲು ಬಿಡುತ್ತಾರೆ. ಅದರಲ್ಲಿ ಇಬ್ಬರು ಸ್ಮಶಾನದಲ್ಲಿ ಕುಳಿತುಕೊಳ್ಳುತ್ತಾರೆ. ಇನ್ನಿಬ್ಬರು ಬೈಲ ಹೊಂಗಲಕ್ಕೆ ಹೋಗಿ ಕಾಂಗ್ರೆಸ್ ಆಫೀಸಿನಿಂದ ಜೀಪ ಗಾಡಿ ತಂದು ಗ್ರಾಮದಿಂದ ದೂರ ನಿಲ್ಲಿಸಿ ಮತ್ತೆ ನಾಲ್ಕು ಜನ ಘೋರಿ ತೋಡಿ ಬಂದಿರುವುದಾಗಿ ಪೊಲೀಸರಿಗೆ ತಿಳಿಸಿ ಗ್ರಾಮದೊಳಗೆ ಬರುತ್ತಾರೆ. ನಂತರ ಲಿಂಗಾಯತ ಧರ್ಮದಂತೆ ಹೆಣವನ್ನು ಕೂಡ್ರಿಸದೆ ವೈದಿಕ ಧರ್ಮದಂತೆ ಸಿದಿಗೆಯ ಮೇಲೆ ಮಲಗಿಸಿ ಮುಖದ ಗುರುತು ಪತ್ತೆ ಹತ್ತದಂತೆ ಗುಲಾಲ ಬುಕೀಟು ಬಣ್ಣ ಹಾಕಿ ನಾಲ್ಕು ಜನ ಹೊತ್ತುಕೊಂಡು ಹಿಂದೆ ಆ ಅಜ್ಜಿ ಅಳುತ್ತ ಗ್ರಾಮದ ಅಗಸಿ ಮುಂದೆ ಬಂದಾಗ ಹೆಣ ಹೊತ್ತ ನಾಲ್ಕು ಜನರ ಸಹಿ ಅಥವಾ ಹೆಬ್ಬೆಟ್ಟು ಒತ್ತಿಸಿಕೊಂಡು ಆ ಅಜ್ಜಿಯನ್ನು ಊರೊಳಗೆ ಕಳಿಸಿದರು. ಚನ್ನಪ್ಪ ವಾಲಿಯವರನ್ನು ಹೊತ್ತ ನಾಲ್ಕು ಜನ ಅವರನ್ನು ಜೀಪಗಾಡಿಯಲ್ಲಿ ಕೂಡ್ರಿಸಿ ಬೈಲಹೊಂಗಲಕ್ಕೆ ಕಳಿಸಿ ಮರಳಿ ಊರು ಸೇರಿದರು. ಇತ್ತ ಚನ್ನಪ್ಪ ವಾಲಿ ಸುರಕ್ಷಿತ ಸ್ಥಳ ತಲುಪಿ ಬ್ರಿಟೀಷರಿಗೆ ಚಳ್ಳೆಹಣ್ಣು

ತಿನ್ನಿಸಿದರು. ಹೀಗೆ ಪೊಲೀಸ ಅಧಿಕಾರಿಗಳು ಗ್ರಾಮ ಸುತ್ತುವರಿದು ಮನೆ ಮನೆ ಶೋಧ ಮಾಡಲು ಒಂದು ವಾರ ಕಳೆಯಿತು. ಕೊನೆಗೆ ಅಕ್ಕತಂಗಿಹಾಳದ ಮಹಿಳೆಯರು ಕಾವಲು ಕಾಯುವ ಪೊಲೀಸರಿಗೆ ನಮ್ಮ ಚನ್ನಪ್ಪ ವಾಲಿ ಎಂದೋ ಗ್ರಾಮ ಬಿಟ್ಟು ಹೋಗಿರುತ್ತಾನೆಂದು ಕಲ್ಲು ಒಗೆಯಲು ಪ್ರಾರಂಭಿಸಿದಾಗ ಪೊಲೀಸರು ಗ್ರಾಮ ತೊರೆದು ಬರಿಗೈಯಿಂದ ಹೋಗುತ್ತಾರೆ. ಇದೆ ಸಂದರ್ಭದಲ್ಲಿ ಹಾವೇರಿ ವೀರಭದ್ರೇಶ್ವರ ದೇವಸ್ಥಾನದಲ್ಲಿರುವ ಬ್ರಿಟೀಷ ಖಜಾನೆಯ ಹಣವನ್ನು ಲೂಟಿ ಮಾಡುವ ಸಂದರ್ಭದಲ್ಲಿ ಸಂಗೂರ ಕರಿಯಪ್ಪನವರ ಬಲಗೈ ಪೊಲೀಸರ ಗುಂಡೇಟಿನಿಂದ ತುಂಡಾದ ಘಟನೆಗಳನ್ನು ಕೇಳಿದ ಸಾರವಾಡದ ಸ್ವಾತಂತ್ರ್ಯ ಯೋಧರು ಹುರಿದುಂಬಿ ತಾವು ದೇಶ ಸ್ವಾತಂತ್ರ್ಯಕ್ಕಾಗಿ ಏನಾದರೂ ಮಾಡೋಣ ಎಂದು ಸಂಕಲ್ಪಿಸಿಕೊಂಡು ಕಾರ್ಯವೆಸಗಲು ಮುಂದಾದರು.

ಇವರೆಲ್ಲರಿಗೆ ಸಾರವಾಡದ ಸಾಲು ಬಜಾರದಲ್ಲಿರುವ ಶ್ರೀ ಮರಳಸಿದ್ದಪ್ಪ ಶಿವಪ್ಪ ವಾಲಿ ಸಹೋದರರ ಕಿರಾಣಿ ಅಂಗಡಿ ಸ್ವಾತಂತ್ರ್ಯ ಯೋಧರ ಹಾಗೂ ಕಾಂಗ್ರೆಸ್ ಕಾರ್ಯಕರ್ತರ ಕಚೇರಿಯಾಗಿತ್ತು. ಮೇಲಿಂದ ಮೇಲೆ ವಿಜಯಪುರ ಕಾಂಗ್ರೆಸ್ ಆಫೀಸಿಗೆ ಹೋಗಿ ಬರುವ ಶ್ರೀ ಗಿರಿಮಲ್ಲಪ್ಪ ಶಿವಪ್ಪ ವಾಲಿಯವರು ಹೊಸ ಹೊಸ ವಿಚಾರಗಳನ್ನು ತಂದು ಸ್ವಾತಂತ್ರ್ಯ ಯೋಧರನ್ನು ಹುರಿದುಂಬಿಸಿ ಸ್ವಾತಂತ್ರ್ಯ ಸಮರಕ್ಕೆ ಸಜ್ಜಾಗ ಹತ್ತಿದರು.

**ಮುಳವಾಡ ಸರಕಾರಿ ಪ್ರವಾಸಿ ಮಂದಿರ ದಹನ :**

ಸಾರವಾಡ ಗ್ರಾಮದ ಬಹು ಸಂಖ್ಯೆಯ ದೇಶಭಕ್ತರಿಂದ ಹನ್ನೆರಡು ಜನ ಸೇರಿ ತೊಗಲು ಹದಗೆಡಿಸಿದರು ಎಂಬ ಗಾದೆಯಂತೆ ನೂರಾರೂ ಜೊಳ್ಳು ಜನರನ್ನು ಬಿಟ್ಟು ಗಟ್ಟಿಕಾಳುಗಳಾದ ಹದಿಮೂರು ಜನ ಸ್ವಾತಂತ್ರ್ಯ ಯೋಧರಲ್ಲಿ ೧) ಶ್ರೀ ಗಿರಮಲ್ಲಪ್ಪ ಶಿವಪ್ಪ ವಾಲಿ (ದೊಡ್ಡವಾಲಿ) ಮುಖಂಡ ೨) ಶ್ರೀ ಮರುಳಸಿದ್ದಪ್ಪ ಶಿವಪ್ಪ ವಾಲಿ ೩) ಶ್ರೀ ಈಶ್ವರಪ್ಪ ನಿಂಗಪ್ಪ ಯಾದವಾಡ ೪) ಶ್ರೀ ಬಸಪ್ಪ ಅಲ್ಲಪ್ಪ ಬಳಗಲಿ ೫) ಶ್ರೀ ಈಶ್ವರಪ್ಪ ತುಕ್ಕಪ್ಪ ಅರ್ಜುಣಗಿ ೬) ಶ್ರೀ ಚನ್ನಪ್ಪ ಮಲ್ಲಪ್ಪ ಗುಡದಿನ್ನಿ ೭) ಶ್ರೀ ಪಾಂಡು ಗೋವಿಂದ ಪರೀಟ ೮) ಶ್ರೀ ಶಂಕರಯ್ಯ ಮಲ್ಲಯ್ಯ ಪೂಜಾರಿ ೯) ಶ್ರೀ ದಾನಯ್ಯ ಗುರುಪಾದಯ್ಯ ಪೂಜಾರಿ ೧೦) ಶ್ರೀ ಸಿದಗೊಂಡಪ್ಪ ಚನ್ನಪ್ಪ ಸಾವಳಗಿ ೧೧) ಶ್ರೀ ಈರಪ್ಪ ಖಾಟಿ ೧೨) ಶ್ರೀ ನಂದಬಸಪ್ಪ ಈಶ್ವರಪ್ಪ ಲಿಂಗದಳ್ಳಿ ೧೩) ಶ್ರೀ ಗುರುಪಾದಯ್ಯ



ಚಂದ್ರಯ್ಯ ಮಠ ಇವರೆಲ್ಲರೂ ದೊಡ್ಡವಾಲಿ ಎಂದು ಹೆಸರಾದ ಶ್ರೀ ಗಿರಿಮಲ್ಲಪ್ಪ ಶಿವಪ್ಪ ವಾಲಿಯವರ ನೇತೃತ್ವದಲ್ಲಿ ಅಸಹಕಾರ ಚಳುವಳಿಯನ್ನು ಪ್ರಾರಂಭಿಸಿ ಮುನ್ನಡೆಸಿ ಗ್ರಾಮದ ಯಾರಿಗೂ ಗೊತ್ತಾಗದ ಹಾಗೆ ಗುಪ್ತವಾಗಿ ೧೯೪೨ರ ಮಹಾನವಮಿ ಅಮವಾಸೆಯ ಕಾಳಕತ್ತಲೆಯಲ್ಲಿ ವಾಲಿ ಸಹೋದರರ ಕಿರಾಣಿ ಅಂಗಡಿಯ ಅಮವಾಸೆ ಲಕ್ಷ್ಮೀಪೂಜೆಯನ್ನು ತಡರಾತ್ರಿ ಪೂರೈಸಿ ಅಂಗಡಿಯಿಂದ ಒಂದು ಗಾಸಲೇಟ ಎಣ್ಣೆ ಡಬ್ಬಿ, ಹರಕ ಅರಿವೆ ನಾರು ಮುಂತಾದ ವಸ್ತುಗಳ ಜೊತೆಗೆ ಡಬ್ಬಿಯಿಂದ ಸೀಮೆ ಎಣ್ಣೆ ತೆಗೆದು ಗೊಜ್ಜಲು ಅನುಕೂಲವಾಗಲು ಕಿರಾಣಿ ಅಂಗಡಿಯಲ್ಲಿರುವ ಹಿತ್ತಾಳೆಯ ಬಟ್ಟಲನ್ನು ತೆಗೆದುಕೊಂಡು ಮಧ್ಯರಾತ್ರಿ ಈ ಸಾರವಾಡದ ದೇಶಾಭಿಮಾನಿಗಳು ಕಾಳಕತ್ತಲೆಯಲ್ಲಿ ಸುರಿಯುತ್ತಿರುವ ಜಿಡಿಮಳೆಯನ್ನು ಲೆಕ್ಕಿಸದೆ ಹಳ್ಳ, ಕೊಳ್ಳ ದಾಟುತ್ತ ಕಾಳಕತ್ತಲೆಯಲ್ಲಿ ಗುಡುಗು ಮಿಂಚಿನ ನಡುವೆ ಅಡ್ಡದಾರಿ ಹಿಡಿದು ತೊನಶ್ಯಾಳ ಗ್ರಾಮದ ಸಮೀಪದಲ್ಲಿರುವ ದೋಣಿ ನದಿಯನ್ನು ದಾಟಲು ಮುಂದಾಗುತ್ತಾರೆ. ಈ ಸಂದರ್ಭದಲ್ಲಿ ಇವರು ತೊನಶ್ಯಾಳ ಗ್ರಾಮದ ಸ್ಮಶಾನದಲ್ಲಿ ಹೋಗಬೇಕಾದರೆ ಎರಡು ಮೂರು ದಿನಗಳ ಹಿಂದೆ ಅಂತ್ಯ ಸಂಸ್ಕಾರ ಮಾಡಿದ ಗೋರಿಯ ಮೇಲೆ ಕಾಲಿಟ್ಟಾಗ ಮಳೆ ನೀರಿನಿಂದ ಕುಸಿದ ನೆಲದಲ್ಲಿ ಕಾಲು ಮುಳುಗಿದಾಗ ತಮಾಶೆ ಮಾಡಿ ಕಾಲು ಜಗ್ಗಿ ಹೊರ ತೆಗೆದು ಮುನ್ನಡೆದರು. ಎರಡು ಮೂರು ದಿಗನಳಿಂದ ಅವ್ಯಾಹತವಾಗಿ ಸುರಿಯುತ್ತಿರುವ ಜಡಿಮಳೆಯಿಂದ ದೋಣಿ ನದಿ ಒಡಲು ತುಂಬಿ ಭೋರ್ಗರೆಯುತ್ತಿತ್ತು. ಇಂಥ ತುಂಬಿ ಹರಿಯುತ್ತಿರುವ ದೋಣಿ ನದಿಯನ್ನು ದಾಟಲು ಈ ಸ್ವಾತಂತ್ರ್ಯ ಯೋಧರು ತಾವು ತೊಟ್ಟುಕೊಂಡ ಬಟ್ಟೆಗಳನ್ನು ಕಳೆದು ಗಂಟು ಕಟ್ಟಿಕೊಂಡು ತಲೆ ಮೇಲೆ ಇಟ್ಟುಕೊಂಡು ತಲೆಗೆ ಪ್ರತಿಯೊಬ್ಬರು ವಾಲಿಯವರ ಅಂಗಡಿಯಿಂದ ತಂದ ತಟ್ಟಿನ ಚೀಲಗಳ ಕೊಂಚಿಗಿ ಮಾಡಿ ಹಾಕಿಕೊಂಡು ಒಬ್ಬರ ಕೈ ಇನ್ನೊಬ್ಬರು ಹಿಡಿದುಕೊಂಡು ಧೈರ್ಯದಿಂದ ದೋಣಿ ನದಿ ದಾಟಿ ಆಚೆದಡ ಸೇರಿದರು. ಇಲ್ಲಿ ಶ್ರೀಕೃಷ್ಣ ಪರಮಾತ್ಮ ಕಾರಾಗೃದಲ್ಲಿ ಜನಿಸಿದಾಗ ಸೋದರಮಾವ ಕಂಸ ಆ ಮಗುವನ್ನು ಕೊಂದು ಹಾಕುವನೆಂದು ತಂದೆ ವಸುದೇವ ಒಂದು ಬುಟ್ಟಿಯಲ್ಲಿ ಬಾಲಕೃಷ್ಣನನ್ನು ಮಲಗಿಸಿಕೊಂಡು ಜಿಡಿಮಳೆಯನ್ನು ಲೆಕ್ಕಿಸಿದೆ ತುಂಬಿ ಹರಿಯುತ್ತಿರುವ ಯಮುನಾ ನದಿಯನ್ನು ಧೈರ್ಯದಿಂದ ದಾಟುವಾಗ, ಯಮುನೆ ದಾರಿಕೊಟ್ಟಳು ಎಂದು ದೈವಭಕ್ತರು ಕೊಂಡಾಡುವಂತೆ, ಸಾರವಾಡದ ಈ ಸ್ವಾತಂತ್ರ್ಯ ಸೇನಾನಿಗಳಿಗೂ ಆ ದೋಣಿನದಿ ದಾರಿಕೊಟ್ಟಿರಬಹುದೆನೋ

ಅನಿಸುತ್ತದೆ. ದೇಶಭಕ್ತರ ಈ ಪವಿತ್ರ ಕಾರ್ಯದಲ್ಲಿ ಪ್ರಕೃತಿಯು ಸಹ ಸಹಕರಿಸುತ್ತದೆಂಬುದು ತಿಳಿದು ಬರುತ್ತದೆ.

ತೊನಶ್ಯಾಳ ಮುಂದೆ ತುಂಬಿಹರಿಯುತ್ತಿರುವ ದೋಣಿ ನದಿಯನ್ನು ದಾಟಿ ಎರಿಮಣ್ಣು ಕೆಸರು ತುಳಿಯುತ್ತ ಪ್ರಯಾಸದಿಂದ ಯಾವ ಅಡೆ ತಡೆಯನ್ನು ಲೆಕ್ಕಿಸದೆ ಮುಳವಾಡ ಸರಕಾರಿ ಪ್ರವಾಸಿ ಮಂದಿರವನ್ನು ತಲುಪುತ್ತಾರೆ. ಅಲ್ಲಿ ಕಾವಲು ಕಾಯುತ್ತಿರುವ ಸಿಪಾಯಿಗಳನ್ನು ಎಬ್ಬಿಸಿ ಅವರಿಗೆ ನಾವು ನಿಮಗೇನು ಮಾಡುವುದಿಲ್ಲ. ಧೈರ್ಯವಾಗಿರಿ ಎಂದು ಬಂಗ್ಲೆಯ ಹೊರಗಡೆ ಕುಳಿತುಕೊಳ್ಳಲು ತಿಳಿಸಿದರು. ಸರಕಾರಿ ಪ್ರವಾಸಿ ಮಂದಿರದಲ್ಲಿರುವ ಕುರ್ಚಿ, ಮೇಜು, ಕಪಾಟುಗಳು, ಮಂಚ ಹಾಗೂ ಅಲ್ಲಿರುವ ಮಹತ್ವದ ಕಾಗದ ಪತ್ರಗಳನ್ನು ಕೂಡಿಹಾಕಿ ತಾವು ತೆಗೆದುಕೊಂಡು ಹೋಗಿದ್ದ ಸೀಮೆಎಣ್ಣೆಯನ್ನು ಎಲ್ಲೆಡೆ ಗೊಜ್ಜಿ ಹಳೆ ಅರಿವೆ ನಾರನ್ನು ಸೀಮೆ ಎಣ್ಣೆಯಲ್ಲಿ ಅದ್ದಿ ಮೇಲ್ಚಾವಣಿಗೆ ಬೆಂಕಿ ಹಚ್ಚಿದರು. ಮರಳಿ ಬರುವಾಗ ತಾವು ವಾಲಿಯವರ ಅಂಗಡಿಯಿಂದ ತೆಗೆದುಕೊಂಡು ಹೋದ ಹಿತ್ತಾಳೆ ಬಟ್ಟಲನ್ನು ಮರೆತು ಬಂದರು. ಯಾರು ಎಷ್ಟೇ ಜಾಗೃತಿವಹಿಸಿದರು ಏನಾದರೊಂದು ವಸ್ತುವನ್ನು ಮರೆತು ಬರುತ್ತಾರೆಂಬಂತೆ ಸೀಮೆ ಎಣ್ಣೆ ಗೊಜ್ಜಲು ತೆಗೆದುಕೊಂಡು ಹೋದ ಬಟ್ಟಲು ಅಲ್ಲೇ ಉಳಿಯಿತು. ಸರಕಾರಿ ಪ್ರವಾಸಿ ಮಂದಿರ ದಗದಗನೆ ಉರಿಯುತ್ತಿರುವ ಸಂದರ್ಭದಲ್ಲಿ ದೂರದಲ್ಲಿ ಕುಳಿತ ಕಾವಲುಗಾರರು ತಮ್ಮಗತಿಯೇನೆಂದು ಅವಲತ್ತುಕೊಳ್ಳ ಹತ್ತಿದರು. ಆಗ ಈ ಎಲ್ಲ ಸ್ವಾತಂತ್ರ್ಯ ಯೋಧರ ಮುಖಂಡರಾದ ದೊಡ್ಡವಾಲಿಯವರು ಈ ಮಧ್ಯರಾತ್ರಿಯಲ್ಲಿ ನಿಮ್ಮನ್ನು ಕಟ್ಟಿಹಾಕಿದರೆ ಮಾನವೀಯ ದೃಷ್ಟಿಯಿಂದ ಸರಿಯಲ್ಲ ಎಂದು ತಿಳಿಸಿ ಆ ಕಾವಲುಗಾರರ ಜೊತೆಯಲ್ಲಿರುವ ಮಹಿಳೆಗೆ ನೀನು ಬೆಳಗಿನ ಜಾವದಲ್ಲಿ ಇವರ ಕೈಕಾಲು ಕಟ್ಟಿ ಜಾಗರೂಕತೆಯಿಂದ ಯಾರಿಗೂ ಗೊತ್ತಾಗದ ಹಾಗೆ ಮುಳವಾಡ ಗ್ರಾಮಕ್ಕೆ ಹೋಗುವಂತೆ ತಿಳಿಸಿ ತಾವು ತೆಗೆದುಕೊಂಡು ಹೋದ ಗುದ್ದಿ ಹಗ್ಗ ಹಾಗೂ ತೆಂಗಿನ ನಾರಿನ ಹಗ್ಗವನ್ನು ಕೊಟ್ಟು ಚಹಾ ಕುಡಿಯಲು ಬಕ್ಷೀಸ ರೂಪದಲ್ಲಿ ಹಣವನ್ನು ನೀಡಿ ಅದೇ ದಾರಿಯಿಂದ ಮರಳಿ ಜನ ಎಚ್ಚರಗೊಳ್ಳುವ ಪೂರ್ವದಲ್ಲಿ ಸಾರವಾಡ ಗ್ರಾಮ ತಲುಪಿ ತಮ್ಮ ತಮ್ಮ ಮನೆ ಸೇರಿಕೊಂಡರು. ಸಾರವಾಡ ಗ್ರಾಮದ ಕೆಲವು ಮೂಕರ್ಜಿವೀರರು ಮುಳವಾಡ ಸರ್ಕಾರಿ ವಸತಿ ಗೃಹವನ್ನು ಸುಟ್ಟವರು, ಸಾರವಾಡದ ಹದಿಮೂರು ಜನರೆಂದು ಸರ್ಕಾರಕ್ಕೆ ಮೂಕ ಪತ್ರ ಬರೆದರು.



## ಸ್ವಾತಂತ್ರ್ಯಯೋಧರ ದಸ್ತಗಿರಿ :

ಮುಳವಾಡದ ಸರ್ಕಾರಿ ವಸತಿಗೃಹ ಸುಟ್ಟ ಮರುದಿನ ಪೊಲೀಸ್ ಅಧಿಕಾರಿಗಳು ಪಂಚನಾಮೆ ಮಾಡಲು ಮುಂದಾದಾಗ ಕಾವಲುಗಾರರನ್ನು ಕೇಳಲು ಅವರು ಮುಸುಕುಧಾರಿಗಳಾಗಿದ್ದರು ಕತ್ತಲೆಯಲ್ಲಿ ಅವರ್‍ಯಾರೆಂಬುದು ಮತ್ತು ಎಷ್ಟು ಜನರಿದ್ದರೆಂದು ಗೊತ್ತಾಗಲಿಲ್ಲವೆಂದು ನಮ್ಮನ್ನು ಹೊಡೆದು ಬಡಿದು ಕೈಕಾಲು ಕಟ್ಟಿಹಾಕಿದರೆಂದು ಜವಾಬು ಕೊಟ್ಟರು. ಆದರೆ ಇವರು ಸೀಮೆ ಎಣ್ಣೆ ಗೊಜ್ಜಲು ವಾಲಿಯವರ ಅಂಗಡಿಯಿಂದ ತೆಗೆದುಕೊಂಡು ಹೋದ ಹಿತ್ತಾಳೆ ಖೊಬ್ಬರಿ ಎಣ್ಣೆ ಬಟ್ಟಲು ಪೊಲೀಸರಿಗೆ ದೊರೆಯಿತು. ಅದರ ಮೇಲೆ ಆ ಬಟ್ಟಲದ ಮಾಲಿಕರ ಹೆಸರು ಬಟ್ಟಲು ಬೆಳಗಿ ಬೆಳಗಿ ಅಳಿಸಿಹೋಗಿತ್ತು. ಆದರೆ ಸಾರವಾಡ ಎಂಬ ಹೆಸರು ಅಸ್ಪಷ್ಟವಾಗಿ ಕಾಣುತ್ತಿತ್ತು. ಇದರಿಂದ ಪಂಚನಾಮೆ ಮಾಡಿದ ಪೊಲೀಸರಿಗೆ ಈ ಬೆಂಕಿ ಹಚ್ಚುವ ಕಾರ್ಯವನ್ನು ಸಾರವಾಡದ ಯುವಕರು ಮಾಡಿದ್ದಾರೆಂದು ಸಾಬೀತಾಯಿತು.

ಪಂಚನಾಮೆ ಸ್ಥಳದಲ್ಲಿ ದೊರೆತ ಹಿತ್ತಾಳೆ ಬಟ್ಟಲದ ಸಾಕ್ಷಿಯ ಜೊತೆಗೆ ಮೂಕರ್ಜಿವೀರರ ಪತ್ರವು ತಲುಪಿದ ನಂತರ ಪೊಲೀಸರಿಗೆ ಸಾರವಾಡ ಗ್ರಾಮದ ಯುವಕರು ಈ ಬೆಂಕಿ ಹಚ್ಚಿದ ಕಾರ್ಯವನ್ನು ಮಾಡಿರುವುದಾಗಿ ಮನವರಿಕೆಯಾದ ನಂತರ ಪೊಲೀಸ್ ಅಧಿಕಾರಿಗಳು ಜಾಗೃತರಾಗಿ ಸಾರವಾಡ ಗ್ರಾಮದ ಕಾಂಗ್ರೆಸ್ ಮುಖಂಡರನ್ನು ಬಂಧಿಸಲು ಮುಂದಾದರು. ಸಂಶಯಬಂದ ಎಲ್ಲರನ್ನು ಒಮ್ಮೆಲೆ ಬಂಧಿಸುವ ಧೈರ್ಯ ಮಾಡಲಿಲ್ಲ. ಕಾರಣ ಗ್ರಾಮದ ದೇಶಭಕ್ತರು ರೊಚ್ಚಿಗೆದ್ದು ಗಲಾಟೆ ಮಾಡಿದರೆ ತೊಂದರೆಯಾಗುವುದೆಂದು ಅರಿತು ಊರ ಹೊರಗೆ ತಮ್ಮ ಪೊಲೀಸ್ ಜೀಪ್ ನಿಲ್ಲಿಸಿ ಪ್ರತಿದಿನ ಒಬ್ಬೊಬ್ಬರನ್ನು ಕರೆದುಕೊಂಡು ಹೋಗಿ ವಿಜಯಪುರದ ಸುಪ್ರಸಿದ್ಧ ದರ್ಗಾ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳೆಂದು ಇರಿಸಿದ್ದರು. ಇದೇ ರೀತಿ ಪ್ರತಿದಿನ ಪೊಲೀಸ ಅಧಿಕಾರಿಗಳು ಬರುವುದು ಒಬ್ಬೊಬ್ಬರನ್ನು ದಸ್ತಗಿರಿ ಮಾಡಿಕೊಂಡು ಕರೆದುಕೊಂಡು ಹೋಗುವುದು ನಡೆದಿತ್ತು. ಗ್ರಾಮದ ಸಾಮಾನ್ಯ ಜನ ಭಯಭೀತರಾಗಿದ್ದರು. ಗ್ರಾಮದಲ್ಲಿ ಪೊಲೀಸರ ಆಗಮನವಾದಾಗ ಎಲ್ಲರೂ ತಮ್ಮ ಮನೆ ಬಾಗಿಲುಗಳನ್ನು, ಅಂಗಡಿ ಮುಗ್ಗಟ್ಟುಗಳನ್ನು ಬಂದ ಮಾಡಿ ಕಿಟಕಿಯಿಂದ, ಬಾಗಿಲು ಸಂದಿಯಿಂದ ನಡೆಯುವ ವಿದ್ಯಮಾನಗಳನ್ನು ಭಯದಿಂದ ವೀಕ್ಷಿಸುತ್ತಿದ್ದರು. ಊರಿಗೆ ಊರೇ ಭಯದ ವಾತಾವರಣದಲ್ಲಿದ್ದು, ಹೊಲ ಮನೆಗಳ ಕೆಲಸಗಳನ್ನು

ಬಿಟ್ಟು ಬದುಕುವ ಸ್ಥಿತಿ ನಿರ್ಮಾಣವಾಗಿತ್ತು. ಹೀಗೆ ಒಬ್ಬೊಬ್ಬರನ್ನು ಬಂಧಿಸುತ್ತ ಒಂದು ದಿನ ಇಳಿ ಹೊತ್ತಿನ ಸಮಯದಲ್ಲಿ ವಾಲಿ ಸಹೋದರರ ಕಿರಾಣಿ ಮತ್ತು ಬಟ್ಟೆ ಅಂಗಡಿಯಲ್ಲಿ ಶ್ರೀ ಗಿರಮಲ್ಲಪ್ಪ ಶಿವಪ್ಪ ವಾಲಿಯವರ ಕಿರಯ ಸಹೋದರ ಶ್ರೀ ಮರುಳಸಿದ್ದಪ್ಪ ಶಿವಪ್ಪ ವಾಲಿಯವರು ಅಂಗಡಿಯ ಲೆಕ್ಕಪತ್ರ ಖಾತೆಕಿರ್ದಿಯನ್ನು ಬರೆಯುತ್ತ ಕುಳಿತಿರುವ ಸಂದರ್ಭದಲ್ಲಿ ಪೊಲೀಸ್ ಅಧಿಕಾರಿಗಳು ಬಂದು ನಿಮ್ಮನ್ನು ಮುಳವಾಡ ಸರ್ಕಾರಿ ಪ್ರವಾಸಿ ಮಂದಿರವನ್ನು ಸುಟ್ಟಿರುವ ಆರೋಪದ ಮೇಲೆ ಬಂಧಿಸುತ್ತಿದ್ದೇವೆ ಎಂದು ಹೇಳಿ ಕೈಗಳಿಗೆ ಕೊಳತೊಡಿಸಿ ಕರೆದುಕೊಂಡು ಹೊರಟರು. ಆಗ ಶ್ರೀ ಮರುಳಸಿದ್ದಪ್ಪ ವಾಲಿಯವರು ಭಾರತ ಮಾತಾಕಿ ಜೈ, ಇನ್‌ಕಿಲಾಬ್ ಜಿಂದಾಬಾದ್ ಎಂದು ಘೋಷಣೆ ಕೂಗುತ್ತ ಬ್ರಿಟಿಷ್ ಪೊಲೀಸ್ ಅಧಿಕಾರಿಗಳ ಜೊತೆಗೆ ಹೊರಡುತ್ತಾರೆ. ಮೊದಲೆ ಮನೆಬಾಗಿಲುಗಳನ್ನು ಅಂಜಿಕೆಯಿಂದ ಮುಚ್ಚಿದ್ದರಿಂದ ಯಾರೂ ಪ್ರತಿಭಟಿಸಲು ಮುಂದೆ ಬರಲಿಲ್ಲ. ಶ್ರೀಯುತ ವಾಲಿಯವರ ಅಂಗಡಿಯಲ್ಲಿ ಕಸ ಹೊಡೆಯುವ ಕಾಯಕ ಮಾಡುತ್ತಿರುವ ಮುಪ್ಪಾವಸ್ಥೆಯಲ್ಲಿರುವ ಶ್ರೀಮತಿ ಹಣಮವ್ವ ಮಾದರ ಪೊಲೀಸರಿಗೆ ನಮ್ಮ ಶೆಟ್ಟರನ್ನು ಯಾಕೆ ಹಿಡಿದುಕೊಂಡು ಹೋಗುತ್ತೀರಿ ಎಂದು ಅಳುತ್ತ ಸಾರವಾಡದ ವಾಲಿಯವರ ಅಂಗಡಿಯಿಂದ ಗ್ರಾಮದ ಹೊರ ವಲಯದವರೆಗೂ ಅಳುತ್ತಾ ಬೆನ್ನು ಹತ್ತಿ ಬಂದಾಗ ಊರ ಹೊರಗೆ ಬಂದ ನಂತರ ಪೊಲೀಸರು ನಿಂತುಕೊಂಡು ಶ್ರೀ ಮರುಳಸಿದ್ದಪ್ಪ ವಾಲಿಯವರಿಗೆ ಈ ಹೆಣ್ಣು ಮಗಳು ಯಾರು ಮತ್ತು ನಿಮಗೇನಾಗಬೇಕೆಂದು ಕೇಳಿದಾಗ ಅವಳು ನಮ್ಮ ಅಂಗಡಿಯಲ್ಲಿ ನೆಲ ಸಾರಿಸುವುದು ಪ್ರತಿನಿತ್ಯ ಕಸ ಹೊಡೆಯುವುದು ಹಾಗೂ ಕಾಳು ಕಡಿ ಹಸನು ಮಾಡುವ ಕೆಲಸ ಮಾಡುತ್ತಾಳೆ. ನನಗೆ ತಾಯಿ ಸಮಾನಳಾದ ಶ್ರೀಮತಿ ಹನಮವ್ವ ಮಾದರ ಎಂದು ಹೇಳಿದಾಗ ಪೊಲೀಸರು ಅಮ್ಮ ನೀನೇನು ಚಿಂತೆ ಮಾಡಬೇಡ ನಿಮ್ಮ ಶೆಟ್ಟರಿಗೆ ಏನು ಮಾಡುವುದಿಲ್ಲ ಬೇಗ ಮರಳಿ ಬರುತ್ತಾರೆ. ಅಳಬೇಡ ಸಮಾಧಾನವಾಗಿರು ಎಂದು ಸಾಂತ್ವನದ ಮಾತುಗಳನ್ನಾಡಿ ಮರಳಿ ಕಳಿಸಿಕೊಡುತ್ತಾರೆ. ಬಡವಿಯಾದ ಅನಾಥಳಾದ ಮುಪ್ಪಿನ ಅಜ್ಜಿಗೆ ಬದುಕಿನಲ್ಲಿ ಸಾಂತ್ವನದ ಮಾತುಗಳನ್ನಾಡಿ ಅವಳಿಗೆ ಪ್ರತಿದಿನ ಸಕ್ಕರೆ ಚಹಾಪುಡಿ ಹಾಗೂ ಇತರ ಜೀವನೋಪಯೋಗಿ ವಸ್ತುಗಳನ್ನು ನೀಡಿದ್ದರಿಂದ ಆ ತಾಯಿ ಈ ಸಂದರ್ಭದಲ್ಲಿ ಕರುಳು ಮಿಡಿಯುವಂತೆ ಅಳುವುದನ್ನು ಕಂಡು ಹಡೆದ ತಾಯಿಗಿಂತ ಇಂಥ ಪೊರೆದ ತಾಯಿಯರೇ ಶ್ರೇಷ್ಠರೆಂದೆನಿಸುತ್ತಾರೆ ಎಂದು ವಾಲಿಯವರು ಅಂದುಕೊಳ್ಳುತ್ತಾರೆ. ಹೀಗೆ ಸಾರವಾಡದ ಸ್ವಾತಂತ್ರ್ಯ ಯೋಧರೆಲ್ಲರನ್ನು ಬ್ರಿಟೀಷ್ ಪೊಲೀಸ್



ಅಧಿಕಾರಿಗಳು ಅರೆಸ್ಟ್‌ಮಾಡಿ ವಿಚಾರಣಾಧೀನ ಕೈದಿಗಳೆಂದು ವಿಜಯಪುರದ ಸುಪ್ರಸಿದ್ಧ ದರ್ಗಾಜೈಲಿನಲ್ಲಿ ವಿಚಾರಣಾಧೀನ ಕೈದಿಗಳೆಂದು ಬಂಧನದಲ್ಲಿಡುತ್ತಾರೆ. ವಿಚಾರಣೆಯ ಸಂದರ್ಭದಲ್ಲಿ ಇಂದಿನ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಪಕ್ಕದಲ್ಲಿರುವ ಕೋರ್ಟಿಗೆ ಇಂದಿನಂತೆ ಪೊಲೀಸವಾಹನದ ವ್ಯವಸ್ಥೆಯಿರದೆ ಕಾಲು ನಡಿಗೆಯಲ್ಲಿಯೇ ಕೈಗಳಿಗೆ ಬೇಡಿಹಾಕಿ ಕರೆತರುತ್ತಿದ್ದರು ಹಾಗೂ ಮರಳಿ ಕಳಿಸುತ್ತಿದ್ದರು. ಪ್ರಾರಂಭಿಕ ವಿಚಾರಣೆಯಲ್ಲಿ ಅಂದಿನ ಸರಕಾರಿ ವಕೀಲರು ಇವರಿಗೆ ಅಂಜಿಕೆಹಾಕಿ ನೀವು ಇನ್ನು ಸಣ್ಣವಯಸ್ಸಿನವರು ಬಾಳಿ ಬದುಕಬೇಕಾದವರು ನೀವು ಮಾಡಿದ ಈ ದೇಶದ್ರೋಹದ ಕೆಲಸಕ್ಕೆ ಬಹಳಷ್ಟು ವರ್ಷ ಕಠಿಣಶಿಕ್ಷೆ ಅನುಭವಿಸಬೇಕಾಗುತ್ತದೆ. ವಿಚಾರ ಮಾಡಿರಿ. ತಪ್ಪೊಪ್ಪಿಕೊಳ್ಳಿರಿ. ಶಿಕ್ಷೆ ಕಡಿಮೆಯಾಗುತ್ತದೆ ಎಂದು ಪರಿಪರಿಯಾಗಿ ಇವರೆಲ್ಲರಿಗೂ ತಿಳಿಸಿ ಹೇಳಿ ಭಯದ ವಾತಾವರಣ ಸೃಷ್ಟಿ ಮಾಡಿದರು. ಇದಾವುದಕ್ಕೂ ತಲೆಕೆಡಿಸಿಕೊಳ್ಳದ ಯುವ ಯೋಧರು ಆ ಸರಕಾರಿ ವಕೀಲರಿಗೆ ಹೀಗೆ ಹೇಳುತ್ತಾರೆ.

### ಬ್ರಿಟೀಷ್ ನ್ಯಾಯಾಧೀಶರಿಂದ ವಿಚಾರಣೆ :

**'ಸತ್ಯವೇ ನಮ್ಮ ತಾಯಿ–ತಂದೆ**
**ಸತ್ಯವೇ ನಮ್ಮ ಬಂಧು ಬಳಗ**
**ಸತ್ಯವಾಕ್ಯಕೆ ತಪ್ಪಿ ನಡೆದರೆ**
**ಮೆಚ್ಚನಾ ಪರಮಾತ್ಮನು'**

ಎಂಬ ಗೋವಿನ ಕಥೆಯಂತೆ ನಾವು ಮುಳವಾಡ ಸರಕಾರಿ ಅತಿಥಿ ಗೃಹವನ್ನು ಸುಟ್ಟಿದ್ದು ಸತ್ಯ. ಇದಕ್ಕಾಗಿ ನೀವು ನಮಗೆ ಯಾವ ಶಿಕ್ಷೆಯನ್ನು ಕೊಟ್ಟರು ಅನುಭವಿಸಲು ಸಿದ್ಧರಿದ್ದೇವೆ ಸಾಹೇಬರೇ ನಾವು ಯಾವುದಕ್ಕೂ ಹೆದರುವವರಲ್ಲ. ನಮ್ಮ ದೇಶ ಸ್ವಾತಂತ್ರ್ಯವಾಗಬೇಕು. ಮಹಾತ್ಮಾ ಗಾಂಧೀಜಿಯವರಿಗೆ ಜಯವಾಗಲಿ ಒಂದೇ ಮಾತರಂ ಎಂದು ಘೋಷಣೆಕೂಗಿದರು. ಇವರನ್ನು ವಿಚಾರಣೆಗೊಳಪಡಿಸಿದ ನ್ಯಾಯಾಧೀಶರು ನಿಮಗೆ ಶಿಕ್ಷೆ ವಿಧಿಸುವ ಅಧಿಕಾರ ನನಗಿಲ್ಲ ಒಳ್ಳೆಯದಾಗಲಿ ಎಂದು ಹೇಳಿದರು. ಮುಂದೆ ಬ್ರಿಟೀಷ್ ಸರಕಾರ ವಿಶೇಷ ನ್ಯಾಯಾಧೀಶರನ್ನು ನೇಮಿಸಿ ಸುದೀರ್ಘಕಾಲ ಅಂದರೆ ಆರು ತಿಂಗಳಗಳ ಕಾಲ ವಿಚಾರಣೆ ನಡೆಸಿದರು. ಮುಳವಾಡ ಸರಕಾರಿ ಪ್ರವಾಸಿ ಮಂದಿರದ ಕಾವಲುಗಾರರನ್ನು ಸಾಕ್ಷಿಗಳಾಗಿ ಕರೆತಂದಿದ್ದು, ಇವರೇ ಏನು ಅಂದಿನ ರಾತ್ರಿ ಬೆಂಕಿ ಇಟ್ಟವರೆಂದು ಕೇಳಲು ಆ ಬಡಪಾಯಿಗಳು ಗೊತ್ತಿಲ್ಲ ಸಾಹೇಬರೇ ಅವರೆಲ್ಲ ಮುಖಕ್ಕೆಲ್ಲ ಬಟ್ಟೆ

ಮುಚ್ಚಿಕೊಂಡಿದ್ದರು. ಗೊತ್ತಿಲ್ಲ ಎಂದು ಹೇಳಿದರು. ಒಳಗೊಳಗೆ ಇವರನ್ನು ಕಂಡು ಅವರು ಅವರನ್ನು ಕಂಡ ಇವರು ನಗುತ್ತಿದ್ದರು. ಮುಂದೆ ವಿಶೇಷ ನ್ಯಾಯಾಧೀಶರು ವಿಚಾರಣೆ ಕೊನೆಯ ಜಜ್‌ಮೆಂಟ್ ನೀಡುವದಿನ ಸಾರವಾಡ ಗ್ರಾಮದ ನೂರಾರು ಜನ ಎತ್ತಿನಗಾಡಿಗಳಲ್ಲಿ ಬರುತ್ತಾರೆ ಹಾಗೂ ಸುತ್ತಮುತ್ತಲ ಗ್ರಾಮದ ಜನ ಇವರಿಗೇನು ಶಿಕ್ಷೆಯಾಗುವುದೋ ಎಂದು ಕಾತರದಿಂದ ಕೇಳಲು ಕೋರ್ಟ ಆವರಣದಲ್ಲಿ ಬಂದು ಸೇರಿದ್ದರು. ಸರಿಯಾಗಿ ಬೆಳಗಿನ ವೇಳೆಯಲ್ಲಿ ಸೇರಿದ ನ್ಯಾಯಾಲಯದ ತುಂಬೆಲ್ಲ ಜನವೋ ಜನ ವಿಶೇಷ ನ್ಯಾಯಾಧೀಶರು ಇವರೆಲ್ಲರಿಗೆ ಐದು ವರ್ಷಗಳ ಸಾದ ಶಿಕ್ಷೆ, ಒಂದು ನೂರು ರೂಪಾಯಿಗಳ ದಂಡ, ದಂಡ ಕೊಡಲು ಒಪ್ಪದಿದ್ದರೇ ಮತ್ತೊಂದು ವರ್ಷಗಳ ಶಿಕ್ಷೆ ಅನುಭವಿಸಬೇಕೆಂದು ಶಿಕ್ಷೆ ನೀಡಿ ಕೈತೊಳೆದುಕೊಂಡರು. ಅವರಲ್ಲಿ ಬಸಪ್ಪ ಬಳಗಲಿಯವರು 'ಸಾಹೇಬರೇ ಹೆಣನ ಹೊತ್ತೆವು ಅದರ ಕೂದಲ ಭಾರ ಆಗತಾವೇನ್ರಿ' ಎಂದು ಪ್ರತಿಕ್ರಿಯೆ ನೀಡಿ ಭಾರತ ಮಾತಾ ಕೀ ಜೈ, ಒಂದೇ ಮಾತರಂ ಎಂದು ಜಯಘೋಷ ಮಾಡಿದರು. ವಿಜಯಪುರ ಕೋರ್ಟ ಆವರಣದಿಂದ ದರ್ಗಾಜೇಲಿನವರೆಗೆ ಸಾರವಾಡದ ಎಲ್ಲ ಹಿರಿಯರು ಇವರೊಂದಿಗೆ ಕಾಲು ನಡಿಗೆಯಿಂದ ನಡೆಯುತ್ತ ಇಂಥ ಮುತ್ತಿನಂಥ ಯುವಕರನ್ನು ಜೈಲಿಗೆ ಕಳಿಸಬೇಕಲ್ಲ ಎಂದು ಕಣ್ಣೀರು ಹಾಕುತ್ತ ದುಗುಡದಿಂದ ಬೀಳ್ಕೊಡಲು ಬಂದಿದ್ದರು. ಇಂದಿನ ಸೋಲಾಪೂರ ರಸ್ತೆಯ ದರ್ಗಾ ಕ್ರಾಸಿನವರೆಗೆ ಬಂದ ಸಾರ್ವಜನಿಕರನ್ನು ಮರಳಿ ಹೋಗಲು ಪೊಲೀಸ ಅಧಿಕಾರಿಗಳು ತಿಳಿಸುತ್ತಾರೆ. ಭಾರವಾದ ಹೃದಯದಿಂದ ಬೀಳ್ಕೊಂಡು ಹೋಗುವ ಸಾರವಾಡದ ಮುಖಂಡರಿಗೆ ಪೊಲೀಸರು ನಮಗೇನಾದರು ಖುಷಿ ಕೊಡ್ರಿ ಎಂದು ಹೇಳುತ್ತಾರೆ. ಆಗ ನೆರೆದ ಜನ ಭಾರವಾದ ಹೃದಯದಿಂದಿರುವಾಗ ಸಿಟ್ಟು ಬಂದು ಅಲ್ರೋ ಬಂಗಾರದಂತಹ ಈ ತರುಣರನ್ನು ಜೈಲು ಶಿಕ್ಷೆಗಾಗಿ ಕರೆದುಕೊಂಡು ಹೋಗುತ್ತೀರಿ. ನಿಮಗೆ ನಾಚಿಕೆಯಾಗುವುದಿಲ್ಲವೇ ಎಂದು ಸಿಟ್ಟಿನಿಂದ ದಬಾಯಿಸಿ ಬಾಯಿ ಮುಚ್ಚಿಸಿದರು. ವೀರಯೋಧರನ್ನು ಭಾರವಾದ ಹೃದಯದಿಂದ ಬೀಳ್ಕೊಂಡು ಸಾರವಾಡ ಗ್ರಾಮದ ಹಾದಿ ಹಿಡಿದರು. ಹೀಗೆ ವಿಚಾರಣಾಧೀನ ಕೈದಿಗಳಾಗಿ ಸುಮಾರು ಆರು ತಿಂಗಳುಗಳ ಕಾಲ ವಿಜಯಪುರ ದರ್ಗಾ ಜೈಲಿನಲ್ಲಿ ಕಳೆದರು.

### ಯರವಾಡಾ ಜೈಲಿನ ಕಾರಾಗೃಹವಾಸ :

ರಾಜಕೀಯ ಕೈದಿಗಳಾದ ಇವರೆಲ್ಲರನ್ನು ಮುಂದೆ ಮಹಾರಾಷ್ಟ್ರದ ಪುಣಾ



ಪಟ್ಟಣದ ಹತ್ತಿರವಿರುವ ಯರವಾಡಾ ಜೈಲಿಗೆ ವರ್ಗಾವಣೆ ಮಾಡಿದರು. ಈ ಯರವಾಡಾ ಜೈಲಿನಲ್ಲಿ ದೇಶದ ಮಹಾನ್ ನೇತಾರರನ್ನು ಇರಿಸಿದ್ದರು. ಪೂಜ್ಯ ಮಹಾತ್ಮಾ ಗಾಂಧೀಜಿಯವರನ್ನೂ ಸಹ ರಾಜಕೀಯ ಕೈದಿಗಳಾಗಿ ಇರಿಸಲಾಗಿತ್ತು. ಈ ಸಾರವಾಡದ ಸ್ವಾತಂತ್ರ್ಯ ಯೋಧರಿಗೆ ಜೈಲಿನಲ್ಲಿ ಮೊದಲ ದಿನ ಜೈಲಿನಲ್ಲಿರುವ ಕ್ರಿಮಿನಲ್ ಕೈದಿಗಳು ನೆಯ್ದ ಜಮಖಾನೆಗಳನ್ನು ಮಡಿಚಿ ಬಂಡಲ್ ಮಾಡಲು ಹಚ್ಚಲಾಯಿತು. ಆ ಒಂದು ವಾರದಲ್ಲಿ ಇವರು ಮಡಚಿದ ಎಲ್ಲ ಜಮಖಾನೆಗಳನ್ನು ಚಾಕುವಿನಿಂದ ಕತ್ತರಿಸಿ ಮಡಿಕೆಹಾಕಿ ಕಳಿಸಲಾಗಿತ್ತು. ಖರೀದಿಸಿದ ವ್ಯಾಪಾರಸ್ಥರು ಹರಿದು ಹೋದ ಜಮಖಾನೆಗಳನ್ನು ಹಾಗೆ ವಾಪಸ್ಸು ಯರವಾಡಾ ಜೈಲಿಗೆ ಕಳಿಸಿದರು. ಆಗ ಅಲ್ಲಿಯ ಅಧಿಕಾರಿಗಳು ಈ ಜಮಖಾನೆಗಳನ್ನು ಮಡಿಕೆ ಹಾಕಿದವರಾರೆಂದ ಪರಿಶೀಲಿಸಲಿಕ್ಕಾಗಿ ಸಾರವಾಡದ ಸ್ವಾತಂತ್ರ್ಯಯೋಧರೆಂದು ತಿಳಿಯಿತು. ಸದರಿಯವರನ್ನು ವಿಚಾರಿಸಿದಾಗ ನಮಗೇನು ಕ್ರಿಮಿನಲ್ ಕೈದಿಗಳೆಂದು ತಿಳಿದಿರುವಿರೇನು. ನಾವು ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ವೀರಯೋಧರು ರಾಜಕೀಯ ಕೈದಿಗಳೆಂದು ತಿಳಿಸಿದರು ಮತ್ತು ಕೆಲವು ದಿನಗಳಾದ ನಂತರ ಇವರೆಲ್ಲರಿಗೆ ಕುರಿ ಉಣ್ಣೆಯನ್ನು ಹಿಂಜಲು ತಿಳಿಸುತ್ತಾರೆ. ಇವರು ಆಯಿತು ಎಂದು ಎಲ್ಲ ಉಣ್ಣೆಯನ್ನು ಹಿಂಜಿ ತಲೆಯ ಟೋಪನ್ ಮೀಸೆ ಗಡ್ಡ ಮಾಡಿಕೊಂಡು ಕುಣಿದಾಡುತ್ತಾರೆ. ಗಾಳಿಗೆ ತೂರಿ ನಾಟಕವಾಡುತ್ತಿರುವುದನ್ನು ಕಂಡ ಯರವಾಡಾ ಕಾರಾಗೃಹ ಅಧಿಕಾರಿಗಳು ಕೈಮುಗಿದು ಇಂದಿನಿಂದ ನೀವು ಯಾವ ಕೆಲಸವನ್ನು ಮಾಡಬೇಡಿರೆಂದು ಕೇಳಿಕೊಂಡು ಆರಾಮವಾಗಿರಿ ಎಂದು ತಿಳಿಸಿದರು.

### ಜೈಲಿನಲ್ಲಿ ನೂಲುವ ನಾಟಕ ಮಾಡುವುದು :

ಮುಂದೆ ಇವರೆಲ್ಲ ಹಿಂದಿ ಭಾಷೆಯನ್ನು ಕಲಿಯುವುದು ನೂಲುವ ಹಾಗೂ ನೂತ ನೂಲಿನಿಂದ ಖಾದಿಬಟ್ಟೆಗಳನ್ನು ನೆಯುವ ಕಾರ್ಯದಲ್ಲಿ ಹಾಗೂ ಯೋಗ, ವ್ಯಾಯಾಮ ಮುಂತಾದ ಕಾರ್ಯಕ್ರಮಗಳಲ್ಲಿ ತೊಡಗಿಕೊಂಡರು. ಸಾರವಾಡ ಗ್ರಾಮದಲ್ಲಿರುವಾಗ ಈ ಎಲ್ಲ ತರುಣರು ವಿಜಯಪುರ ಪಟ್ಟಣದಲ್ಲಿ ಬೇರೆ ಬೇರೆ ಕಂಪನಿ ನಾಟಕಗಳು ಬಂದಾಗ ಹಾಗೂ ಗ್ರಾಮದ ಸುತ್ತಮುತ್ತಲ ಹಳ್ಳಿಗಳಲ್ಲಿ ನಾಟಕ ಬಯಲಾಟ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳಾದಾಗ ಎತ್ತಿನಗಾಡಿ ಕಟ್ಟಿಕೊಂಡು ಹೋಗಿ ನೋಡಿ ಬರುತ್ತಿದ್ದರು. ಗ್ರಾಮದಲ್ಲಿ ಜಾತ್ರೆ ಉತ್ಸವಗಳಲ್ಲಿ ಅಕ್ಷಯಾಂಬರ ಮುಂತಾದ ನಾಟಕಗಳನ್ನಾಡಿದ್ದರು. ವಿಜಯಪುರದಲ್ಲಿ ಆಡುತ್ತಿರುವ ಒಂದು ಹೊಸ

ಸಾಮಾಜಿನ ನಾಟಕ ‘ಜೀವನ ಸಂಗೀತವನ್ನು ಪ್ರತಿದಿನ ನೋಡಿ ನೋಡಿ ಪಾತ್ರಗಳ ಮಾತುಗಳನ್ನು ಬಾಯಿಪಾಠ ಮಾಡಿ ಇನ್ನು ಆ ಕಂಪನಿ ವಿಜಯಪುರದಿಂದ ಮರಳಿ ಹೋಗುವ ಪೂರ್ವದಲ್ಲಿಯೇ ಇವರು ಸಾರವಾಡದಲ್ಲಿ ಈ ನಾಟಕವಾಡಿಸಿ ಕಂಪನಿ ನಾಟಕದ ಮಾಲಿಕನಿಂದಲೇ ಉದ್ಘಾಟನೆ ಮಾಡಿಸಿ ಅಚ್ಚರಿ ಮೂಡಿಸಿದ್ದರು. ಇಂಥ ನಾಟಕಗಳ ಖಯಾಲಿ ಜನ ಯರವಾಡಾ ಜೈಲಿನಲ್ಲಿ ಸುಮ್ಮನೆ ಕೊಡುವುದಿಲ್ಲ. ಸಾರವಾಡದ ಸ್ವಾತಂತ್ರ್ಯಯೋಧರೊಂದಿಗೆ ಯರವಾಡಾ ಜೈಲಿನಲ್ಲಿರುವ ವಿವಿಧ ಭಾಗಗಳಿಂದ ಬಂದ ರಾಜಕೀಯ ಕೈದಿಗಳನ್ನು ಒಳಗೊಂಡ ‘ಜೀವನ ಸಂಗೀತ’ ಎಂಬ ಸಾಮಾಜಿಕ ಹಾಗೂ ಕುರುಕ್ಷೇತ್ರವೆಂಬ ಪೌರಾಣಿಕ ನಾಟಕಗಳನ್ನು ಆಡಲು ಮುಂದಾದರು. ಜೈಲಿನಲ್ಲಿ ನೆಯ್ದ ದೊಡ್ಡ ದೊಡ್ಡ ಜಮಖಾನೆಗಳಿಗೆ ಬಣ್ಣ ಬಳಿದು ಪರದೆಗಳನ್ನು ತಯಾರಿಸಿ ಅದ್ದೂರಿಯಾದ ನಾಟಕಗಳನ್ನು ಆಡಲು ಮುಂದಾದರು. ಈ ದೇಶಭಕ್ತರ ಅಭಿನಯ ಪ್ರಾಮಾಣಿಕವಾದ ಮುಗ್ಧತೆಯನ್ನು ಕಂಡ ಕಾರಾಗೃಹದ ಅಧಿಕಾರಿಗಳು ಇವರ ಕಾರ್ಯಗಳಿಗೆ ಪ್ರೋತ್ಸಾಹಿಸಿದರು. ಇವರ ಗುಂಪಿನಲ್ಲಿರುವ ಶ್ರೀ ಚನ್ನಪ್ಪ ಗುಡದಿನ್ನಿಯವರ ಭೀಮನ ಪಾತ್ರ ಅಮೋಘವಾಗಿತ್ತು. ಧ್ವನಿವರ್ಧಕಗಳಿಲ್ಲದ ಸಂದರ್ಭದಲ್ಲಿ ಅವರಾಡುತ್ತಿದ್ದ ಭೀಮನ ವೀರಾವೇಶದ ಮಾತುಗಳು ಯರವಾಡಾ ಕಾರಾಗೃಹದಾಚೆ ಪುಣೆನಗರಕ್ಕೂ ಕೇಳಿಸುತ್ತಿತ್ತು. ಅದಕ್ಕೆ ಕಾರಾಗೃಹ ಅಧಿಕಾರಿಗಳು ದಯವಿಟ್ಟು ಸಾವಕಾಶವಾಗಿ ಮಾತನಾಡಲು ವಿನಂತಿಸುತ್ತಿರುವುದಾಗಿ ಹೇಳುತ್ತಿದ್ದರು. ಅದೇ ರೀತಿ ದೇಶಭಕ್ತಿಯ ನಾಟಕಗಳನ್ನು ಆಡಿ ಎಲ್ಲ ಕಾರಾಗೃಹವಾಸಿಗಳನ್ನು ಹಾಗೂ ಜೈಲು ಅಧಿಕಾರಿಗಳನ್ನು ಸಂತೋಷಪಡಿಸಿ ತಮ್ಮ ದೇಶಪ್ರೇಮ ಒಕ್ಕಟ್ಟಿನ ಬಲವನ್ನು ಪ್ರದರ್ಶಿಸಿದರು. ದಿನದಿಂದ ದಿನಕ್ಕೆ ಬೆಳೆಯುತ್ತಿರುವ ಇವರ ಒಕ್ಕಟ್ಟನ್ನು ಕಂಡ ಕೆಲ ಕಾರಾಗೃಹದ ಅಧಿಕಾರಿಗಳು ಒಳಗಿಂದೊಳಗೆ ಹಲ್ಲುಮಸೆಯುತ್ತ ತಮ್ಮ ಕುಹಕ ಕಾರಸ್ಥಾನದಿಂದ ಸಾರವಾಡದ ಸ್ವಾತಂತ್ರ್ಯ ಯೋಧರ ಒಕ್ಕಟ್ಟು ಮುರಿಯಲು ಇವರಲ್ಲಿ ಅರ್ಧ ಜನರನ್ನು ಬೆಳಗಾವಿ ಪಟ್ಟಣದ ಸಮೀಪವಿರುವ ಹಿಂಡಲಗಾ ಜೈಲಿಗೆ ಸ್ಥಳಾಂತರಿಸುತ್ತಾರೆ. ಇದರಿಂದ ಧೃತಿಗೆಡದ ಈ ವೀರಯೋಧರು ಹೋದ ಕಡೆಗಳಲ್ಲಿ ತಮ್ಮ ಛಾಪು ಮೂಡಿಸಿದ್ದಾರೆ. ಪ್ರತಿದಿನ ಚರಕದಲ್ಲಿ ನೂಲುವುದು ಖಾದಿ ಬಟ್ಟೆಗಳನ್ನೆ ತೊಡುವುದರ ಮೂಲಕ ದೇಶಪ್ರೇಮ ಮೆರೆದಿರುತ್ತಾರೆ. ಯರವಾಡಾ ಜೈಲಿನ ಆವರಣದಲ್ಲಿ ಒಂದು ಹದ್ದು ತನ್ನ ಬಾಯಲ್ಲಿ ಹಿಡಿದು ತಂದಿರುವ ಒಂದು ಕೋಳಿಮರಿ ನೆಲಕ್ಕೆ ಬಿದ್ದು ಒದ್ದಾಡುವುದನ್ನು ಕಂಡ ಈ ವೀರಯೋಧರು ಅದನ್ನು ರಕ್ಷಿಸಿ ಆರೈಕೆ ಮಾಡಿ



ಪ್ರತಿದಿನ ಅದಕ್ಕೆ ಕಾಳುಕಡಿಗಳನ್ನು ಹಾಕಿ ಪ್ರೀತಿಯಿಂದ ಜೋಪಾನ ಮಾಡಿ ತಾವು ಬಿಡುಗಡೆಯಾಗಿ ಬರುವಾಗ ಕಾರಾಗೃಹದ ಅಧಿಕಾರಿಯವರಿಗೆ ನೀಡುತ್ತಾರೆ. ಅವರು ಇವರ ಪ್ರಾಣಿಪಕ್ಷಿಗಳ ಪ್ರೇಮವನ್ನು ಕೊಂಡಾಡಿದರು ಹಾಗೂ ಪೂಜ್ಯ ಮಹಾತ್ಮಾಗಾಂಧೀಜಿಯವರು ಯರವಾಡಾ ಜೈಲಿನಲ್ಲಿ ರಾಜಕೀಯ ಕೈದಿಗಳಾಗಿ ಇರುವಾಗ ಅವರು ಆಡಿನ ಹಾಲು ಮಾತ್ರ ಕುಡಿಯುತ್ತಿದ್ದಿದ್ದರಿಂದ ಮಹಾತ್ಮಾಜಿಯವರಿಗಾಗಿ ಕಾರಾಗೃಹದಲ್ಲಿ ಆಡುಸಾಕಿದ್ದರು. ಅವುಗಳಿಂದ ನಾಲ್ಕಾರು ಮರಿಗಳಾಗಿದ್ದವು ಅವುಗಳನ್ನು ಸಹ ಈ ವೀರತರುಣಯೋಧರು ಪ್ರೀತಿಯಿಂದ ಮೈದಡವಿ ಊಟದಲ್ಲಿ ಹೆಚ್ಚಾದ ಕಟಕರೊಟ್ಟಿ ತಿನಿಸಿ ಖುಷಿಪಡುತ್ತಿದ್ದರು.

## ಸ್ವಾತಂತ್ರ್ಯಯೋಧರ ಕುಟುಂಬದ ಮಹಿಳೆಯರ ಸ್ಥಿತಿ ಗತಿ:

ಇತ್ತ ಸ್ವಾತಂತ್ರ್ಯ ಯೋಧರು ಕಾರಾಗೃಹದಲ್ಲಿದ್ದ ಸಂದರ್ಭದಲ್ಲಿ ಸಾರವಾಡ ಗ್ರಾಮದಲ್ಲಿ ಇವರ ಹೆಂಡರು, ಮಕ್ಕಳು, ತಂದೆ ತಾಯಿಯರ ಗೋಳು ಹೇಳತೀರದು. ಅಂದಿನ ಸಂದರ್ಭದಲ್ಲಿ ಜೈಲಿಗೆ ಹೋಗಿದ್ದಾರೆ ಎಂದರೆ ಗ್ರಾಮದ ಜನ ಒಂದು ರೀತಿಯಿಂದ ಅಸ್ಪೃಶ್ಯರಂತೆ ಕಾಣುತ್ತಿದ್ದರು. ಹೊಲ ಮನೆ ಆಸ್ತಿ ಇದ್ದರೂ ಮನೆಯಲ್ಲಿ ದುಡಿಯುವವರಿಲ್ಲದೆ ಬರಗಾಲ, ಅತಿವೃಷ್ಟಿ, ಅನಾವೃಷ್ಟಿಯಿಂದ ಬೆಳೆ ಸರಿಯಾಗಿ ಬಾರದೆ, ರಾಗಿ ಬರ, ಡೋಗಿ ಬರ, ಪ್ಲೇಗು ಕಾಲರಾ ಮುಂತಾದ ರೋಗಗಳು ಬಂದು ಗ್ರಾಮೀಣ ಜನ ಹೈರಾಣಾಗಿದ್ದರು. ಸಾರವಾಡದ ಹೆಣ್ಣು ಮಕ್ಕಳು ತಮ್ಮ ಮನೆಯ ಮೈಲಿಗೆ ಬಟ್ಟೆಗಳನ್ನು ಮಡಿ ಮಾಡಲು ಗ್ರಾಮದ ಸಮೀಪದಲ್ಲಿ ಹರಿಯುವ ದೋಣಿ ನದಿಗೆ ಹೋಗುವುದು ವಾಡಿಕೆ. ಇನ್ನು ಆ ಸಮಯದಲ್ಲಿ ದೋಣಿ ನದಿಗೆ ಸೇತುವೆಯನ್ನು ಕಟ್ಟಿರಲಿಲ್ಲ. ದೊಡ್ಡ ದೊಡ್ಡ ಕಲ್ಲುಗಳನ್ನು ಜೋಡಿಸಿ ವಾಹನಗಳು ಎತ್ತಿನ ಗಾಡಿಗಳು, ಜನರಿಗೆ ಓಡಾಡಲು ಅನುಕೂಲ ಮಾಡಿಕೊಟ್ಟಿದ್ದರು. ಆ ಕಲ್ಲು ರಸ್ತೆಯ ಪಕ್ಕದಲ್ಲಿಯೇ ಈ ಗ್ರಾಮದ ಹೆಣ್ಣು ಮಕ್ಕಳು ಬಟ್ಟೆ ತೊಳೆಯುತ್ತಿದ್ದರು. ಈ ಮಾರ್ಗದಲ್ಲಿ ಬರುವ ಬ್ರಿಟೀಷ ಅಧಿಕಾರಿಗಳು ತಮ್ಮ ವಾಹನಗಳನ್ನು ಜೋರಿನಿಂದ ನೀರಲ್ಲಿ ಓಡಿಸಿ ಹೆಣ್ಣು ಮಕ್ಕಳು ಬಟ್ಟೆ ನೆನೆಯುವಂತೆ ಅವರಿಗೆ ಹಿಡಿದುಕೊಳ್ಳಲು ಹೋಗುವಂತೆ ನಟಿಸಿ ಆ ಹೆಣ್ಣು ಮಕ್ಕಳು ತಮ್ಮ ಬಟ್ಟೆಗಳನ್ನು ನೀರಲ್ಲಿಯೇ ಬಿಟ್ಟು ತಮ್ಮ ಮಾನ ರಕ್ಷಣೆಗಾಗಿ ಓಡಿ ಹೋದದ್ದು ಉಂಟು. ಇದನ್ನು ಕಂಡ ಬ್ರಿಟೀಷ ಅಧಿಕಾರಿಗಳು ತಮಾಷೆ ಮಾಡಿ ನಗುತ್ತಿದ್ದರು. ಹರಿವ ನೀರಿನ ರಭಸಕ್ಕೆ ಇವರ ಬಟ್ಟೆಗಳೆಲ್ಲ ತೇಲಿಹೋಗಿ ತೊಂದರೆಯಾದದ್ದು ಉಂಟು

ಇನ್ನೂ ಮನೆಗಳಲ್ಲಿ ಗಂಡ ಜೈಲಿಗೆ ಹೋಗಿದ್ದಾನೆಂದು ಮನೆಯ ಅತ್ತೆ, ನಾದಿನಿ, ನೆಗೆಣ್ಣಿಯವರ ನೆರೆಹೊರೆಯವರ ಕೀಟಲೆ ಮಾತು ಗಂಡನಿಲ್ಲದೆ ಅನುಭವಿಸುವ ವನವಾಸ ಅಸದಳವಾದ ನೋವನ್ನು ಆ ಗರತಿಯರು ಅನುಭವಿಸುವಂತಾಗಿತ್ತು. ಎಲ್ಲವನ್ನು ಸಹಿಸಿಕೊಂಡ ಈ ಗರತಿಯರು ತಮ್ಮ ಪತಿರಾಯರು ಬೇಗ ಕಾರಾಗೃಹದಿಂದ ಬಿಡುಗಡೆಯಾಗಿ ಬರಲಿ ಎಂದು ಪ್ರತಿದಿನ ದೇವರಲ್ಲಿ ಭಕ್ತಿಯಿಂದ ಬೇಡಿಕೊಳ್ಳುತ್ತಿದ್ದರು.

**ಬಾಗಾದಿ ಬಲಕಿರಲಿ । ವೈರಿ ತಾ ಎಡಕಿರಲಿ**
**ಚಾಡಿ ನಿನಮನಿ ಎದುರಿರಲಿ । ಸಾರವಾಡಧೀರ**
**ದಯವಿರಲಿ ನಿಂದು ನನಮ್ಯಾಲ ॥**

ಹೀಗೆ ನನ್ನ ನೆಗಿಯಣ್ಣಿ ವೈರತ್ವವಿರುವವಳು ಚಾಡಿಕೋರತಿಯಂಥವರು ನನ್ನ ನೆರೆಹೊರೆಯಲ್ಲಿರಲಿ ಎಂದು ಮುಖ್ಯವಾಗಿ ಸಾರವಾಡಧೀಶನ ದಯ ಎಂದೆಂದಿಗೂ ನನ್ನ ಮೇಲಿರಲಿ ಎಂದು ಆ ದೇವರಲ್ಲಿ ತನ್ನ ಅಳಲನ್ನು ತೋಡಿಕೊಂಡು ತನ್ನವರು ಎಲ್ಲೇ ಇರಲಿ ಆರೋಗ್ಯವಾಗಿರಲಿ ಬಹು ಬೇಗನೆ ತನ್ನೂರಿಗೆ ಬರಲಿ ಎಂದು ಪ್ರತಿದಿನ ದೇವರಲ್ಲಿ ಮೊರೆಯಿಡುತ್ತಿದ್ದರು.

## ಸ್ವಾಂತ್ರ್ಯ ಯೋಧರಿಗೆ ಜೈಲಿನಿಂದ ಬಿಡುಗಡೆ ಭಾಗ್ಯ :

ಇತ್ತ ಸಾರವಾಡದ ಸ್ವಾತಂತ್ರ್ಯ ಯೋಧರು ಹಾಗೂ ಹೀಗೂ ಮೂರು ವರ್ಷಗಳನ್ನು ಹತ್ತೊಂಬತ್ತನೂರಾ ನಲವತ್ತೈದರಲ್ಲಿ ಮುಗಿಸುವ ಸಂದರ್ಭದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಕೇಂದ್ರ ಕಚೇರಿ ದೆಹಲಿಯಿಂದ ಪಂಡಿತ ಜವಾಹರಲಾಲ ನೆಹರುರವರು ಹತ್ತೊಂಬತ್ತ ನೂರಾ ನಲವತ್ತೆರಡರ ಚಲೇಜಾವ ಚಳುವಳಿಯಲ್ಲಿ ಭಾಗವಹಿಸಿ ಹೋರಾಡಿ ಜೈಲುವಾಸವನ್ನನುಭವಿಸುತ್ತಿರುವ ಎಲ್ಲ ಭಾರತೀಯರನ್ನು ಬಿಡುಗಡೆಗೊಳಿಸಬೇಕೆಂದು ಬ್ರಿಟೀಷ ಸರ್ಕಾರಕ್ಕೆ ಸಾರ್ವತ್ರಿಕ ಕ್ಷಮೆಯನ್ನು ಕೇಳಲಾಗಿ ಭಾರತದ ಎಲ್ಲ ಜೈಲುಗಳಲ್ಲಿ ತುಂಬಿ ತುಳುಕುತ್ತಿರುವ ನವ ತರುಣ ದೇಶಭಕ್ತರನ್ನು ಬಿಡುಗಡೆಗೊಳಿಸಲು ಆದೇಶಿಸಿದರು. ಅದರಂತೆ ಯರವಾಡಾ ಹಾಗೂ ಹಿಂಡಲಗಾ ಜೈಲಿನಲ್ಲಿರುವ ಸಾರವಾಡದ ಎಲ್ಲ ಸ್ವಾತಂತ್ರ್ಯಯೋಧರ ಬಿಡುಗಡೆಯಾಯಿತು. ಜೈಲಿನಿಂದ ಬಿಡುಗಡೆಯಾಗುವುದೆಂಬ ವಿಷಯ ಈ ಯೋಧರ ಕಿವಿಗೆ ಬಿದ್ದ ತಕ್ಷಣ ರೋಮಾಂಚನಗೊಂಡ ಯೋಧರು ತಾವು ಧರಿಸಿರುವ ಜೈಲಿನ ಬಟ್ಟೆಗಳನ್ನು ಗುಂಡಿಯನ್ನು ಕಳಚದೆ ಹಾಗೆ ನಿಂತ ನಿಂತಲ್ಲೆ ಹರಿದುಹಾಕಿ ಕೇಕೇ ಹಾಕಿ



ಖುಷಿಪಟ್ಟದ್ದುಂಟು. ಒಂದೆಡೆ ಡಾ॥ ಸೋಮಶೇಖರ ಇಮ್ರಾಪುರರವರು ಪ್ರೀತಿ ಎಂಬ ಕವನದಲ್ಲಿ

**‘ಈ ಪ್ರೀತಿ ಹರಿದು ಹರಪಲ್ಲೆಮಾಡಿ**
**ಗಾಳ್ಯಾಗ ತೂರಲೇನೆ ಆ ಗಾಳಿಹಿಡಿದು**
**ಗಡಿಗ್ಯಾಗ ಹಾಕಿ ಕಲ್ಲಿಗೆ ಹೇರಲೇನ’**

ಅತಿ ಸಂತೋಷವಾದಾಗ ಏನು ಮಾಡಲಿ ಏನು ಬಿಡಲಿ ಯಾರಿಗೆ ಹೇಳಲಿ ಎಂದು ಚಡಪಡಿಸಿದಂತೆ ಜೈಲುವಾಸದಿಂದ ಸ್ವಾತಂತ್ರ್ಯ ಹರಣಗೊಂಡ ಕತ್ತಲೆಯಗೂಡಿನಿಂದ ಬೆಳಕಿನೆಡೆಗೆ ಸ್ವಾತಂತ್ರ್ಯದೆಡೆಗೆ ಹೊರ ಬರುವಾಗ ಆ ವ್ಯಕ್ತಿಗಳಿಗೆ ಅನಿಸಿದ ಅನಿಸಿಕೆಯನ್ನು ವರ್ಣಿಸಲಸದಳವಾದುದು.

## ಬಿಡುಗಡೆಗೊಂಡ ವೀರಯೋಧರಿಗೆ ಮಾನ ಸನ್ಮಾನದ ಬೀಳ್ಕೊಡುಗೆ :

ಯರವಾಡಾ ಕಾರಾಗೃಹದಿಂದ ಬಿಡುಗಡೆ ಹೊಂದಿ ಹೊರ ಬಂದ ಈ ವೀರಯೋಧರಿಗೆ ಪೂಣಾ ನಗರದ ಕಾಂಗ್ರೆಸ್ ಕಮೀಟಿಯವರು ಅದ್ದೂರಿಯಾದ ಹಾರ ತುರಾಯಿ ಹಾಕಿ ಭವ್ಯ ಸ್ವಾಗತ ಕೋರಿ ಅಲಂಕೃತ ವಾಹನದಲ್ಲಿ ಇವರೆಲ್ಲರನ್ನು ಕೂಡ್ರಿಸಿ ಪೂನಾ ನಗರದಲ್ಲೆಲ್ಲ ಮೆರವಣಿಗೆ ಮಾಡಿ ಅವರ ಗ್ರಾಮಗಳಿಗೆ ಬೀಳ್ಕೊಡುತ್ತಾರೆ. ಇತ್ತ ಪುಣಾದಿಂದ ವಿಜಯಪುರಕ್ಕೆ ಬಂದ ಸಾರವಾಡದ ಯುವದೇಶಭಕ್ತರನ್ನು ಭವ್ಯವಾದ ವೇದಿಕೆಯಲ್ಲಿ ಸತ್ಕರಿಸಿ ಅದ್ದೂರಿ ಮೆರವಣಿಗೆಯೊಂದಿಗೆ ಸಾರವಾಡ ಗ್ರಾಮಕ್ಕೆ ಬೀಳ್ಕೊಟ್ಟರು. ಗ್ರಾಮದ ತರುಣರು ದೇಶಾಭಿಮಾನಿಗಳು ಇವರೆಲ್ಲರನ್ನು ಆತ್ಮೀಯವಾಗಿ ಸ್ವಾಗತಿಸಿ ಸಾರವಾಡ ಗ್ರಾಮದಲ್ಲಿ ಹಬ್ಬದ ವಾತಾವರಣವೇ ಸೃಷ್ಟಿಯಾಗಿ ವಿಜಯೋತ್ಸವ ಆಚರಿಸಲಾಯಿತು.

ನವ ಉತ್ಸಾಹದ ನವಯುವಕರು ಜೈಲಿನಲ್ಲಿ ಪಡೆದ ಅನುಭವಗಳನ್ನು ಮಹಾತ್ಮಾಗಾಂಧೀಜಿಯವರ ಸ್ವಾತಂತ್ರ್ಯದ ಕನಸು ನನಸು ಮಾಡಲು ಸದಾಸಿದ್ಧರಾಗಿ ದೇಶಪ್ರೇಮ ಇಮ್ಮಡಿಗೊಂಡವರಾಗಿ ಪೊರೆ ಕಳಚಿದ ನಾಗಸರ್ಪದಂತೆ ಚುರುಕಾಗಿ ದೇಶದ ಸ್ವಾತಂತ್ರ್ಯದ ಕನಸುಕಾಣಹತ್ತಿದರು. ಭವ್ಯಭಾರತದ ಪ್ರಜೆಗಳೆಲ್ಲರ ತನು ಮನ ಧನವ ನೀಡಿ ಹೋರಾಡಿದ ಫಲವಾಗಿ ಲಕ್ಷಾಂತರ ವೀರಯೋಧರ ತ್ಯಾಗಬಲಿದಾನದ ಫಲವಾಗಿ ಮಹಾತ್ಮಾಗಾಂಧೀಜಿ, ಪಂಡಿತ ಜವಾಹರಲಾಲ ನೆಹರು, ಸುಭಾಸಚಂದ್ರಭೋಸ ಹಾಗೂ ಇನ್ನು ಹಲವಾರು ರಾಷ್ಟ್ರೀಯ ನಾಯಕರ ಹೋರಾಟದ ಫಲವಾಗಿ ಹತ್ತೊಂಬತ್ತ

ನೂರಾ ನಲವತ್ತೇಳರ ಅಗಸ್ಟ ಹದಿನೈದರಂದು ಭಾರತದೇಶ ಬ್ರಿಟೀಷರ ಕಪಿಮುಷ್ಠಿಯಿಂದ ಸರ್ವತಂತ್ರ ಸ್ವತಂತ್ರ್ಯ ರಾಷ್ಟ್ರವಾಗಿ ರೂಪಗೊಂಡಿತು. ಬ್ರಿಟೀಷರ ಯೂನಿಯನ್ ಜಾಕ್ ಧ್ವಜ ಕೆಳಗಿಳಿದು ಭಾರತೀಯ ತ್ರಿವರ್ಣಧ್ವಜ ದೇಶದ ತುಂಬೆಲ್ಲ ರಾರಾಜಿಸಿತು. ಆದರೆ ಅಖಂಡ ಭಾರತ ರೂಪುಗೊಳ್ಳದೆ ಖಂಡತುಂಡವಾದ ಭಾರತ ಸ್ವತಂತ್ರ್ಯವಾಯಿತು. ಸ್ವತಂತ್ರವಾದ ಹುರುಪಿನಲ್ಲಿ ತುಂಡು ತುಂಡಾದ ನೋವನ್ನು ಮರೆತು ವಿಜಯೋತ್ಸವ ಆಚರಿಸಲಾಯಿತು. ಪರತಂತ್ರದಲ್ಲಿದ್ದ ಭಾರತೀಯರಿಗೆ ಸ್ವತಂತ್ರದೇಶದ ಹಲವಾರು ಸಮಸ್ಯೆಗಳನ್ನು ಎದುರಿಸುವ ಸವಾಲು ಎದುರಾದಂತೆ, ಸಾರವಾಡದ ಈ ನವತರುಣರ ಪಡೆ ಗ್ರಾಮೋದ್ಧಾರ ವಿಧಾಯಕ ಕಾರ್ಯಕ್ರಮಗಳತ್ತ ಚಿತ್ತಹರಿಸಿದರು.

**ಸಾರವಾಡ ಮಾದರಿ ಗ್ರಾಮ ರೂಪಿಸುವೆಡೆಗೆ :**

ಈ ಸಾರವಾಡದ ನವತರುಣ ಸ್ವಾತಂತ್ರ್ಯಯೋಧರು ಮೊದಲು ಮಾಡಿದ ಗ್ರಾಮ ಸುಧಾರಣೆ ಕೆಲಸವೆಂದರೆ ಗ್ರಾಮದಲ್ಲಿ ಬ್ರಿಟೀಷ್ ಆಡಳಿತದಲ್ಲಿ ಗ್ರಾಮವನ್ನಾಳಿದ ಗೌಡರು, ಕುಲಕರ್ಣಿಯವರು, ವಾಲೀಕಾರರು ಇನ್ನುಳಿದ ಹಲವಾರು ಜನ ಸಾರವಾಡ ಗ್ರಾಮಕ್ಕೆ ಸುತ್ತ ಮುತ್ತಲಿನ ತೋಟಗಾರಿಕಾ ಗ್ರಾಮಗಳಾದ ಬಬಲೇಶ್ವರ, ಕಾಖಂಡಕಿ, ತಿಗಣಿಬಿದರಿ, ಹಲಗಣಿ ಮುಂತಾದ ಗ್ರಾಮಗಳಿಂದ ತರಕಾರಿ ಕಾಯಿಪಲ್ಲೆ, ತೊಪ್ಪಲು ಪಲ್ಲೆಗಳನ್ನು ತಲೆ ಮೇಲೆ ಹೊತ್ತು ಮಾಲಗಾರರು ತಂದ ಈ ಮುಂತಾದ ವಸ್ತುಗಳನ್ನು ಉಚಿತವಾಗಿ ಫಸಗಿ ಎಂದು ಅವರಿಂದ ಅವರು ತಂದ ವಸ್ತುಗಳಲ್ಲಿ ಅರ್ಧಕ್ಕರ್ಧ ಖಾಲಿಯಾಗುತ್ತಿತ್ತು. ಇದೆಲ್ಲಾ ಪರಕೀಯರ ಆಡಳಿತದಲ್ಲಿ ನಡೆಯುತ್ತಿತ್ತು. ಸ್ವತಂತ್ರ ಭಾರತದ ಸೂರ್ಯೋದಯದ ಈ ಸಂದರ್ಭದಲ್ಲಿ ಈ ಸ್ವಾತಂತ್ರ್ಯ ಯೋಧರು ಗ್ರಾಮದ ಫಸಗಿ ಎತ್ತುವವರನ್ನು ಪ್ರತಿಭಟಿಸಿ ಮಾಲಗಾರರ ಗೋಳನ್ನು ನಿವಾರಿಸಿ ವಿಜಯ ಸಾಧಿಸುತ್ತಾರೆ. ಎರಡನೆಯದಾಗಿ ಸಾರವಾಡ ಗ್ರಾಮದ ಪಕ್ಕದಲ್ಲಿ ಹಾಯ್ದು ಹೋಗುವ ವಿಜಯಪುರ ಜಮಖಂಡಿ ರಾಜ್ಯ ಹೆದ್ದಾರಿ ಹಾಗೂ ಗ್ರಾಮದ ಪಶ್ಚಿಮ ದಿಕ್ಕಿನಲ್ಲಿ ಹಿಂದೂರುದ್ರಭೂಮಿ ಇದ್ದು ಇದರಿಂದ ಗ್ರಾಮದ ಜನತೆಗೆ ತೊಂದರೆಯಾಗುತ್ತಿತ್ತು. ಇದನ್ನು ಅರಿತ ಸ್ವಾತಂತ್ರ್ಯ ಯೋಧರ ಮುಂದಾಳು ದೊಡ್ಡ ವಾಲಿಯವರು ಇದನ್ನು ವಿರೋಧಿಸಿ ಅಲ್ಲಿ ಒಂದು ಪತ್ರಿವನವನ್ನು ನಿರ್ಮಾಣ ಮಾಡಿ ವಾರಣಾಸಿಯಿಂದ ಸಂಗಮರಿಕಲ್ಲಿನ ಶಿವಲಿಂಗವನ್ನು ತಂದು ಪ್ರತಿಷ್ಠಾಪಿಸಿ ಉಪವನವನ್ನು ನಿರ್ಮಿಸಿ ಪವಿತ್ರವನವನ್ನಾಗಿ ಗಿಡಮರ ಹೂಬಳ್ಳಿಗಳನ್ನು ಬೆಳೆಸಿ ವಿಶ್ರಾಂತಿಧಾಮವನ್ನಾಗಿ ನಿರ್ಮಾಣ ಮಾಡಿ



ಪ್ರಕೃತಿ ಪ್ರೇಮಿಗಳಾದರು. ಮೂರನೆಯದಾಗಿ ಶ್ರೀಯುತರು ರಸ್ತೆ ಪಕ್ಕಗಳಲ್ಲಿ ಹೆಚ್ಚಿರುವ ಬೇವು, ಆಲ, ಹುಣಸೆ ಇನ್ನು ಹಲವಾರು ನೆರಳು ನೀಡುವ ಮರಗಳನ್ನು ಹಚ್ಚಿದಾಗ ಕುರಿಗಾಹಿಗಳು ಅವುಗಳ ಟೊಂಗೆಗಳನ್ನು ಕಡಿದು ಮರ ಬೆಳೆಯದಂತೆ ಮಾಡುತ್ತಿದ್ದರು. ಆಗ ದೊಡ್ಡ ವಾಲಿಯವರು ಅಂತ ಆಲದ ಹಾಗೂ ಬೇವಿನ ಮರಗಳಿಗೆ ಪೂಜೆಮಾಡಿ ಹಸಿರು ಸೀರೆ, ಬಳೆ, ಅರಿಷಿಣ–ಕುಂಕುಮ ಹಚ್ಚಿ ಯಾರು ಮರ ಹತ್ತದಂತೆ ಪೂಜ್ಯ ಭಾವ ಹೊಂದುವಂತೆ ಮಾಡಿ ಹಸಿರು ನಮ್ಮ ಉಸಿರು ನಮ್ಮ ನೆರಳು ಎಂಬ ಭಾವವನ್ನು ಮೂಡಿಸಿದರು. ಸಾರವಾಡದ ಪಟ್ಟಭದ್ರ ಕೆಲವು ಮುಸಲ್ಮಾನರು ಗ್ರಾಮದ ಮಧ್ಯದಲ್ಲಿರುವ ಮಸೀದಿಯನ್ನು ಜುಮ್ಮಾ ಮಸೀದಿಯಾಗಿ ಪರಿವರ್ತಿಸುವ ಹುನ್ನಾರದಲ್ಲಿದ್ದಾಗ ದೊಡ್ಡ ವಾಲಿಯವರು ಅದನ್ನು ವಿರೋಧಿಸಿ ಗ್ರಾಮ ಪಂಚಾಯತಿಯ ಆಸ್ತಿಯಾದ ಮಸೀದಿ ಸಾರ್ವಜನಿಕರಿಗೆ ಮುಕ್ತವಾಗಿರಬೇಕೆಂದು ವಾದಿಸಿ ವಿಜಯಿಯಾದರು. ಶ್ರೀ ಗಿರಮಲ್ಲಪ್ಪ ಶಿವಪ್ಪ ವಾಲಿಯವರು ಪ್ರಗತಿಪರ ವಿಚಾರವಾದಿಗಳಾಗಿರುವಂತೆ ಆಯುರ್ವೇದ ವೈದ್ಯರಾಗಿ ತಮ್ಮದೆ ಆದ ವಿಧಾನದಿಂದ ಮೈಮೇಲಿನ ಹಳೆಹುಣ್ಣು, ಗಾಯಗಳು ಮಾಯುವ ಮುಲಾಮನ್ನು ತಯಾರಿಸುತ್ತಿದ್ದರು. ಇಂದಿಗೂ ವಾಲಿಯವರ ಅಂಗಡಿಯಲ್ಲಿ ಆ ಔಷಧದ ವಾಸನೆಯನ್ನು ಕಾಣಬಹುದು. ಜೊತೆಗೆ ಇವರೊಬ್ಬ ಜ್ಯೋತಿಷ್ಯ ಶಾಸ್ತ್ರದಲ್ಲಿ ಪ್ರಾವಿಣ್ಯತೆಯನ್ನು ಪಡೆದಿದ್ದರು ಹಲವಾರು ಜನರ ಜಾತಕಗಳನ್ನು ಬರೆಯುತ್ತಿದ್ದರು. ಅವರ ಮಾತುಗಳು ಹಸಿಗೋಡೆಯಲ್ಲಿ ಹರಳು ನೆಟ್ಟಂತೆ ಹುಸಿ ಹೋಗುತ್ತಿರಲಿಲ್ಲ. ಹಿರಿಯ ಸ್ವಾತಂತ್ರ್ಯಯೋಧ ದೊಡ್ಡವಾಲಿ ಶ್ರೀ ಗಿರಮಲ್ಲಪ್ಪ ಶಿವಪ್ಪ ವಾಲಿಯವರಿಗೆ ಭಾರತ ಸ್ವತಂತ್ರವಾದ ನಂತರ ವಿಜಯಪುರ ಜಿಲ್ಲೆಯ ಹಿರಿಯ ಕಾಂಗ್ರೆಸ್ ಮುಖಂಡರು ಎಂ.ಎಲ್.ಎ., ಎಂ.ಎಲ್.ಸಿ.ಗಳಾಗಿ ಲೋಕಸಭೆ ಹಾಗೂ ರಾಜ್ಯಸಭೆಗಳ ಪ್ರತಿನಿಧಿಗಳಾಗಿ ಕಾರ್ಯ ನಿರ್ವಹಿಸುತ್ತಿರುವ ಸಂದರ್ಭದಲ್ಲಿ ನೀವು ವಿಜಯಪುರ ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಲು ಆಹ್ವಾನಿಸುತ್ತಾರೆ. ಆಗ ಶ್ರೀಯುತರು ನಾವು ಹಳೆ ತಲೆಮಾರಿನವರು ನನಗೆ ಬೇಡ ನಿಮಗೊಬ್ಬ ನವಯುವಕ ಹಾಗೂ ಗ್ರ್ಯಾಜುಯೇಟ್ ಆದ ವ್ಯಕ್ತಿಯನ್ನು ಪರಿಚಯಿಸುತ್ತೇನೆಂದು ಹೇಳಿ ವಿಜಯಪುರ ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ಶ್ರೀ ಸಿದ್ಧೇಶ್ವರ ಪ್ರೌಢಶಾಲೆಯಲ್ಲಿ ವಿಜ್ಞಾನ ಶಿಕ್ಷಕರಾಗಿ ಬಿ.ಎಸ್.ಸಿ., ಎಲ್.ಎಲ್.ಬಿ. ಪದವೀಧರರಾದ ಸನ್ಮಾನ್ಯ ಶ್ರೀ ಬಿ.ಕೆ.ಗುಡದಿನ್ನಿಯವರನ್ನು ಪರಿಚಯಿಸುತ್ತಾರೆ. ಶ್ರೀಯುತರು ವಿಜಯಪುರ

ಜಿಲ್ಲೆಯ ಕಾಂಗ್ರೆಸ್ ಅಧ್ಯಕ್ಷರಾಗಿ ಜನಾನುರಾಗಿಗಳಾಗಿ ಜಿಲ್ಲೆಯ ಎಂ.ಪಿ.ಯಾಗಿ ಎಂ.ಎಲ್.ಸಿ.ಯಾಗಿ ಮಹಾತ್ಮಾಗಾಂಧೀಜಿಯವರ ತತ್ವಗಳ ಆಚಾರಿಗಳಾಗಿ ಶುದ್ಧಹಸ್ತರಾಗಿ ಜಿಲ್ಲೆಯ ಸಾರವಾಡ ಗ್ರಾಮದ ಅಭಿವೃದ್ಧಿಗಾಗಿ ಶ್ರಮಿಸಿ ಹೆಸರುಗಳಿಸಿರುತ್ತಾರೆ. ಹೀಗೆ ಸ್ವಾತಂತ್ರ್ಯ ಯೋಧರು ತ್ಯಾಗವೀರರಾಗಿದ್ದರು.

ಸಾರವಾಡದಿಂದ ಈ ಸ್ವಾತಂತ್ರ್ಯ ಯೋಧರು ಗ್ರಾಮ ನೈರ್ಮಲ್ಯಕ್ಕಾಗಿ ಶ್ರಮಿಸಿದ್ದಾರೆ. ಇವರಲ್ಲಿ ಒಬ್ಬರಾದ ಶ್ರೀ ಈಶ್ವರಪ್ಪ ನಿಂಗಪ್ಪ ಯಾದವಾಡರವರು ಸಾರವಾಡ ಗ್ರಾಮ ಪಂಚಾಯತಿಯ ಚೇರಮನ್ನರಾಗಿ ಅವಿರೋಧವಾಗಿ ಆಯ್ಕೆಯಾಗಿ ಗ್ರಾಮದ ಸರ್ವಾಂಗೀಣ ಪ್ರಗತಿಗೆ ಕಾರಣರಾದರು. ಗ್ರಾಮ ನೈರ್ಮಲ್ಯ, ಶುದ್ಧ ಕುಡಿಯುವ ನೀರು, ಶಿಕ್ಷಣ ಮುಂತಾದ ಮೂಲಭೂತ ಸೌಕರ್ಯಗಳನ್ನು ಸರ್ವಜನಾಂಗಕ್ಕೂ ಒದಗಿಸಿಕೊಟ್ಟು ಸ್ವಾವಲಂಬಿ ಗ್ರಾಮವನ್ನಾಗಿ ಮಾರ್ಪಡಿಸಿದರು.

**ಸಾರವಾಡ ಸ್ವಾಂತ್ರ್ಯಯೋಧರ ನಿಷ್ಠುರ ಸ್ವಭಾವ :**

ಹತ್ತೊಂಬತ್ತನೂರಾ ಎಪ್ಪತ್ತೆರಡರಲ್ಲಿ ಸ್ವತಂತ್ರ ಭಾರತದ ಇಪ್ಪತ್ತೈದನೆಯ ಉತ್ಸವದ ಸಂದರ್ಭದಲ್ಲಿ ಕರ್ನಾಟಕದ ಪ್ರತಿಯೊಂದು ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ಸ್ವತಃ ಅಂದಿನ ಕರ್ನಾಟಕದ ಜನಪ್ರಿಯ ಮುಖ್ಯಮಂತ್ರಿಗಳಾದ ಮಾನ್ಯ ಶ್ರೀ ಡಿ. ದೇವರಾಜ ಅರಸುರವರು ಆಗಮಿಸಿ ಸ್ವಾತಂತ್ರ್ಯ ಯೋಧರನ್ನು ಸನ್ಮಾನಿಸಿ ಅವರೆಲ್ಲರಿಗೂ ತಾಮ್ರ ಪಟಗಳನ್ನು ನೀಡುವ ಸಮಾರಂಭದಲ್ಲಿ ವಯಸ್ಸಾದ ಸ್ವಾತಂತ್ರ್ಯ ಯೋಧರಿಗೆ ವೇದಿಕೆ ಏರಿ ಬಂದು ಸನ್ಮಾನ ಸ್ವೀಕರಿಸಬೇಕೆಂದು ಜಿಲ್ಲಾಡಳಿತದ ಅಧಿಕಾರಿಗಳು ಕರೆ ನೀಡಿದರು. ಆ ಸಮಾರಂಭದಲ್ಲಿದ್ದ ಸಾರವಾಡದ ಸ್ವಾತಂತ್ರ್ಯ ಯೋಧರು ಪ್ರತಿಭಟಿಸಿ ಕರ್ನಾಟಕದ ಮಾನ್ಯ ಮುಖ್ಯಮಂತ್ರಿಗಳು ನಾವಿದ್ದಲ್ಲಿಯೇ ಬಂದು ಸನ್ಮಾನಿಸಿ ತಾಮ್ರ ಪತ್ರವನ್ನು ನೀಡಬೇಕು ಇಲ್ಲದಿದ್ದರೆ ನಿಮ್ಮ ಸನ್ಮಾನವು ಬೇಡ ತಾಮ್ರ ಪತ್ರವು ಬೇಡವೆಂದು ತಿರಸ್ಕರಿಸಿ ಸಭೆಯಿಂದ ಹೊರ ನಡೆಯಲು ಮುಂದಾದಾಗ ಸ್ವತಃ ಶ್ರೀ ಡಿ. ದೇವರಾಜ ಅರಸರವರು ಸ್ವಾತಂತ್ರ್ಯಯೋಧರು ಕುಳಿತಲ್ಲಿಗೆ ಬಂದು ಸನ್ಮಾನಿಸಿ ತಾಮ್ರಪಟಗಳನ್ನು ನೀಡಿ ಹಾರೈಸಿದರು. ಹೀಗೆ ಸ್ವಾಭಿಮಾನಕ್ಕೆ ಧಕ್ಕೆಯಾದಾಗ ಸಿಡಿದೇಳುವ ಸ್ವಭಾವ ಸಾರವಾಡದ ಸ್ವಾತಂತ್ರ್ಯ ಯೋಧರದಾಗಿತ್ತು.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಬ್ರಿಟೀಷರ ಕೆಂಗಣ್ಣಿಗೆ ಗುರಿಯಾಗಿ ತಮ್ಮ ಹೊಲ, ಮನೆ, ಆಸ್ತಿ, ಪಾಸ್ತಿಗಳನ್ನು ಕಳೆದುಕೊಂಡು ಜೈಲುವಾಸ



ಅನುಭವಿಸಿ ಕಷ್ಟ ಪರಿಸ್ಥಿತಿಯಲ್ಲಿರುವ ಸ್ವಾತಂತ್ರ್ಯಯೋಧರಿಗೆ ಮಾಶಾಸನ ಹಾಗೂ ಜಿಲ್ಲಾ ಕೇಂದ್ರ ಸ್ಥಳಗಳಲ್ಲಿ ನಿವೇಶನಗಳನ್ನು ಹಾಗೂ ಅವರು ವಾಸಿಸುತ್ತಿರುವ ಗ್ರಾಮಗಳಲ್ಲಿ ಸರ್ಕಾರದ ಹೆಚ್ಚುವರಿ ಜಮೀನುಗಳನ್ನು ಹಂಚಲು ಮುಂದಾದಾಗ "ಶ್ರೀಯುತರು ನಮ್ಮ ಮನೆಗಳಲ್ಲಿ ಕಸಾ ಹೊಡೆಯುವವರು ದಿಕ್ಕಿಲ್ಲ ನಮಗೆಷ್ಟು ಬೇಕೋ ಅಷ್ಟು ಮನೆಯಿದೆ. ಹಿರಿಯರು ಮಾಡಿಟ್ಟ ಜಮೀನುಗಳಿವೆ ಯಾರು ನಿರಾಶ್ರಿತರಾಗಿರುವರೋ ಅಂಥವರಿಗೆ ನೀಡಿರಿ" ಎಂದು ಹೇಳಿ ಮನೆ ನಿವೇಶನ ಹಾಗೂ ಸರ್ಕಾರದ ಜಮೀನುಗಳನ್ನು ಪಡೆಯದೇ ನಿಸ್ವಾರ್ಥಿಗಳಾಗಿರುವುದನ್ನು ಈ ದೇಶಭಕ್ತರಲ್ಲಿ ಕಾಣುತ್ತೇವೆ. ಆರ್ಥಿಕವಾಗಿ ತೊಂದರೆಯಲ್ಲಿದ್ದ ಇವರೆಲ್ಲ ಸ್ವಾತಂತ್ರ್ಯ ಯೋಧರಿಗೆ ಕೊಡಮಾಡುವ ಕೇಂದ್ರ ಸರ್ಕಾರದ ಹಾಗೂ ರಾಜ್ಯ ಸರ್ಕಾರದ ಮಾಶಾನಗಳನ್ನು ಪಡೆದುಕೊಂಡು ತಮ್ಮ ಇಳಿ ವಯಸ್ಸಿನಲ್ಲಿ ನೆಮ್ಮದಿಯ ಜೀವನ ಕಳೆಯಲು ಹಾಗೂ ತಮ್ಮ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸವನ್ನು ನೀಡಲು ಅನುಕೂಲವಾಯಿತೆಂದು ಎರಡೂ ಸರ್ಕಾರಗಳಿಗೆ ಧನ್ಯವಾದ ಅರ್ಪಿಸುತ್ತಿದ್ದರು. ಅಂತಹ ಆರ್ಥಿಕ ಅವಕಾಶ ಪಡೆದು ಉನ್ನತ ಶಿಕ್ಷಣ ಪಡೆದು ಉನ್ನತ ಸ್ಥಾನ ಪಡೆದುಕೊಂಡವರಲ್ಲಿ ನಾನು ಒಬ್ಬನೆಂದು ಹೇಳಲು ಸಂತೋಷವೆನಿಸುತ್ತದೆ.

ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಕಾರಾಗೃಹವಾಸ ಅನುಭವಿಸಿದ ಸ್ವಾತಂತ್ರ್ಯ ಯೋಧರಿಗೆ ಅವರು ಯಾವ ಕಾರಾಗೃಹದಲ್ಲಿದ್ದರು. ಆ ಕಾರಾಗೃಹದಿಂದ ಜೈಲು ಸರ್ಟಿಫಿಕೇಟ್ ತಂದ ಸ್ವಾತಂತ್ರ್ಯ ಯೋಧರಿಗೆ ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರಗಳು ಮಾಶಾಸನ ಮಂಜೂರು ಮಾಡಿರುವುದು ಸರಿಯಷ್ಟೇ. ಆದರೆ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿ ಭೂಗತರಾಗಿ ತಲೆ ಮರೆಸಿಕೊಂಡು ಕಾರಾಗೃಹ ಶಿಕ್ಷೆಯಾಗದೆ ಇರುವ ಹಲವಾರು ಸ್ವಾತಂತ್ರ್ಯ ಯೋಧರು ಮಾಶಾಸನದಿಂದ ವಂಚಿತರಾದ ಸಂದರ್ಭದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಅಂತಹ ಸ್ವಾತಂತ್ರ್ಯ ಯೋಧರಿಗೆ ಈಗಾಗಲೇ ಮಾಶಾಸನ ಪಡೆಯುತ್ತಿರುವ ಸ್ವಾತಂತ್ರ್ಯ ಯೋಧರಿಬ್ಬರು ಈ ವ್ಯಕ್ತಿ ನಮ್ಮೊಡನೆ ಭೂಗತವಾಗಿದ್ದು ಕಾರ್ಯ ನಿರ್ವಹಿಸಿದ್ದಾನೆ. ನಾವಿರುವ ಗುಪ್ತ ಸ್ಥಳಗಳಿಗೆ ಬಂದು ಊಟ ಪೂರೈಸಿದ್ದಾನೆ. ಭೂಗತರಾಗಿ ಬ್ರಿಟೀಷರ ವಿರುದ್ಧ ಕಾರ್ಯನಿರ್ವಹಿಸಿದ್ದಾರೆಂದು ಶಿಫಾರಸ್ಸು ಮಾಡಿದರೆ ಅಂಥವರಿಗೂ ಮಾಶಾಸನ ಮಂಜೂರು ಮಾಡಬಹುದೆಂದು ಆದೇಶಿಸಿದ್ದಾಗ ಹಲವಾರು ಜನ ಹಣದ

ಆಸೆ ತೋರಿಸಿ ಖೊಟ್ಟಿ ಸ್ವಾತಂತ್ರ್ಯ ಯೋಧರು ಸಹಿ ಮಾಡಿಕೊಡಿರೆಂದು ಈ ಸಾರವಾಡ ಸ್ವಾತಂತ್ರ್ಯ ಯೋಧರ ಬಳಿಗೆ ಬಂದಾಗ ಅಂತವರ ಬೆವರಿಳಿಸಿ ಯಾರಿಗೆ ಹುಟ್ಟಿ ಇನ್ನಾರ ಹೆಸರು ಹೇಳಲು ಬಂದಿರುವಿರೆಂದು ಬಯ್ದು ಕಳಿಸಿದರು. ಇಂಥ ನಿಸ್ವಾರ್ಥ ಮನೋಭಾವ ಇವರಲ್ಲಿತ್ತು. ಪ್ರತಿದಿನ ನೂಲುವುದು, ಸ್ವಚ್ಛತೆಗೆ ಪ್ರಾಮುಖ್ಯತೆ ನೀಡುತ್ತಿದ್ದರು. ಸಾಯುವವರೆಗೆ ಖಾದಿ ಬಟ್ಟೆಗಳನ್ನೇ ಧರಿಸಿ ಗಾಂಧೀಜಿಯವರ ಸನ್ಮಾರ್ಗದಲ್ಲಿ ನಡೆದು ಗ್ರಾಮದಲ್ಲಿ ಅಸ್ಪೃಶ್ಯತೆಯನ್ನು ಹೋಗಲಾಡಿಸಿ ಸರ್ವಧರ್ಮಗಳನ್ನು ಸಮಾನತೆಯಿಂದ ಕಂಡು ಗ್ರಾಮಗಳನ್ನು ರಾಮರಾಜ್ಯವನ್ನಾಗಿ ಪರಿವರ್ತಿಸಿದರು.

## ಸಾರವಾಡ ಸ್ವಾತಂತ್ರ್ಯ ಯೋಧರ ನೆನಪಿನ ಗಾಂಧೀಜಿ ಸ್ಮಾರಕ ಹಾಗೂ ವಾಲಿ ಸಹೋದರರ ಹಿರಿಮೆ :

ಸಾರವಾಡ ಗ್ರಾಮದ ಸಾಲು ಬಜಾರದ ಗ್ರಾಮ ಪಂಚಾಯತಿಯ ಕೇಂದ್ರ ಸ್ಥಳದಲ್ಲಿ ಸ್ವಾತಂತ್ರ್ಯ ಸ್ಮಾರಕದ ರೂಪದಲ್ಲಿ ಪೂಜ್ಯ ಮಹಾತ್ಮಾ ಗಾಂಧೀಜಿಯವರ ಸ್ಮಾರಕ ಮಂದಿರ, ಗಾಂಧೀ ಚೌಕನ್ನು ಕಟ್ಟಿ ಅಲ್ಲಿ ಗಾಂಧೀಜಿಯವರ ಅಮೃತ ಶಿಲೆಯ ಮೂರ್ತಿಯನ್ನು ಸ್ಥಾಪಿಸಿ ಅಲ್ಲಿ ಹದಿಮೂರು ಜನ ಸ್ವಾತಂತ್ರ್ಯ ಯೋಧರ ಭಾವಚಿತ್ರಗಳನ್ನು ಅಳವಡಿಸಿ ಸಾರವಾಡ ಗ್ರಾಮ ಪಂಚಾಯತಿಯವರು ತಮ್ಮ ನಮನವನ್ನು ಸಲ್ಲಿಸಿ ಕೃತಾರ್ಥರಾದವರಲ್ಲಿ ಶ್ರೀ ವ್ಹಿ.ಸಿ. ನಾಗವಾಣ ಮುಖ್ಯೋಪಾಧ್ಯಾಯರು, ಎಸ್.ವ್ಹಿ. ಹೈಸ್ಕೂಲು ಸಾರವಾಡ ಇವರನ್ನು ಸ್ಮರಿಸಲೇಬೇಕು. ಸಾರವಾಡ ಸ್ವಾತಂತ್ರ್ಯ ಚಳುವಳಿಯಲ್ಲಿ ವಾಲಿ ಸಹೋದರರ ಪಾತ್ರ ಪ್ರಮುಖವಾದುದು. ಹಿರಿಯರಾದ ಶ್ರೀ ಗಿರಮಲ್ಲಪ್ಪ ಶಿವಪ್ಪ ವಾಲಿಯವರು ಎಲ್ಲ ಸ್ವಾತಂತ್ರ್ಯ ಯೋಧರ ಮುಂದಾಳುಗಳಾಗಿ ವೈಯಕ್ತಿಕ ಹಾಗೂ ಉಪ್ಪಿನ ಸತ್ಯಾಗ್ರಹದಲ್ಲಿ ಮತ್ತು ಚಲೆಜಾವ ಚಳುವಳಿಯಲ್ಲಿ ನೇರವಾಗಿ ಭಾಗವಹಿಸಿ ಸ್ವಾತಂತ್ರ್ಯ ತಂದು ಕೊಟ್ಟವರು. ಇನ್ನು ಎರಡನೆಯವರು ಶ್ರೀ ಗುರುಲಿಂಗಪ್ಪ ಶಿವಪ್ಪ ವಾಲಿ ಇವರು ಸ್ವಾತಂತ್ರ್ಯ ಚಳುವಳಿಗಳಲ್ಲಿ ನೇರವಾಗಿ ಭಾಗವಹಿಸದೆ ಮನೆತನದ ಪರಂಪರೆಯಿಂದ ಬಂದ ವ್ಯಾಪಾರ ಉದ್ಯೋಗ ಹಾಗೂ ಜಮೀನುಗಳ ಉಸ್ತುವಾರಿಯಲ್ಲಿ ಮನೆತನವನ್ನು ಮುನ್ನಡೆಸುವ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ ಎಲ್ಲ ಜನರಿಗೆ ಸಹಾಯ ಸಹಕಾರ ನೀಡಿ ಪ್ರತಿಯೊಬ್ಬರಿಗೂ ಬೆನ್ನೆಲುಬಾಗಿ ನಿಂತವರಿರುವರು. ಸ್ವಾತಂತ್ರ್ಯ ನಂತರ ತಮ್ಮ ಅಂಗಡಿ ಮುಂದಿನ ಸಾರ್ವಜನಿಕ ಜಾಗದಲ್ಲಿ ಗಾಂಧೀ ಚೌಕ ಹಾಗೂ ಗಾಂಧೀಜಿಯವರ ಮುತ್ಥಳಿ ನಿರ್ಮಾಣದಲ್ಲಿ ಬಹುಮುಖ್ಯ ಪಾತ್ರವಹಿಸಿ ತನು, ಮನ, ಧನವನರ್ಪಿಸಿ ಪ್ರತಿ ಅಮವಾಸ್ಯೆಗೊಮ್ಮೆ ತಮ್ಮ ಅಂಗಡಿ ಲಕ್ಷ್ಮೀ ಪೂಜೆ ಜೊತೆಗೆ ಗಾಂಧೀಜಿಯವರ ಅಮೃತ ಶಿಲೆಯ ಮೂರ್ತಿಯನ್ನು ಪೂಜಿಸುತ್ತಿದ್ದರು. ದೇಶಭಕ್ತಿಯ ನಾಟಕಗಳಲ್ಲಿ ಹಾಗೂ ಬಯಲಾಟಗಳಲ್ಲಿ ಸಾರಥಿ ಪಾತ್ರಧಾರಿಗಳಾಗಿ ಜನಪ್ರಿಯರಾಗಿದ್ದರು. ಇವರ ಮನಸ್ಸಿನಲ್ಲಿ ತಾನು ನೇರವಾಗಿ ಚಳುವಳಿಯಲ್ಲಿ ಭಾಗವಹಿಸಬೇಕೆಂಬ ಬಯಕೆಯಿದ್ದರೂ ತುಂಬಿದ ಕುಟುಂಬದ ಜವಾಬ್ದಾರಿ ಹೊತ್ತಿದ್ದರಿಂದ ಅಪರೋಕ್ಷವಾಗಿ ಎಲ್ಲ ವೀರಯೋಧರಿಗೆ ಹಾಗೂ ಅವರ ಕುಟುಂಬ ವರ್ಗದವರಿಗೆ ಆಸರೆಯಾಗಿ ನಿಂತು ಗಾಂಧೀವಾದಿಗಳಾಗಿ ಬಾಳಿನುದ್ದಕ್ಕೂ ಬದುಕಿ ಬಾಳಿದರು. ಇನ್ನು ವಾಲಿ ಮನೆತನದ ಕಿರಿಯ ಸಹೋದರ ಶ್ರೀ ಮಳಸಿದ್ದಪ್ಪ ಶಿವಪ್ಪ ವಾಲಿಯವರು ತಮ್ಮ ಹಿರಿಯ ಸಹೋದರರಾದ ಶ್ರೀ ಗಿರಿಮಲ್ಲಪ್ಪ ಶಿವಪ್ಪ ವಾಲಿ ಇವರ ಹೆಗಲಿಗೆ ಹೆಗಲು ಕೊಟ್ಟು ವೈಯಕ್ತಿಕ ಹಾಗೂ ಉಪ್ಪಿನ ಸತ್ಯಾಗ್ರಹ ಮತ್ತು ಚಲೆಜಾವ್ ಚಳುವಳಿಗಳಲ್ಲಿ ಅಣ್ಣನ ಜೊತೆಗಿದ್ದು, ಕಾರಾಗೃಹವಾಸದಲ್ಲಿಯೂ ಜೊತೆಗಿದ್ದು ಪ್ರಾಥಮಿಕ ಶಾಲಾ ಶಿಕ್ಷಕ ವೃತ್ತಿ ತ್ಯಜಿಸಿ ಸಾರವಾಡ ಗ್ರಾಮದಲ್ಲಿ ತಮ್ಮ ಅಣ್ಣಂದಿರರಿಗೆ ವ್ಯಾಪಾರ ಮತ್ತು ಕೃಷಿ ಕಾರ್ಯಗಳಲ್ಲಿ ಸಹಾಯ ಸಹಕಾರ ಮಾಡುತ್ತ ಬದುಕಿ ಬಾಳಿದವರು. ಹೀಗೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಾರವಾಡ ವಾಲಿ ಮನೆತನದ ಪಾತ್ರ ಹಿರಿದಾದುದು.



## ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಗೆ ನೀಡಿದ ಸ್ವಾಗತ ಸಮಾರಂಭ :

ಸ್ವತಂತ್ರ ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ ನೆಹರುರವರು ಜಮಖಂಡಿ ಮಾರ್ಗದಿಂದ ವಿಜಯಪುರಕ್ಕೆ ಹೋಗುವವರಿದ್ದರು. ಈ ವಿಷಯ ಜಿಲ್ಲಾ ಕಾಂಗ್ರೆಸ್ ಕಮೀಟಿಯಿಂದ ಸಾರವಾಡ ಸ್ವಾತಂತ್ರ್ಯ ಯೋಧರಿಗೆ ತಿಳಿದು ದೋಣಿ ನದಿ ದಂಡೆಯಿಂದ ಸರ್ಕಾರಿ ಗಂಡು ಮಕ್ಕಳ ಶಾಲೆಯವರೆಗೆ ಅಂದಾಜು ಒಂದು ಕಿಲೋಮೀಟರ್‌ವರೆಗೆ ಹಸಿರು ಹಂದರ ಹಾಕಿ ಬಾಳೆ ಕಂಬಗಳನ್ನು ತಳಿರು ತೋರಣಗಳನ್ನು ಕಟ್ಟಿ ಮಾರ್ಗದಲ್ಲಿ ಕುಸುಬಿಗೋಳ್ಳಿಗೆ ಬಣ್ಣಹಾಕಿ ಚಿತ್ರ ಚಿತ್ತಾರದ ರಂಗೋಲಿ ಬಿಡಿಸಿ ಸ್ವಾಗತ ಕಮಾನುಗಳನ್ನು ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಹಾಗೂ ರಾಷ್ಟ್ರಧ್ವಜಗಳನ್ನು ಕಟ್ಟಿ ಹಾರ ತುರಾಯಿ ಫಲಪುಷ್ಪ ಬಾಜಾ ಬಜಂತ್ರಿಗಳ ಜೊತೆಗೆ ಪ್ರತಿಯೊಬ್ಬರು ಖಾದಿಧಾರಿಗಳಾಗಿ ಪ್ರಥಮ ಪ್ರಧಾನಿ ನೆಹರುರವರ ಸ್ವಾಗತಕ್ಕೆ ಸಿದ್ಧರಾಗಿದ್ದರು. ಯಾವುದೇ ಗಣ್ಯವ್ಯಕ್ತಿಗಳು ರಾಷ್ಟ್ರನಾಯಕರು ಬರುವಾಗ ಅವರ ಪ್ರವಾಸಪಟ್ಟಿ ಹಾಗೂ

ಭೆಟ್ಟಿ ಕೊಡುವ ಕಾರ್ಯಕ್ರಮಗಳಪಟ್ಟಿ ಮುಂಚಿತವಾಗಿ ತಯಾರಾಗಿರುತ್ತದೆ. ಆದರೆ ಈ ಯುವಕರು ಅದರ ಬಗೆಗೆ ತಲೆ ಕೆಡಿಸಿಕೊಂಡಿರಲಿಲ್ಲ. ಪ್ರಧಾನಿ ಕಾರ್ಯಾಲಯದಿಂದ ಪ್ರಧಾನಿಗಳ ಪ್ರವಾಸದ ಮಾರ್ಗ ಪರಿಶೋಧಿಸುವ ಅಧಿಕಾರಿ ಮುಂಚಿತವಾಗಿ ಆಗಮಿಸಿ ಈ ಯೋಧರು ನಿರ್ಮಿಸಿರುವ ಭರ್ಜರಿ ತಯಾರಿಯನ್ನು ಕಂಡು ಸಂತೋಷಗೊಂಡು ಚಾಚಾ ನೆಹರು ರವರಿಗೆ ಸಂದೇಶ ಕಳಿಸಿದರು. ಅದರಂತೆ ನಿಗದಿತ ಸಮಯಕ್ಕೆ ಬಂದ ಭಾರತದ ಪ್ರಥಮ ಪ್ರಧಾನಿ ಜವಾಹರಲಾಲ ನೆಹರುರವರು ಈ ತರುಣರ ಉತ್ಸಾಹ ಹಾಗೂ ವ್ಯವಸ್ಥೆಯನ್ನು ಕಂಡು ಪ್ರಾರಂಭದಲ್ಲಿಯೇ ಇಳಿದು ಇವರೆಲ್ಲರೊಂದಿಗೆ ಕಾಲು ನಡಿಗೆಯಿಂದ ಒಂದು ಕಿಲೋಮೀಟರವರೆಗೆ ನಡೆದು ಎಲ್ಲರನ್ನು ಅಭಿನಂದಿಸಿ ಭಾಷಣಮಾಡಿ ಸಂತೋಷಗೊಂಡು ತಮ್ಮ ಪ್ರಯಾಣವನ್ನು ಮುಂದುವರೆಸಿದರು. ಹೀಗೆ ಸಾರವಾಡದ ಸ್ವಾತಂತ್ರ್ಯ ಯೋಧರು ಯಾರೇ ರಾಷ್ಟ್ರನಾಯಕರು ಭೆಟ್ಟಿ ಕೊಟ್ಟಾಗ ಮತ್ತು ರಾಷ್ಟ್ರೀಯ ಹಬ್ಬಗಳಾದ ಸ್ವಾತಂತ್ರ್ಯೋತ್ಸವ, ಗಣರಾಜ್ಯೋತ್ಸವ ಮತ್ತು ಕನ್ನಡ ರಾಜ್ಯೋತ್ಸವಗಳಂತಹ ಕಾರ್ಯಕ್ರಮಗಳನ್ನು ಅದ್ಧೂರಿಯಾಗಿ ನೆರವೇರಿಸಿ ರಾಷ್ಟ್ರಪ್ರೇಮ ಮೆರೆಯುತ್ತಿದ್ದರು. ಗ್ರಾಮದಲ್ಲಿ ಜಾತ್ರೆ, ಉತ್ಸವಗಳು ಜರುಗಿದಾಗ ನಾಟಕಗಳನ್ನು, ಬಯಲಾಟಗಳನ್ನು ಯುವಕರಿಂದ ಆಡಿಸಿ ತಿಂಗಳಾನುಗಟ್ಟಲೆ ತಾಲೀಮು ಕೊಡಿಸಿ ಸ್ವತಃ ತಾವು ಪಾತ್ರಧಾರಿಗಳಾಗಿ ಜನರಿಗೆ ಮನರಂಜನೆಯ ಮೂಲಕ ಸಾಂಸ್ಕೃತಿಕ ವಾತಾವರಣ ನಿರ್ಮಾಣ ಮಾಡುತ್ತಿದ್ದರು.

ಒಬ್ಬ ಯಶಸ್ವಿ ಪುರುಷನ ಹಿಂದೆ ತ್ಯಾಗಯಿಯಾದ ಹೆಣ್ಣೊಬ್ಬಳಿರುವಳೆಂಬ ಮಾತಿನಂತೆ ಈ ಎಲ್ಲ ಸ್ವಾತಂತ್ರ್ಯ ಯೋಧರ ಪತ್ನಿ, ತಾಯಿಯರಿದ್ದು ಅವರ ಪರಿಶ್ರಮ ತ್ಯಾಗಮನೋಭಾವವನ್ನು ಎಂದು ಮರೆಯಲಾಗದು. ೧) ಶ್ರೀ ಗಿರಿಮಲ್ಲಪ್ಪ ವಾಲಿಯವರ ಪತ್ನಿ ಶ್ರೀಮತಿ ಗೌರಮ್ಮ, ೨) ಶ್ರೀ ಮರುಳಸಿದ್ದಪ್ಪ ವಾಲಿಯವರ ಪತ್ನಿ ಶ್ರೀಮತಿ ಭಾಗೀರಥಿ, ೩) ಶ್ರೀ ಈಶ್ವರಪ್ಪ ಯಾದವಾಡರವರ ಪತ್ನಿ ಶ್ರೀಮತಿ ಈಶ್ವರವ್ವ, ೪) ಶ್ರೀ ಈಶ್ವರಪ್ಪ ಅರ್ಜುಣಗಿ ಇವರ ಪತ್ನಿ ಶ್ರೀಮತಿ ನೀಲಮ್ಮ , ೫) ಶ್ರೀ ಪಾಂಡು ಪರೀಟ ಇವರ ಪತ್ನಿ ಶ್ರೀಮತಿ ಬಾಯವ್ವ, ೬) ಶ್ರೀ ಬಸಪ್ಪ ಬಳಗಲಿ ಇವರ ಪತ್ನಿ ಶ್ರೀಮತಿ ಈಶ್ವರವ್ವ, ೭) ಶ್ರೀ ಶಂಕರಯ್ಯ ಪೂಜಾರಿ ಇವರ ಪತ್ನಿ ಶ್ರೀಮತಿ ಚನ್ನಮ್ಮ, ೮) ಶ್ರೀ ಶಿದಗೊಂಡಪ್ಪ ಸಾವಳಗಿ ಇವರ ಪತ್ನಿ ಶ್ರೀಮತಿ ಶಂಕರೆವ್ವ, ೯) ಶ್ರೀ ಚನ್ನಪ್ಪ ಗುಡದಿನ್ನಿ ಇವರ ಪತ್ನಿ ಶ್ರೀಮತಿ ಸಾತವ್ವ, ೧೦) ಶ್ರೀ ಗುರುಪಾದಯ್ಯ ಮಠರವರ ಪತ್ನಿ ಶ್ರೀಮತಿ ರಾಚವ್ವ ಹೀಗೆ ಎಲ್ಲ ಮಾತೆಯರು ತಮ್ಮ ಗಂಡಂದಿರನ್ನು ದೇಶದ ಸ್ವಾತಂತ್ರ್ಯಕ್ಕಾಗಿ ಹುರಿದಿಂಬಿಸಿ ಮನೆತನ ಮುನ್ನಡೆಸುವ ಜವಾಬ್ದಾರಿ ಹೊತ್ತು ಜನರಿಂದ ಬಂದ ಟೀಕೆ, ತಿರಸ್ಕಾರ, ಸಮಾಜ ಬಹಿಷ್ಕಾರದಂಥ ಪ್ರಸಂಗಗಳನ್ನು ಎದುರಿಸಿ ಕೆಚ್ಚೆದೆಯಿಂದ ದೇಶಭಕ್ತರಿಗೆ ತೊಂದರೆಯಾಗದಂತೆ ಕೌಟುಂಬಿಕ ಜವಾಬ್ದಾರಿ ಹೊತ್ತು ನಂಜನುಂಡ ನಂಜುಂಡೇಶ್ವರಿಗಳಿವರು ಎಂದು ಕೊಂಡಾಡಿದರೆ ಸಾಲದು ಇವರ ತ್ಯಾಗ ಪರಿಶ್ರಮಕ್ಕೆ ದೊಡ್ಡದೊಂದು ಸಲಾಮು.



ಶತ ಶತಮಾನಗಳ ಕಾಲ ಪರಕೀಯರ ಆಕ್ರಮಣ ದಬ್ಬಾಳಿಕೆ, ದೌರ್ಜನ್ಯ ಅಮಾನುಷ ಆಡಳಿತದಿಂದ ಜರ್ಝರಿತವಾಗಿ ಹೋಗಿದ್ದ ಭಾರತದಲ್ಲಿ ಜಾಗೃತ ಪರ್ವ ಪ್ರಾರಂಭವಾಗಿ, ನೂರಾರು ವರ್ಷಗಳ ಸಂಘರ್ಷ ಸಂಗ್ರಾಮಗಳ ಮೂಲಕ ಮಾಡು ಇಲ್ಲವೆ ಮಡಿ ಎಂಬ ದೃಢ ಸಂಕಲ್ಪದೊಂದಿಗೆ ದೇಶವನ್ನು ದಾಸ್ಯ ಸಂಕೋಲೆಯಿಂದ ಮುಕ್ತಗೊಳಿಸುವಲ್ಲಿ ಸಫಲರಾದೆವು. ದೇಶಕ್ಕೆ ಸ್ವಾತಂತ್ರ್ಯ ಸುಲಭವಾಗಿ ದೊರೆಯಲಿಲ್ಲ. ಸಾವಿರಾರು ಯೋಧರ ಕಷ್ಟ, ನಷ್ಟ, ಸಾವು ನೋವು, ತ್ಯಾಗ ಬಲಿದಾನಗಳ ಫಲವಾಗಿ ಅದು ನಮಗೆ ದೊರೆತಿದೆಯೆಂದು ತಮಗೆಲ್ಲ ತಿಳಿದ ವಿಷಯ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಬೆಳಕಿಗೆ ಬಂದವರು ವಿರಳ. ಬಾರದೆ ಹುತಾತ್ಮರಾದವರು ಮತ್ತು ಬದುಕಿ ಬಾಳಿದವರು ಬಹಳವೆಂಬ ಸತ್ಯವನ್ನು ಕಂಡುಕೊಂಡಿದ್ದೇವೆ.

ಭಾರತ ಸ್ವಾತಂತ್ರ್ಯ ಅಮೃತ ಮಹೋತ್ಸವದ ಈ ಸುಸಂದರ್ಭದಲ್ಲಿ ಎಲೆ ಮರೆಯ ಕಾಯಿಯಂತೆ ತಮ್ಮ ತನು ಮನ ಧನವನರ್ಪಿಸಿ ಮನೆ, ಮಾರುಗಳನ್ನು ಪ್ರೀತಿ ಪಾತ್ರರನ್ನು ಲೆಕ್ಕಿಸದೆ ಹೋರಾಡಿ ವಿಜಯ ತಂದ ವೀರ ಯೋಧರನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿ ಮೂಲಕ ಗುರುತಿಸಿ ಕಿರು ಹೊತ್ತಿಗೆ ರೂಪದಲ್ಲಿ ಅವರ ಅಮರ ಚರಿತ್ರೆಯನ್ನು ಹೊರ ತರುತ್ತಿರುವುದು ಶ್ಲಾಘನೀಯ ಕಾರ್ಯ.

## ಸಾರವಾಡ ಸ್ವಾತಂತ್ರ್ಯಯೋಧರ ಸಂಕ್ಷಿಪ್ತ ಪರಿಚಯ

### ೧) ಶ್ರೀ ಗಿರಮಲ್ಲಪ್ಪ ಶಿವಪ್ಪ ವಾಲಿ (ದೊಡ್ಡವಾಲಿ):

ಸಾರವಾಡದ ಸ್ವಾತಂತ್ರ್ಯಯೋಧರಲ್ಲಿ ದೊಡ್ಡ ವಾಲಿಯವರೆಂದೇ ಖ್ಯಾತರಾದ ಶ್ರೀ ಗಿರಮಲ್ಲಪ್ಪ ಶಿವಪ್ಪ ವಾಲಿಯವರು ಅಂದಿನ ಮುಲ್ಕಿ ಪರೀಕ್ಷೆ ಪಾಸಾಗಿದ್ದು, ಅವಿಭಕ್ತ ಕುಟುಂಬದ ಯಜಮಾನರಾಗಿದ್ದು ಸಣ್ಣ ವಯಸ್ಸಿನಲ್ಲಿಯೇ ತಂದೆ ತಾಯಿಯರನ್ನು ಕಳೆದುಕೊಂಡು ಸೋದರತ್ತೆ ಆರೈಕೆಯಲ್ಲಿ ಇಬ್ಬರು ತಮ್ಮಂದಿರೊಂದಿಗೆ ಕಿರಾಣಿ ವ್ಯಾಪಾರ, ಬಟ್ಟೆ ಅಂಗಡಿ ವ್ಯವಹಾರ ಹಾಗೂ ಒಕ್ಕಲುತನ ಕೆಲಸ ಕಾರ್ಯಗಳನ್ನು ಮಾಡುತ್ತ ಶ್ರೀಮತಿ ಗೌರಮ್ಮನವರೊಂದಿಗೆ

ತುಂಬು ಕುಟುಂಬದಲ್ಲಿ ಬಾಳುತ್ತಿದ್ದರು. ಮನೆಯ ಹಾಗೂ ಅಂಗಡಿಗಳ ವ್ಯವಹಾರವನ್ನು ಇಬ್ಬರು ತಮ್ಮಂದಿರರು ನೋಡಿಕೊಳ್ಳುತ್ತಿರುವುದರಿಂದ ಶ್ರೀಯುತರು ಜಿಲ್ಲೆಯ ಜನಾನುರಾಗಿ ಸಮಾಜ ಸೇವಕರಾಗಿ ರಾಜಕೀಯ ಮುಖಂಡರಾಗಿ ಹೆಚ್ಚಿನ ಸಮಯವನ್ನು ತಿರುಗಾಟದಲ್ಲಿ ಕಳೆಯುತ್ತಿದ್ದರು. ವಿಜಯಪುರ ಜಿಲ್ಲಾ ಕಾಂಗ್ರೆಸ್ ಕಾಲಾವಧಿಯ ಸಕ್ರಿಯ ಸದಸ್ಯರಾಗಿ ಮಹಾತ್ಮಾ ಗಾಂಧೀಜಿಯವರ ಕರೆಗೆ ಓಗೊಟ್ಟು ಮೊದಲು ಅಸಹಕಾರ ಚಳುವಳಿಯಲ್ಲಿ ಬಿಜ್ಜರಗಿ ಗ್ರಾಮದಲ್ಲಿ ಭಾಗವಹಿಸಿ ಬ್ರಿಟೀಷರ ವಿರುದ್ಧ ಉಗ್ರವಾದ ಭಾಷಣ ಮಾಡಿ ಪೊಲೀಸರ ಕೆಂಗಣ್ಣಿಗೆ ಗುರಿಯಾಗಿ ಆರು ತಿಂಗಳ ಜೈಲುವಾಸ ಅನುಭವಿಸಿದರು. ಮುಂದೆ ಉಪ್ಪಿನ ಸತ್ಯಾಗ್ರಹದಲ್ಲಿ ಬಬಲೇಶ್ವರ ಗ್ರಾಮ ಪಂಚಾಯತಿ ಕಚೇರಿ ಮುಂದೆ ದೋಣಿ ನದಿ ನೀರಿನಿಂದ ಉಪ್ಪನ್ನು ತಯಾರಿಸಲು ಮುಂದಾಗಿ ಬ್ರಿಟೀಷರ ವಿರುದ್ಧವಾಗಿ ಮಾತಾಡಿ ಮತ್ತೆ ಆರು ತಿಂಗಳು ಸೆರೆಮನೆವಾಸವನ್ನು ಅನುಭವಿಸಿದ್ದರು. ವೈಯಕ್ತಿಕ ಸತ್ಯಾಗ್ರಹದಲ್ಲಿ ತಾರು ತಂತಿ ಕತ್ತರಿಸುವುದು ಅಂಚೆ ಕಚೇರಿಗಳನ್ನು ಲೂಟಿ ಮಾಡುವ ಹಾಗೂ ಸೇಂದಿಗಿಡಗಳನ್ನು ಕಡಿದು ಹಾಕುವ ವಿಧ್ವಂಸಕ ಕಾರ್ಯಗಳಲ್ಲಿ ತೊಡಗಿ ಬ್ರಿಟೀಷರಿಗೆ ಸಿಂಹಸ್ವಪ್ನವಾಗಿದ್ದರು. ಹತ್ತೊಂಬತ್ತನೂರಾ ನಲವತ್ತೆರಡರ ಚಲೇಜಾವ್ ಚಳುವಳಿಯಲ್ಲಿ ಸಾರವಾಡದ ಹದಿಮೂರು ಜನ ಸ್ವಾತಂತ್ರ್ಯ ಯೋಧರೊಂದಿಗೆ ಮುಳವಾಡದ ಸರಕಾರಿ ಪ್ರವಾಸಿ ಮಂದಿರವನ್ನು ಸುಟ್ಟು ಹಾಕಿ ಐದು ವರ್ಷ ಕಠಿಣ ಶಿಕ್ಷೆ, ಒಂದು ನೂರು ರೂಪಾಯಿ ದಂಡ. ದಂಡ ಕೊಡದಿದ್ದರೆ ಮತ್ತೊಂದು ವರ್ಷ ಜೈಲುವಾಸವೆಂದು ಬ್ರಿಟೀಷ ಅಧಿಕಾರಿಗಳು ಶಿಕ್ಷೆ ನೀಡಿದಾಗ ಮೂರುವರೇ ವರ್ಷ ಯರವಾಡಾ ಜೈಲಿನಲ್ಲಿ ಶಿಕ್ಷೆ ಅನುಭವಿಸಿ; ಬಿಡುಗಡೆ ಹೊಂದಿ ಮರಳಿ ಸ್ವಗ್ರಾಮಕ್ಕೆ ಬಂದು; ಗ್ರಾಮದಲ್ಲಿ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡು ಮಾದರಿ ಗ್ರಾಮವನ್ನಾಗಿ ರೂಪಿಸುತ್ತಾರೆ.

ಶ್ರೀಯುತರು ಆಯುರ್ವೇದ ಪಂಡಿತರಾಗಿದ್ದು ಉಚಿತವಾಗಿ ಬಡವರ ಆರೈಕೆ ಮಾಡುತ್ತಿದ್ದರು. ಹಾಗೆ ಪ್ರಸಿದ್ಧ ಜೋತಿಷಿಗಳಾಗಿದ್ದು ಜನರ ಸಮಸ್ಯೆಗಳನ್ನು ಬಗೆಹರಿಸಿ ನೆಮ್ಮದಿಯ ಜೀವನ ನಡೆಸಲು ಅನುವು ಮಾಡಿಕೊಡುತ್ತಿದ್ದರು. ಇವರು ಜಮೀನುಗಳನ್ನು ಅಳೆಯುವ ಮೋಜಣಿ ಕಾರ್ಯದಲ್ಲಿಯೂ ಸಿದ್ಧಹಸ್ತರು. ಪರಿಸರ ಪ್ರಜ್ಞೆಯನ್ನು ಹೊಂದಿದ ಶ್ರೀ ದೊಡ್ಡವಾಲಿಯವರು ರಸ್ತೆ ಬದಿಯಲ್ಲಿರುವ ಮರಗಳ ರಕ್ಷಣೆಗಾಗಿ ಅವುಗಳಿಗೆ ಸೀರೆಯುಡಿಸಿ ಹಸಿರು ಬಳೆ ತೊಡಿಸಿ ಅರಿಷಿಣ ಕುಂಕುಮ ಹಚ್ಚಿ ಕುರಿಗಾಹಿಗಳು ಮರಗಳನ್ನು ಕಡಿಯದಂತೆ ಸಾಲು ಮರಗಳನ್ನು ರಕ್ಷಿಸಿದ್ದರು. ಸಾರವಾಡ ಗ್ರಾಮದ ದಕ್ಷಿಣಕ್ಕೆ ಇರುವ ಸ್ಮಶಾನ ಸ್ಥಳಾಂತರಿಸಿ ಆ ಜಾಗದಲ್ಲಿ ಕಾಶಿಯಿಂದ ಅಮೃತ ಶಿಲೆಯ ಶಿವಲಿಂಗವನ್ನು ಸ್ಥಾಪಿಸಿ ಗ್ರಾಮೋದ್ಧಾರ ಕೈಕೊಂಡರು. ವಿಜಯಪುರ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಸ್ಥಾನ ಇವರನ್ನು ಹುಡುಕಿಕೊಂಡು ಬಂದಾಗ ಸಾರವಾಡ ಗ್ರಾಮದ ನವ ಯುವಕ ಪದವೀಧರರಾದ ಸನ್ಮಾನ್ಯ ಶ್ರೀ ಬಿ. ಕೆ. ಗುಡದಿನ್ನಿಯವರಿಗೆ ಬಿಟ್ಟುಕೊಟ್ಟು ತಮ್ಮ ತ್ಯಾಗಮನೋಭಾವವನ್ನು ತೋರಿಸಿದವರು. ಅಪ್ಪಟ ಗಾಂಧೀವಾದಿಗಳಾದ ಶ್ರೀಯುತರು ಜೀವನದುದ್ದಕ್ಕೂ ಖಾದಿ ವಸ್ತ್ರಧಾರಿಗಳಾಗಿ ಸತ್ಯ, ನ್ಯಾಯ, ನೀತಿಯಿಂದ ತಮ್ಮ ಬದುಕನ್ನು ಆದರ್ಶನಾಗರಿಕರಾಗಿ ಬಾಳಿದವರು. ಸ್ವಾತಂತ್ರ ನಂತರ ಕೇಂದ್ರ ಹಾಗೂ ಭಾರತದ ರಾಜ್ಯ ಸರ್ಕಾರ ಇವರಿಗೆ ನೀಡುವ ಸರಕಾರಿ ನಿವೇಶನ ಜಮೀನುಗಳನ್ನು ತಿರಸ್ಕರಿಸಿ ಹಿರಿಯರು ಬಿಟ್ಟು ಹೋದ ಆಸ್ತಿಯಲ್ಲಿಯೇ ತೃಪ್ತಿಪಟ್ಟುಕೊಂಡು ಆದರ್ಶ ವ್ಯಕ್ತಿಗಳಾಗಿ ಹಿರಿಯ ನಾಗರೀಕರಾಗಿ ಬಾಳಿದರು.



**೨) ಶ್ರೀ ಮರುಳಸಿದ್ದಪ್ಪ ಶಿವಪ್ಪ ವಾಲಿ :**

ಸಾರವಾಡ ಗ್ರಾಮದ ಸ್ವಾತಂತ್ರ್ಯ ಯೋಧರಲ್ಲಿ ಪ್ರಮುಖರಾದ ಶ್ರೀ ಮರುಳಸಿದ್ದಪ್ಪ ಶಿವಪ್ಪ ವಾಲಿಯವರು ಅಂದಿನ ಮುಲ್ಕೀ ಪರೀಕ್ಷೆ ಪಾಸು ಮಾಡಿಕೊಂಡು ಪ್ರಾಥಮಿಕ ಶಿಕ್ಷಕ ಹುದ್ದೆಗೆ ಆಯ್ಕೆಯಾಗಿದ್ದರು. ಅಂದು ಪ್ರಾಥಮಿಕ ಶಿಕ್ಷಕರಿಗೆ ಕೊಡಮಾಡುವ ಸಂಬಳ ರೂಪಾಯಿ ಹದಿನೈದು ಮಾತ್ರ. ಆದರೆ ಇವರ ಸಹೋದರರಾದ ಶ್ರೀ ಗಿರಮಲ್ಲಪ್ಪ ವಾಲಿ ಹಾಗೂ ಶ್ರೀ ಗುರುಲಿಂಗಪ್ಪ ವಾಲಿಯವರು ನಮ್ಮ ಕಿರಾಣಿ ಅಂಗಡಿಯಲ್ಲಿ ಕೆಲಸ ಮಾಡುವ ಕೆಲಸಗಾರರಿಗೆ ಇಷ್ಟು ಸಂಬಳಕೊಡುವಾಗ ಊರು ಬಿಟ್ಟು ಇನ್ನೊಂದು ಊರಿಗೆ ಹೋಗುವುದು ಬೇಡ ನಮ್ಮೊಡನೆ ಇರಬೇಕೆಂದು ಹೇಳಿ ವ್ಯಾಪಾರ, ಕೃಷಿ ವೃತ್ತಿಯಲ್ಲಿ ತೊಡಗಿಸಿಕೊಂಡರು. ಹವ್ಯಾಸಕ್ಕಾಗಿ ಶ್ರೀಯುತರು ಗ್ರಾಮದಲ್ಲಿ ಅಕ್ಷಯಾಂಬರ, ಜೀವನ ಸಂಗೀತದಂತ ನಾಟಕಗಳಲ್ಲಿ ಭಾಗವಹಿಸಿ ಜನಮನ ಸೂರೆಗೊಂಡವರು. ಹಿರಿಯ ಸಹೋದರ ಶ್ರೀ ಗಿರಿಮಲ್ಲಪ್ಪ ವಾಲಿಯವರು ವೈಯಕ್ತಿಕ ಹಾಗೂ ಉಪ್ಪಿನ ಸತ್ಯಾಗ್ರಹದಲ್ಲಿ ಹಾಗೂ ತಾರು ತಂತಿ ಕತ್ತರಿಸುವ ಇನ್ನೂ ಹಲವಾರು ವಿಧ್ವಂಸಕ ಕಾರ್ಯಗಳಲ್ಲಿ ಭಾಗವಹಿಸಲು ವಾರಗಟ್ಟಲೇ ಗ್ರಾಮ, ಮನೆ ತೊರೆದು ಹೋದಾಗ ಇವರ ಇನ್ನೊಬ್ಬ ಅಣ್ಣ ಶ್ರೀ ಗುರುಲಿಂಗಪ್ಪ ವಾಲಿಯವರೊಡನೆ ವ್ಯಾಪಾರ ಒಕ್ಕಲುತನಗಳಲ್ಲಿ ಇವರು ತೊಡಗಿಕೊಳ್ಳುತ್ತಿದ್ದರು. ಆದರೆ ಅಂತರಂಗದಲ್ಲಿ ಸ್ವಾತಂತ್ರ್ಯದ ಕಿಚ್ಚು ಹೊತ್ತಿ ಉರಿಯುತ್ತಿತ್ತು. ಸಹೋದರ ದೊಡ್ಡವಾಲಿಯವರ ಮುಖಂಡತ್ವದಲ್ಲಿ ಹತ್ತೊಂಬತ್ತನೂರಾ ನಲವತ್ತೆರಡರ

ಚಲೆಜಾವ್ ಚಳುವಳಿಯಲ್ಲಿ ಸಮಾನ ಮನಸ್ಕರ ಗೆಳೆಯರೊಂದಿಗೆ ಮುಳವಾಡ ಗ್ರಾಮದ ಸರಹದ್ದಿನಲ್ಲಿರುವ ಸರಕಾರಿ ಪ್ರವಾಸಿ ಮಂದಿರವನ್ನು ಧ್ವಂಸಮಾಡಿ ಬೆಂಕಿ ಹಚ್ಚುವ ಕಾರ್ಯದಲ್ಲಿ ಯಶಸ್ವಿಯಾಗಿ ಜೈಲುವಾಸವನ್ನು ಅನುಭವಿಸಿ ಸ್ವಾತಂತ್ರ್ಯ ನಂತರ ಗ್ರಾಮ ಸುಧಾರಣೆಯ ಕಾರ್ಯದಲ್ಲಿ ತೊಡಗಿಕೊಂಡರು.

ಶ್ರೀ ಮರುಳಸಿದ್ದಪ್ಪ ಶಿವಪ್ಪ ವಾಲಿಯವರು ಜನಾನುರಾಗಿಗಳಾಗಿದ್ದು, ಕಿರಾಣಿ ಅಂಗಡಿಗೆ ಸಣ್ಣಮಕ್ಕಳು ವ್ಯಾಪಾರಕ್ಕಾಗಿ ಬಂದರೂ ಅವರೊಡನೆ ನ್ಯಾಯವಾಗಿ ವ್ಯಾಪಾರ ಮಾಡುತ್ತಿದ್ದರು. ಇವರು ಕೆಲವೊಂದು ಆಯುರ್ವೇದ ಔಷಧಿಗಳನ್ನು ನೀಡಿ ಬಡಜನರ ಉಪಚಾರ ಮಾಡುತ್ತಿದ್ದರು. ಬಡಬಗ್ಗರ ಬಗೆಗೆ ಯಾವಾಗಲೂ ಅನುಕಂಪ ಉಳ್ಳವರಾಗಿ ಅಂಗಡಿಯಲ್ಲಿ ಅಣ್ಣಂದಿರ ಕಣ್ಣು ತಪ್ಪಿಸಿ ಸಹಾಯ ಸಹಕಾರ ನೀಡುತ್ತಿದ್ದರು. ತಮ್ಮ ಅಂಗಡಿ ಮುಂದಿನ ಅಂಗಳ ಗುಡಿಸುವ ಮಾದರ ಹಣಮವ್ವನಿಗೆ ಪ್ರತಿದಿನ ಸಕ್ಕರಿ, ಚಹಾಪುಡಿ ಉಚಿತವಾಗಿ ನೀಡಿ ಅವಳಿಗೆ ದೇವಸಮಾನರಾಗಿದ್ದರು. ಗ್ರಾಮದಲ್ಲಾಗುವ ಮದುವೆ ಹಾಗೂ ಗುಗ್ಗಳ ಕಾರ್ಯಕ್ರಮಗಳಲ್ಲಿ ಪುರವಂತರಾಗಿ ಶರಣರ ವಚನಗಳನ್ನು ಹೇಳುವ ಹಾಗೂ ಹಾಡುವ ಹವ್ಯಾಸ ಉಳ್ಳವರಾಗಿದ್ದರು. ಸ್ವಾತಂತ್ರ್ಯ ನಂತರ ಗ್ರಾಮ ಸುಧಾರಣೆ ಹಾಗೂ ಗ್ರಾಮದ ಪಟ್ಟಭದ್ರ ಹಿತಾಸಕ್ತಿಗಳಿಂದ ದುಡಿಯುವ ಜನರಿಗೆ ನ್ಯಾಯ ಒದಗಿಸಿಕೊಟ್ಟರು. ಸರಕಾರ ಕೊಡಮಾಡುವ ಜಿಲ್ಲಾ ಕೇಂದ್ರದಲ್ಲಿಯ ಮನೆ ನಿವೇಶನ ಹಾಗೂ ಜಮೀನುಗಳನ್ನು ಪಡೆದುಕೊಳ್ಳದೆ ಹಿಂದಿರುಗಿಸಿದರು. ಸರಕಾರ ಕೊಡಮಾಡುವ ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಾಶಾಸನಗಳನ್ನು ಪಡೆದುಕೊಂಡು ಹಿರಿಯರಿಂದ ಬಂದ ಅಲ್ಪ ಸ್ವಲ್ಪ ಜಮೀನಿನಲ್ಲಿ ತೃಪ್ತಿಪಟ್ಟುಕೊಂಡರು. ಸಣ್ಣ ಕಿರಾಣಿ ಅಂಗಡಿಯಲ್ಲಿ ಪ್ರಾಮಾಣಿಕವಾದ ವ್ಯಾಪಾರ ಮಾಡುತ್ತ 'ಕೊಳವಿ ತನಕ ಕೂಲಿ ಮಾಡಬೇಕು, ದುಡ್ಡಿನ ತನಕ ವ್ಯಾಪಾರ ಮಾಡಬೇಕು' ಎಂದು ಹೇಳುತ್ತಿದ್ದರು. ಹಿರಿಯರು ಕೊಡಮಾಡಿದ ಹೊಲ ಮನೆಯನ್ನು ಕಳೆದುಕೊಳ್ಳದೇ ಹೆಚ್ಚಿಗೆ ಗಳಿಕೆ ಮಾಡದೆ ತಮ್ಮ ಮಕ್ಕಳಿಗೆ ವಿದ್ಯಾಬುದ್ಧಿ ಕಲಿಸಿ ಆದರ್ಶ ದಾಂಪತ್ಯವನ್ನು ನಡೆಸಿದರು. ಗ್ರಾಮದಲ್ಲಿ ನಡೆಯುವ ಜಾತ್ರೆ ಉತ್ಸವದ ಹಣಕಾಸಿನ ವ್ಯವಹಾರವನ್ನು ಪ್ರಾಮಾಣೀಕವಾಗಿ ನಿರ್ವಹಿಸುತ್ತಿದ್ದರು. ಈ ಸಂದರ್ಭದಲ್ಲಿ ಬಯಲಾಟ, ನಾಟಕಗಳ ಪಾತ್ರಧಾರಿಗಳಿಗೆ ಬಣ್ಣ ಹಚ್ಚುವ ಹವ್ಯಾಸವನ್ನು ಜೀವನದ ಕೊನೆವರೆಗು ನಡೆಸಿಕೊಂಡು ಬಂದರು. ಜೀವನದುದ್ದಕ್ಕೂ ಖಾದಿವಸ್ತ್ರಧಾರಿಗಳಾಗಿ ಗಾಂಧೀ ಮಾರ್ಗದಲ್ಲಿ ಬದುಕಿ ಬಾಳಿದರು.



## ಶ್ರೀ ಈಶ್ವರಪ್ಪ ನಿಂಗಪ್ಪ ಯಾದವಾಡ :

ಸಾರವಾಡದ ಸ್ವಾತಂತ್ರ್ಯಯೋಧರ ಸಂಘಟನೆಯಲ್ಲಿ ಶ್ರೀ ಈಶ್ವರಪ್ಪ ನಿಂಗಪ್ಪ ಯಾದವಾಡ ಇವರಿಗೆ ಜುಮನಾಳವೆಂದು ಅಡ್ಡ ಹೆಸರುಂಟು. ಶ್ರೀಯುತರು ಆಧುನಿಕ ಕೃಷಿ ಕಾರ್ಯದಲ್ಲಿ ತೊಡಗಿಕೊಂಡಿದ್ದು ಉತ್ತಮ ಬೆಳೆಗಳನ್ನು ಬೆಳೆಯುತ್ತಿದ್ದರು. ಸಾರವಾಡದ ದೊಡ್ಡವಾಲಿಯವರ ಗರಡಿಯಲ್ಲಿ ಪಳಗಿದ ಶ್ರೀ ಯಾದವಾಡರವರು ವಾಲಿಯವರು ಬಬಲೇಶ್ವರದಲ್ಲಿ ಕೈಕೊಂಡ ಉಪ್ಪಿನ ಸತ್ಯಾಗ್ರಹದಲ್ಲಿ ಭಾಗವಹಿಸಿ ಪೊಲೀಸರ ಕೈಗೆ ಸಿಕ್ಕಿ ಬಿದ್ದಾಗ ಇನ್ನು ಹದಿನೆಂಟು ವರ್ಷ ತುಂಬಿಲ್ಲವೆಂದು ಬಾಲಾಪರಾಧಿಯೆಂದು ತೀರ್ಮಾನಿಸಿ ಇವರಿಗೆ ಬುದ್ಧಿ ಹೇಳಿ ಬಿಟ್ಟು ಬಿಟ್ಟಿದ್ದರು. ಸಾರವಾಡ ಸ್ವಾತಂತ್ರ್ಯಯೋಧರಲ್ಲಿ ಇವರು ಅತಿ ಚಿಕ್ಕ ವಯಸ್ಸಿನವರು. ಚಲೆಜಾವ್ ಚಳುವಳಿಯಲ್ಲಿ ಭಾಗವಹಿಸಿ ಯರವಾಡಾ ಜೈಲುವಾಸ ಅನುಭವಿಸಿದವರು. ಭಾರತ ಸ್ವಾತಂತ್ರ್ಯದ ನಂತರ ಸಾರವಾಡ ಗ್ರಾಮ ಸುಧಾರಣೆಗಾಗಿ ಗ್ರಾಮ ಪಂಚಾಯತಿಯ ಅಧ್ಯಕ್ಷರಾಗಿ ಆಯ್ಕೆಯಾಗಿ ವಿಧಾಯಕ ಕಾರ್ಯಕ್ರಮಗಳನ್ನು ಕೈಕೊಂಡು ಸುತ್ತಮುತ್ತಲ ಹಳ್ಳಿಗಳಲ್ಲಿ ಮಾದರಿ ಗ್ರಾಮವನ್ನಾಗಿ ಪರಿವರ್ತಿಸಿದರು. ಸ್ವಚ್ಛತೆ, ಇಂಗು ಗುಂಡಿಗಳ ನಿರ್ಮಾಣ ಕುಡಿಯುವ ನೀರಿನ ಬಾವಿ, ಕೆರೆಗಳ ದುರಸ್ತಿ, ಬೀದಿ ದೀಪಗಳ ಸುಧಾರಣೆ ಮಾಡಿ ಜನಾನುರಾಗಿಗಳಾಗಿ ಆಡಳಿತ ನಡೆಸಿದರು. ಒಕ್ಕಲುತನದ ಜೊತೆಗೆ ಬಟ್ಟೆ ಅಂಗಡಿಯನಿಟ್ಟು ಪ್ರಮಾಣಿಕ ವ್ಯಾಪಾರ ಮಾಡಿದರು. ಶ್ರೀಯುತರು ಸ್ವಾತಂತ್ರ್ಯ ಯೋಧರಿಗೆ ಕೊಡಮಾಡುವ ಮನೆ ನಿವೇಶನ ಹಾಗೂ ಜಮೀನುಗಳನ್ನು ಪಡೆದುಕೊಳ್ಳದೇ ತಿರಸ್ಕರಿಸಿದರು. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಾಶಾಸನವನ್ನು ಮಾತ್ರ ಪಡೆದು ಜೀವನದ ಕೊನೆಯವರೆಗೂ ಖಾದಿಧಾರಿಗಳಾಗಿ ಬದುಕಿದರು. ಗ್ರಾಮದ ಶಿಕ್ಷಣಕ್ಕಾಗಿ ಪ್ರೌಢಶಾಲೆಯ ಪ್ರಾರಂಭ ಹಾಗೂ ಇನ್ನೂ ಹಲವಾರು ಜನೋಪಯೋಗಿ ಕಾರ್ಯಗಳನ್ನು ಕೈಕೊಂಡು ಆದರ್ಶ ಜೀವನ ಬದುಕಿ ಬಾಳಿದರು.

## ಶ್ರೀ ಬಸಪ್ಪ ಅಲ್ಲಪ್ಪ ಬಳಗಲಿ :

ಸಾರವಾಡ ಸ್ವಾತಂತ್ರ್ಯ ಯೋಧರ ಬಳಗದಲ್ಲಿ ಶ್ರೀ ಬಸಪ್ಪ ಅಲ್ಲಪ್ಪ ಬಳಗಲಿಯವರು ವಿಶಿಷ್ಟ ವ್ಯಕ್ತಿತ್ವ ಹೊಂದಿದವರು. ಇವರು ರೈತ ಕೂಲಿಕಾರರಾಗಿ ಬದುಕಿದವರು ಬಸವಣ್ಣನವರ ಕಾಯಕವೇ ಕೈಲಾಸ ಎಂಬ ತತ್ವವನ್ನು ಅಕ್ಷರ ಸಹ ಪಾಲಿಸಿ ಕಾಯಕಯೋಗಿಗಳಾಗಿ ಬದುಕಿದವರು. ಮುರಿಗೆಪ್ಪಣ್ಣ ಸುಗಂಧಿಯವರು ವೈಯಕ್ತಿಕ ಸತ್ಯಾಗ್ರಹದ ಸಂದರ್ಭದಲ್ಲಿ ಮಾತನಾಡಿದ ದೇಶ

ಪ್ರೇಮದ ಮಾತುಗಳನ್ನು ಕೇಳಿ ಇವರಲ್ಲಿರುವ ದೇಶ ಪ್ರೇಮದ ಕಿಚ್ಚು ಪ್ರಜ್ವಲಿಸಿತು. ಅಂದೇ ಅವರು ತಮ್ಮ ತನು ಮನ ಧನವನ್ನು ದೇಶದ ಸ್ವಾತಂತ್ರ್ಯಕ್ಕಾಗಿ ಮೀಸಲಿಟ್ಟರು. ವೈಯಕ್ತಿಕ ಸತ್ಯಾಗ್ರಹ ಕೈಕೊಳ್ಳಲು ಮುರಿಗೆಪ್ಪ ಸುಗಂಧಿಯವರಿಂದ ಒಪ್ಪಿಗೆ ಪಡೆದು ಬಾಬಾನಗರ ಗ್ರಾಮದಲ್ಲಿ ವೈಯಕ್ತಿಕ ಸತ್ಯಾಗ್ರಹವನ್ನು ಕೈಕೊಂಡು ಉಗ್ರವಾದ ಭಾಷಣ ಮಾಡಿದರು. ಇದರಿಂದ ರೊಚ್ಚಿಗೆದ್ದ ಪೊಲೀಸ್ ಅಧಿಕಾರಿಗಳು ಇವರನ್ನು ದಸ್ತಗಿರಿಮಾಡಿದರು ಅದರಿಂದ ಮೂರು ತಿಂಗಳುಗಳಕಾಲ ಸೆರೆಮನೆವಾಸ ಅನುಭವಿಸಿ ಮರಳಿ ಬಂದಾಗ ಅಪ್ಪಟ ಗಾಂಧೀವಾದಿಗಳಾಗಿದ್ದರು. ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಮುಳವಾಡ ಸರಕಾರಿ ಪ್ರವಾಸ ಮಂದಿರವನ್ನು ಧ್ವಂಸಮಾಡಿದ ನಂತರ ದಸ್ತಗಿರಿ ಮಾಡಲಾದ ಇವರಿಗೆ ಸರಕಾರಿ ವಕೀಲರು ಕ್ಷಮಾಪಣೆ ಕೇಳಲು ಸೂಚಿಸಿದಾಗ ನಾವು ಸತ್ತರು ಕ್ಷಮಾಪಣೆ ಕೇಳುವುದಿಲ್ಲವೆಂದು ಗುಡುಗಿದರು ಐದು ವರ್ಷ ಶಿಕ್ಷೆ ರೂಪಾಯಿ ಒಂದು ನೂರು ದಂಡ. ದಂಡ ಕೊಡದಿದ್ದರೆ ಮತ್ತೊಂದು ವರ್ಷ ಸಜೆ ಅನುಭವಿಸಬೇಕೆಂದು ವಿಶೇಷ ನ್ಯಾಯಾಧೀಶರು ಆದೇಶಿಸಿದಾಗ ಇವರು 'ಹೆಣ ಹೊತ್ತವರಿಗೆ ಕೂದಲ ಭಾರವಾಗತಾವೇನ್ರಿ ಸಾಯಬರೆ' ಎಂದು ಖಂಡತುಂಡವಾಗಿ ಮಾತನಾಡಿದವರು. ವಿಜಯಪುರ ನಗರದಲ್ಲಿ ಸ್ವಾತಂತ್ರ್ಯ ಯೋಧರಿಗೆ ನೀಡಿದ ಉಚಿತ ನಿವೇಶನ ಹಾಗೂ ಕೇಂದ್ರ ಮತ್ತು ರಾಜ್ಯ ಸರಕಾರಗಳ ಮಾಶಾಸನ ಪಡೆದು ನೆಮ್ಮದಿಯಾಗಿ ಬಾಳಿ ಬದುಕಿದರು.

### ಶ್ರೀ ಈಶ್ವರಪ್ಪ ತುಕ್ಕಪ್ಪ ಅರ್ಜುಣಗಿ :

ಶ್ರೀ ಈಶ್ವರಪ್ಪ ತುಕ್ಕಪ್ಪ ಅರ್ಜುಣಗಿಯವರು ಸಾರವಾಡ ಗ್ರಾಮದ ಒಕ್ಕಲುತನ ಕುಟುಂಬದಲ್ಲಿ ಜನಿಸಿ ಅದೇ ಉದ್ಯೋಗದಲ್ಲಿ ಮುಂದುವರೆದವರು. ತುಂಬು ಕುಟುಂಬದ ನೇತೃತ್ವ ವಹಿಸಿ ಆದರ್ಶ ಕೃಷಿಕರಾಗಿ ಬಾಳಿದವರು. ಶ್ರೀ ದೊಡ್ಡವಾಲಿಯವರ ಒಡನಾಡಿಗಳಾದ ಅರ್ಜುಣಗಿಯವರು ವೈಯಕ್ತಿಕ ಹಾಗೂ ಉಪ್ಪಿನ ಸತ್ಯಾಗ್ರಹಗಳಲ್ಲಿ ಭಾಗವಹಿಸಿ ಜೈಲುವಾಸ ಅನುಭವಿಸಿದ್ದರು. ಮನೆಯಲ್ಲಿ ಯಾವತ್ತೂ ತೊಂದರೆಯಲ್ಲಿರುತ್ತಿದ್ದರಿಂದ ಇವರನ್ನು ತಮ್ಮ ಗೆಳೆಯರೆಲ್ಲಾ ಅರ್ಜುಣಗಿ ಗೊತ್ತಿ ಎಂದು ಕರೆಯುತ್ತಿದ್ದರು. ಮುಂದೆ ಇವರು ಚಲೇಜಾವ್ ಚಳುವಳಿಯಲ್ಲಿ ಪ್ರಮುಖಪಾತ್ರವಹಿಸಿ ಮುಳವಾಡ ಸರ್ಕಾರಿ ಪ್ರವಾಸಿ ಮಂದಿರವನ್ನು ಧ್ವಂಸಗೊಳಿಸಿ ಯರವಾಡಾ ಜೈಲಿನಲ್ಲಿ ಸೆರೆಮನೆವಾಸ ಅನುಭವಿಸಿದರು. ಒಕ್ಕಟ್ಟಿನಿಂದಿರುವ ಸಾರವಾಡ ಸ್ವಾತಂತ್ರ್ಯಯೋಧರ ಬಲವನ್ನು ಕಂಡ ಬ್ರಿಟೀಷ ಅಧಿಕಾರಿಗಳು ಇವರನ್ನು ಯರವಾಡಾ ಜೈಲಿನಿಂದ ಬೆಳಗಾವಿ



ಹತ್ತಿರವಿರುವ ಹಿಂಡಲಗಾ ಜೈಲಿಗೆ ಸ್ಥಳಾಂತರಿಸಿದರು. ಅಲ್ಲಿಯೂ ಇವರು ಪ್ರಾಮಾಣಿಕರಾಗಿ ಸೌಮ್ಯ ನಡೆ ನುಡಿಯಿಂದ ಬಿಡುಗಡೆಗೊಂಡು ಮರಳಿ ಸ್ವಗ್ರಾಮಕ್ಕೆ ಆಗಮಿಸಿದರು. ಸರ್ಕಾರದ ಇತರ ಸವಲತ್ತುಗಳಾದ ಉಚಿತ ನಿವೇಶನ ಹಾಗೂ ಜಮೀನು ತಿರಸ್ಕರಿಸಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಾಶಾಸನವನ್ನು ಮಾತ್ರ ಪಡೆದು ನೆಮ್ಮದಿಯ ಜೀವನ ನಡೆಸಿದರು. ಶ್ರೀಯುತರ ಜೀವನ ಸೀದಾ ಸಾದಾ. ಖಾದಿ ಬಟ್ಟೆ, ತಲೆಗೆ ಖಾದಿ ಟೊಪ್ಪಿಗೆ ಅಥವಾ ರುಮಾಲು ಸುತ್ತಿಕೊಂಡು ನೆಮ್ಮದಿಯಾಗಿ ಬದುಕಿದವರು. ಮೃದು ಮಾತುಗಳನ್ನಾಡುತ್ತ ಎಲ್ಲರ ಪ್ರೀತಿಗೆ ಪಾತ್ರರಾಗಿದ್ದರು. ಸದಾ ಸಮಾಜ ಸೇವೆ ಮಾಡುತ್ತ ಜನಾನುರಾಗಿಗಳಾಗಿದ್ದರು.

### ಶ್ರೀ ಪಾಂಡು ಗೋವಿಂದ ಪರೀಟ :

ಶ್ರೀ ಪಾಂಡು ಗೋವಿಂದ ಪರೀಟ ಇವರ ತಂದೆ ಗೋವಿಂದ ಮಹಾರಾಷ್ಟ್ರದಿಂದ ಕರ್ನಾಟಕಕ್ಕೆ ವಲಸೆ ಬಂದವರು. ಮನೆಭಾಷೆ ಮರಾಠಿಯಾಗಿದ್ದರೂ ಕನ್ನಡವನ್ನು ಇವರು ಚೆನ್ನಾಗಿ ಮಾತನಾಡುತ್ತಿದ್ದರು. ಸಾರವಾಡ ಗ್ರಾಮದ ಗೌಡರು, ಕುಲಕರ್ಣಿಯವರ ಹಾಗೂ ಇನ್ನೂ ಹಲವಾರು ಪ್ರತಿಷ್ಠಿತ ಶ್ರೀಮಂತ ಮನೆಗಳ ಮಾಸಿದ ಬಟ್ಟೆಗಳನ್ನು ತಂದು ಗ್ರಾಮದ ಸಮೀಪವಿರುವ ದೋಣಿ ನದಿಯಲ್ಲಿ ಸ್ವಚ್ಛಗೊಳಿಸಿ ಮರಳಿ ಅವರ ಮನೆಗೆ ಮುಟ್ಟಿಸುತ್ತಿದ್ದರು. ಪ್ರತಿಯೊಂದು ಮನೆಯಿಂದ ತಂದ ಬಟ್ಟೆಗಳನ್ನು ಅವರವರ ಮನೆಗಳಿಗೆ ಲೆಕ್ಕಾಚಾರದಲ್ಲಿ ಮುಟ್ಟಿಸುವುದು ಒಂದು ಕಲೆಯಾಗಿತ್ತೆಂದು ಹೇಳಬಹುದು. ಮಳೆ, ಚಳಿ, ಬಿಸಿಲೆನ್ನದೆ ಹೆಂಡತಿ ಮಕ್ಕಳೊಂದಿಗೆ ಎಡಬಿಡದೇ ತಮ್ಮ ಕಾಯಕವನ್ನು ಮುಂದುವರೆಸಿಕೊಂಡು ಹೊರಟಿದ್ದರು. ಪ್ರತಿದಿನ ಬಟ್ಟೆ ತೊಳೆದು ಒಣಗಿಸಿ ಅವರವರ ಮನೆಗಳಿಗೆ ಮುಟ್ಟಿಸಿದ ನಂತರ ಅವರು ಎರಡು ರೊಟ್ಟಿ ಅಥವಾ ಚಪಾತಿ, ಪಲ್ಯ, ಹಬ್ಬ ಹರಿದಿನಗಳಲ್ಲಿ ಹೋಳಿಗೆ ಕೊಟ್ಟು ವರ್ಷಕ್ಕೊಮ್ಮೆ ಜೋಳ, ಗೋಧಿ ಕೊಟ್ಟು ತಮ್ಮ ಕೃತಜ್ಞತೆ ಸಲ್ಲಿಸುತ್ತಿದ್ದರು.

ಶ್ರೀ ಪಾಂಡು ಪರೀಟರವರು ಸಾರವಾಡದ ಬಜಾರದಲ್ಲಿಯೇ ಮನೆ ಇರುವುದರಿಂದ ಅಂದಿನ ಕಾಂಗ್ರೆಸ್ ಹಾಗೂ ಸ್ವಾತಂತ್ರ್ಯ ಯೋಧರ ಕೇಂದ್ರಸ್ಥಾನವಾದ ವಾಲಿಯವರ ಕಿರಾಣಿ ಹಾಗೂ ಕಪ್ಪಡ ಅಂಗಡಿಯಲ್ಲಿ ಹೆಚ್ಚಿನ ಸಮಯ ಕಳೆಯುತ್ತ ಸ್ವಾತಂತ್ರ್ಯ ಯೋಧರ ಸಂಪರ್ಕದಲ್ಲಿದ್ದರು. ವೈಯಕ್ತಿಕ ಸತ್ಯಾಗ್ರಹ ಹಾಗೂ ಉಪ್ಪಿನ ಸತ್ಯಾಗ್ರಹದಲ್ಲಿ ದೊಡ್ಡವಾಲಿಯವರೊಡನಿದ್ದರು.

ಚಲೇಜಾವ ಚಳುವಳಿ ಸಂದರ್ಭದಲ್ಲಿ ಭಾಗವಹಿಸಿ ಯರವಾಡಾ ಕಾರಾಗ್ರಹದಲ್ಲಿ ಮೂರು ವರ್ಷ ಶಿಕ್ಷೆ ಅನುಭವಿಸಿ ಅಪ್ಪಟ ಗಾಂಧೀವಾದಿಗಳಾಗಿ ಮಾರ್ಪಟ್ಟರು. ಗ್ರಾಮದಲ್ಲಿ ಯಾರಾದರೂ ತೀರಿಕೊಂಡರೆ ದೂರದ ಊರುಗಳಲ್ಲಿರುವ ಬಂಧುಗಳಿಗೆ ದೂರವಾಣಿ ಸಂಪರ್ಕವಿಲ್ಲದ ವೇಳೆಯಲ್ಲಿ ಸೈಕಲ್ ಮೇಲೆ ಹೋಗಿ ಸುದ್ದಿ ಮುಟ್ಟಿಸಿ ಬರುತ್ತಿದ್ದರು. ಸ್ವಾತಂತ್ರ್ಯದ ನಂತರ ಸರ್ಕಾರ ಕೊಡಮಾಡುವ ಸರ್ಕಾರದ ಹೆಚ್ಚುವರಿ ಜಮೀನಿಗಾಗಿ ಹೋರಾಡಿದರೂ ಸಿಗಲಿಲ್ಲ. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಾಶಾಸನ ಹಾಗೂ ವಿಜಯಪುರ ನಗರದಲ್ಲಿ ಮನೆ ನಿವೇಶನವನ್ನು ಪಡೆದುಕೊಂಡಿದ್ದರು. ನೇರ, ನಿಷ್ಠುರ ಹಾಗೂ ದಿಟ್ಟ ತನದ ಮಾತುಗಳಿಂದ ಎಲ್ಲರ ಪ್ರೀತಿ ಪಾತ್ರರಾಗಿದ್ದರು.

## ಶ್ರೀ ಚನ್ನಪ್ಪ ಸಿದ್ದಪ್ಪ ಗುಡದಿನ್ನಿ :

ವಿಜಯಪುರ ಜಿಲ್ಲೆಯ ಅಂದಿನ ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಹಾಗೂ ಲೋಕಸಭಾ ಸದಸ್ಯರು ಆಗಿದ್ದ ಶ್ರೀ ಬಿ. ಕೆ. ಗುಡದಿನ್ನಿ ಅವರ ಚಿಕ್ಕಪ್ಪನವರಾಗಿದ್ದ ಶ್ರೀ ಚನ್ನಪ್ಪ ಮಲ್ಲಪ್ಪ ಗುಡದಿನ್ನಿಯವರು ಸಾರವಾಡ ಗ್ರಾಮದ ಒಕ್ಕಲು ಮನೆತನದಲ್ಲಿ ಜನಿಸಿದವರು. ಅಂದಿನ ಮೂರನೇ ತರಗತಿಯಲ್ಲಿ ತೇರ್ಗಡೆ ಹೊಂದಿ ಕುಲಕಸುಬಾದ ಕೃಷಿಯಲ್ಲಿಯೇ ಮುಂದುವರೆದಿದ್ದರು. ತಮ್ಮ ಹೆಚ್ಚಿನ ಸಮಯವನ್ನು ಸಾರ್ವಜನಿಕರ ಕೆಲಸ ಕಾರ್ಯಗಳಿಗಾಗಿ ವಿನಿಯೋಗಿಸುತ್ತಿದ್ದರು. ದೊಡ್ಡವಾಲಿಯವರ ಸಂಪರ್ಕಕ್ಕೆ ಬಂದ ಗುಡದಿನ್ನಿಯವರು ಇವರೊಂದಿಗೆ ವೈಯಕ್ತಿಕ ಹಾಗೂ ಉಪ್ಪಿನ ಸತ್ಯಾಗ್ರಗಳಲ್ಲಿ ಭಾಗವಹಿಸಿದ್ದರು ಮತ್ತು ಚಲೇಜಾವ್ ಚಳುವಳಿಯಲ್ಲಿ ಭಾಗವಹಿಸಿ ಮುಳವಾಡ ಸರಕಾರಿ ಪ್ರವಾಸಿ ಮಂದಿರವನ್ನು ಧ್ವಂಸಮಾಡಿ ಯರವಾಡಾ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸಿದರು. ಅಲ್ಲಿರುವಾಗ ಇವರೆಲ್ಲ ಸೇರಿ ಮಾಡಿದ ನಾಟಕದಲ್ಲಿ ಶ್ರೀಯುತರ ಅಕ್ಷಯಾಂಬರ ನಾಟಕದ ಭೀಮನ ಪಾತ್ರದ ಮಾತುಗಳು ಕೇಳಿದವರ ಎದೆ ಝಲ್ಲೆನಿಸುವಂತೆ ಮಾತನಾಡುತ್ತಿದ್ದರು. ಧ್ವನಿವರ್ಧಕವಿಲ್ಲದ ಅಂದಿನ ದಿನಗಳಲ್ಲಿ ಮೈಲಿಗಟ್ಟಲೇ ಇವರ ಧ್ವನಿ ಕೇಳಿಸುತ್ತಿತ್ತು. ಸರಕಾರ ಸ್ವಾತಂತ್ರ್ಯ ಯೋಧರಿಗೆ ನೀಡುವ ಮಾಶಾಸನವನ್ನು ಪಡೆಯುವ ಭಾಗ್ಯ ಇವರಿಗಿರಲಿಲ್ಲ. ಅನಾರೋಗ್ಯದಿಂದ ಇವರು ಬೇಗನೆ ನಮ್ಮನ್ನಗಲಿದರು. ಮುಂದೆ ಇವರ ಶ್ರೀಮತಿ ಸಾತವ್ವ ಗುಡದಿನ್ನಿಯವರು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಾಶಾಸನವನ್ನು ಪಡೆದುಕೊಂಡರು. ಶ್ರೀಯುತರು ತಮ್ಮ ಜೀವಿತಾವಧಿಯಲ್ಲಿ ಖಾದಿ ವಸ್ತ್ರಧಾರಿಗಳಾಗಿದ್ದು, ತಲೆಗೆ ಮಾತ್ರ ಗಾಂಧೀ ಟೊಪ್ಪಿಗೆ ವಿಶೇಷವಾಗಿ ರೇಷ್ಮೆ



ರುಮಾಲು ಸುತ್ತುತ್ತಿದ್ದರು. ತಮ್ಮ ಗೆಳೆಯರ ಬಳಗದಲ್ಲಿ ಎಲ್ಲರೊಂದಿಗೆ ಅನ್ಯೋನ್ಯವಾಗಿದ್ದು ರಂಗಭೂಮಿಯ ಮಹಾನ್ ನಟರಾಗಿ ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿದಿರುತ್ತಾರೆ.

## ಶ್ರೀ ಸಿದ್ದಗೊಂಡಪ್ಪ ಚನ್ನಪ್ಪ ಸಾವಳಗಿ :

ಸಾರವಾಡ ಸ್ವಾತಂತ್ರ್ಯಯೋಧರ ಗುಂಪಿನಲ್ಲಿ ಎದ್ದು ಕಾಣುವ ವ್ಯಕ್ತಿತ್ವ ಇವರದಾಗಿತ್ತು. ಓದು ಬರಹ ಬಲ್ಲವರಾಗಿದ್ದ ಇವರು ಒಕ್ಕಲುತನವನ್ನು ತಮ್ಮ ಪ್ರಧಾನ ವೃತ್ತಿಯನ್ನಾಗಿ ಮಾಡಿಕೊಂಡಿದ್ದರು. ತಮ್ಮ ಬಿಡುವಿನ ಸಮಯದಲ್ಲಿ ವಾಲಿ ಸಹೋದರರ ಅಂಗಡಿಯಲ್ಲಿಯೇ ಕಳೆಯುತ್ತಿದ್ದು, ದೊಡ್ಡವಾಲಿಯವರು ಕೈಕೊಂಡ ವೈಯಕ್ತಿಕ ಹಾಗೂ ಉಪ್ಪಿನ ಸತ್ಯಾಗ್ರಗಳಲ್ಲಿ ಭಾಗವಹಿಸಿದ್ದರು ಹಾಗೂ ಅಸಹಕಾರ ಚಳುವಳಿಯಲ್ಲಿ ತಾರ್ ತಂತಿ ಕತ್ತರಿಸುವುದು. ಅಂಚೆ ಕಚೇರಿ ಲೂಟಿ ಮಾಡುವ ಕಾರ್ಯಗಳಲ್ಲಿಯೂ ತೊಡಗಿಕೊಂಡು ಸಣ್ಣಪುಟ್ಟ ಶಿಕ್ಷೆಯನ್ನು ಅನುಭವಿಸಿದ್ದರು. ಮುಂದೆ ಹತ್ತೊಂಬತ್ತನೂರಾ ನಲವತ್ತೆರಡರ ಚಲೇಜಾವ್ ಚಳುವಳಿಯಲ್ಲಿ ಸಾರವಾಡ ದೊಡ್ಡ ವಾಲಿಯವರ ಗುಂಪಿನಲ್ಲಿ ಗುರುತಿಸಿಕೊಂಡು ಮುಳವಾಡ ಸರಕಾರಿ ಪ್ರವಾಸಿ ಮಂದಿರವನ್ನು ಸುಟ್ಟು ಹಾಕುವಲ್ಲಿ ಇವರದು ಪ್ರಮುಖ ಪಾತ್ರವಾಗಿತ್ತು. ಮುಂದೆ ಆರು ತಿಂಗಳು ವಿಜಯಪುರ ದರ್ಗಾ ಜೈಲಿನಲ್ಲಿ ವಿಚಾರಣಾಧೀನ ಕೈದಿಗಳಾಗಿ ಮೂರು ವರ್ಷ ಪುಣಾ ಸಮೀಪವಿರುವ ಯರವಾಡಾ ಜೈಲಿನಲ್ಲಿ ಶಿಕ್ಷೆ ಅನುಭವಿಸಿ ಅಪ್ಪಟ ಗಾಂಧೀವಾದಿಗಳಾಗಿ ಮಾರ್ಪಟ್ಟರು. ಶ್ರೀಯುತರು ಪ್ರತಿನಿತ್ಯ ವರ್ತಮಾನ ಪತ್ರಿಕೆಗಳನ್ನು ಓದುವ ಹವ್ಯಾಸವನ್ನು ರೂಢಿಸಿಕೊಂಡಿದ್ದರು. ಇವರು ಸಹ ದೇಶ ಸ್ವಾತಂತ್ರ್ಯದ ನಂತರ ಸರಕಾರ ಸ್ವಾತಂತ್ರ್ಯ ಯೋಧರಿಗೆ ಕೊಡಮಾಡುವ ಜಿಲ್ಲಾ ಕೇಂದ್ರದ ಮನೆ ನಿವೇಶನವನ್ನು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನೀಡುವ ಸರ್ಕಾರಿ ಹೆಚ್ಚುವರಿ ಜಮೀನಿಗಾಗಿ ಆಸೆ ಪಡದೆ ಕಡುಬಡವರಿಗೆ ನಿರಾಶ್ರಿತರಿಗೆ ನೀಡಬೇಕೆಂದು ತಿಳಿಸಿದರು. ಸದಾಕಾಲ ಶುಭ್ರ ಖಾದಿ ಬಟ್ಟೆ, ತಲೆಗೆ ಗಾಂಧಿ ಟೊಪ್ಪಿಗೆಯನ್ನು ಧರಿಸುತ್ತಿದ್ದರು. ಕೇಂದ್ರ ಹಾಗೂ ರಾಜ್ಯ ಸರಕಾರಗಳ ಮಾಶಾಸನವನ್ನು ಪಡೆದುಕೊಂಡು ತಮ್ಮ ಜೀವನದ ಕೊನೆಗಾಲವನ್ನು ನೆಮ್ಮದಿಯಾಗಿ ಮುಗಿಸಿದರು.

## ಶ್ರೀ ಶಂಕರಯ್ಯ ಮಲ್ಲಯ್ಯ ಪೂಜಾರಿ :

ಶ್ರೀ ಶಂಕರಯ್ಯ ಮಲ್ಲಯ್ಯ ಪೂಜಾರಿಯವರು ಸಾರವಾಡದ ಶ್ರೀ

ಈಶ್ವರ ದೇವರ ಪೂಜಾರಿಗಳಾಗಿದ್ದು, ವರ್ಷದ ಆರು ತಿಂಗಳು ದೇವರ ಪೂಜೆಯ ಕಾರ್ಯಗಳು ಇವರಿಗೆ ದೊರೆಯುತ್ತಿತ್ತು. ಜೊತೆಗೆ ದೇವರ ಪೂಜೆಗಾಗಿ ಇವರಿಗೆ ಬೆಲೆಬಾಳುವ ಫಲವತ್ತಾದ ದೋಣಿ ಜಮೀನಿನ ಮಾಲಕರಾಗಿದ್ದರು. ಶ್ರೀ ಗಿರಿಮಲ್ಲಪ್ಪ ವಾಲಿಯವರ ಪ್ರಭಾವಕ್ಕೊಳಗಾದ ಶಂಕರಯ್ಯನವರು ವೈಯಕ್ತಿಕ ಹಾಗೂ ಉಪ್ಪಿನ ಸತ್ಯಾಗ್ರಹಗಳ ಸಂದರ್ಭದಲ್ಲಿ ಭಾಗವಹಿಸಿದ್ದರು. ಮುಂದೆ ಹತ್ತೊಂಬತ್ತನೂರಾ ನಲವತ್ತೆರಡರ ಚಲೇಜಾವ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿ ಮುಳವಾಡ ಗ್ರಾಮದ ಸರಕಾರಿ ಪ್ರವಾಸಿ ಮಂದಿರದ ಪೀಠೋಪಕರಣ ಹಾಗೂ ದಫ್ತರ ಕಾಗದ ಪತ್ರಗಳನ್ನು ಸುಟ್ಟು ಹಾಕಿ ಬ್ರಿಟೀಷ್ ಪೊಲೀಸ್ ಅಧಿಕಾರಿಗಳಿಂದ ಶಿಕ್ಷೆ ಅನುಭವಿಸಿದರು. ವಿಜಯಪುರ ದರ್ಗಾ ಜೈಲಿನಲ್ಲಿ ಆರು ತಿಂಗಳು ವಿಚಾರಣಾಧೀನ ಕೈದಿಗಳಾಗಿ ಹಾಗೂ ಮೂರು ವರ್ಷಗಳ ಕಾಲ ಪೂನಾ ಸಮೀಪವಿರುವ ಯರವಾಡಾ ಜೈಲಿನಲ್ಲಿ ಶಿಕ್ಷೆ ಅನುಭವಿಸಿದರು. ಬ್ರಿಟೀಷರ ಕಪಿಮುಷ್ಠಿಯಿಂದ ಭಾರತ ಮಾತೆ ಸ್ವತಂತ್ರ್ಯಳಾದಾಗ ಸಂತೋಷಪಟ್ಟ ಇವರು ಗ್ರಾಮ ಸುಧಾರಣೆಗಾಗಿ ತಮ್ಮ ಜೀವಿತ ಕಾಲದಲ್ಲಿ ಶ್ರಮಿಸಿದರು. ಸಾರವಾಡದ ಗುರುಚಕ್ರವರ್ತಿ ಚಿಕ್ಕಪ್ಪಯ್ಯನವರ ಮಂಗಳಾರತಿ ಪದಗಳನ್ನು ಹಾಗೂ ಮುಂಡಿಗೆ ಪದಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ಈಶ್ವರ ದೇವರ ಬ್ಯಾಳಿಪೂಜೆ ಹಾಗೂ ಅಕ್ಕಿಪೂಜೆಗಳನ್ನು ಬಹಳ ಕಲಾತ್ಮಕವಾಗಿ ಭಕ್ತಿ, ಶ್ರದ್ಧೆಗಳಿಂದ ನೆರವೇರಿಸುತ್ತಿದ್ದರು. ಪ್ರತಿವರ್ಷ ಯುಗಾದಿ ಸಂದರ್ಭದಲ್ಲಿ ಮಲ್ಲಯ್ಯನ ಕಂಬಿಗಳನ್ನು ಹೊತ್ತು ಹಲವಾರು ಭಕ್ತರಿಂದೊಡಗೂಡಿ ಶ್ರೀಶೈಲ ಮಲ್ಲಿಕಾರ್ಜುನನೆಡೆಗೆ ಕಾಲು ನಡಿಗೆಯಿಂದ ಹೋಗಿ ಬರುತ್ತಿದ್ದರು. ದೇವಸ್ಥಾನದ ಸಮಗ್ರ ಜವಾಬ್ದಾರಿ ಹೊತ್ತು ಅನಾಥ, ಬಡವ, ನಿರ್ಗತಿಕರಿಗೆ ಅನ್ನದಾನ ನೀಡಿ ಜನಾನುರಾಗಿಗಳಾಗಿದ್ದರು.

### ಶ್ರೀ ದಾನಯ್ಯ ಗುರುಪಾದಯ್ಯ ಪೂಜಾರಿ :

ಶ್ರೀ ದಾನಯ್ಯ ಗುರುಪಾದಯ್ಯ ಪೂಜಾರಿಯವರು ಸಾರವಾಡ ಗ್ರಾಮದ ಗ್ರಾಮದೇವರಾದ ಶ್ರೀ ಈಶ್ವರ ದೇವರ ಪೂಜಾರಿಗಳು. ಅನಕ್ಷರಸ್ಥರಾದ ಶ್ರೀಯುತರು ಸಮಾಜ ಸೇವೆಯಲ್ಲಿ ಯಾವತ್ತೂ ತಮ್ಮನ್ನು ತಾವು ತೊಡಗಿಸಿಕೊಂಡವರು. ಸಾರವಾಡ ಸ್ವಾತಂತ್ರ್ಯ ಯೋಧರ ಕಪ್ತಾನರಾದ ದೊಡ್ಡವಾಲಿಯವರ ಬಲಗೈಬಂಟರಾಗಿ ಕಾರ್ಯನಿರ್ವಹಿಸಿದವರು. ಅಸಹಕಾರ ಚಳುವಳಿ ಹಾಗೂ ಉಪ್ಪಿನ ಸತ್ಯಾಗ್ರಹದಲ್ಲಿ ಯಾವತ್ತೂ ಜೊತೆಗಿದ್ದವರು.



ತಾರು ತಂತಿ ಕತ್ತರಿಸುವುದು ಅಂಚೆ ಕಚೇರಿ ಧ್ವಂಸಮಾಡುವುದರಲ್ಲಿ ಇವರದು ಎತ್ತಿದ ಕೈ. ಹತ್ತೊಂಬತ್ತನೂರಾ ನಲವತ್ತೆರಡರ ಚಲೆಜಾವ್ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದವರು. ಸಾರವಾಡದ ವಾಲಿಯವರ ಅಂಗಡಿಯಿಂದ ಮಧ್ಯರಾತ್ರಿ ಜಿಡಿಮಳೆ ಲೆಕ್ಕಸದೆ ತಲೆ ಮೇಲೆ ಸೀಮೆ ಎಣ್ಣೆ ಡಬ್ಬಿ ಹೊತ್ತುಕೊಂಡು ಮುಳವಾಡ ಸರಕಾರಿ ಪ್ರವಾಸಿ ಮಂದಿರದವರೆಗೆ ಕೆಸರು ಗದ್ದೆ ಮುಂತಾದ ಅಡ್ಡ ದಾರಿಯಲ್ಲಿ ನಡೆದುಕೊಂಡು ಹೋದವರು. ಇವರು ಸಹ ಆರು ತಿಂಗಳು ವಿಜಯಪುರ ದರ್ಗಾಜೈಲಿನಲ್ಲಿ ವಿಚಾರಣಾಧೀನ ಕೈದಿಗಳಾಗಿ ಅನಂತರ ಮೂರು ವರ್ಷ ಯರವಡಾ ಜೈಲಿನಲ್ಲಿ ಶಿಕ್ಷೆ ಅನುಭವಿಸಿ ಅಪ್ಪಟ ಗಾಂಧೀವಾದಿಗಳಾಗಿ ಪರಿವರ್ತನೆಯಾದವರು.

ದೇಶ ಸ್ವಾತಂತ್ರ್ಯದ ನಂತರ ಸಾರವಾಡ ಗ್ರಾಮ ಸುಧಾರಣೆಯಲ್ಲಿ ಕೈಜೋಡಿಸಿದರು. ಈಶ್ವರ ದೇವರ ಪೂಜೆಯೊಂದಿಗೆ ಗ್ರಾಮದ ಕಾಯಿಪಲ್ಯೆ ಮಾರಾಟಗಾರರಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡುತ್ತಿದ್ದರು. ಊರಿನಲ್ಲಿ ವೈದ್ಯಕೀಯ ಸೇವೆ ಸಲ್ಲಿಸಲು ವಿಜಯಪುರದಿಂದ ಬರುವ ವೈದ್ಯರಿಗೆ ಕಾಂಪೌಂಡರ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಗ್ರಾಮದ ಯಾವುದೇ ಮನೆಗಳಲ್ಲಿ ತೊಂದರೆಯಾದಾಗ ಅಲ್ಲಿ ಹಾಜರಿದ್ದು ಸಹಾಯ ಸಹಕಾರ ನೀಡುತ್ತಿದ್ದರು. ಕೇಂದ್ರ ಮತ್ತು ರಾಜ್ಯ ಸರಕಾರಗಳು ಮಾಶಾಸನ ಮಂಜೂರು ಮಾಡುವ ಪೂರ್ವದಲ್ಲಿಯೇ ಶ್ರೀಯುತರು ನಮ್ಮನ್ನಗಲಿದರು. ಬಡತನದಲ್ಲಿಯೇ ಹುಟ್ಟಿ ಬಡತನವನ್ನೇ ಹಾಸಿ ಹೊದ್ದು ಬಡತನದಲ್ಲಿಯೇ ಬದುಕಿ ಬಾಳಿ ಬಡತನದ ಬವಣೆಯಲ್ಲಿಯೇ ಇಹಲೋಕ ತ್ಯಜಿಸಿದರು. ಇರುವಷ್ಟು ದಿನ ಜನರ ಸೇವೆಯಲ್ಲಿಯೇ ತಮ್ಮ ದೇಹ ಸವೆಸಿದರು.

### ಶ್ರೀ ಈರಪ್ಪ ಖಾಟಿ :

ಸಾರವಾಡ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಸಿದ್ದ ಪ್ರಮುಖರಲ್ಲಿ ಶ್ರೀ ಈರಪ್ಪ ಖಾಟಿಯವರು ಒಬ್ಬರು. ಬಡತನದ ಮನೆತನದಲ್ಲಿ ಜನಿಸಿದ ಶ್ರೀಯುತರು ಕೂಲಿ ಕೆಲಸ ಮಾಡಿಕೊಂಡು ಬದುಕಿದವರು. ಜೀವನದಲ್ಲಿ ಅವಿವಾಹಿತರಾಗಿಯೇ ಉಳಿದು ತಮ್ಮ ತಾಯಿಯ ಆರೈಕೆಯಲ್ಲಿಯೇ ಜೀವನ ಸವೆಸಿದರು. ದೊಡ್ಡವಾಲಿಯವರು ಕೈಕೊಂಡ ವೈಯಕ್ತಿಕ ಹಾಗೂ ಉಪ್ಪಿನ ಸತ್ಯಾಗ್ರಹಗಳಲ್ಲಿ ತಾವೂ ಸಹ ಸಕ್ರೀಯವಾಗಿ ಭಾಗವಹಿಸಿದವರು. ಚಲೆಜಾವ್ ಚಳುವಳಿಯಲ್ಲಿ ಎಲ್ಲ ಸ್ವಾತಂತ್ರ್ಯ ಯೋಧರ ಜೊತೆಯಲ್ಲಿ ವಾಲಿಯವರ

ಅಂಗಡಿಯಿಂದ ಹಳೆ ಅರಿವೆ, ನಾರು, ಸುತಳಿ ಇತರ ಬೆಂಕಿ ಹಚ್ಚಲು ಅನುಕೂಲವಾಗುವ ವಸ್ತುಗಳನ್ನು ಗಂಟುಕಟ್ಟಿ ಹೊತ್ತುಕೊಂಡು ನಡೆಯುತ್ತ ಸಾಗಿದರು. ಇವರು ಸಾಮಾನ್ಯವಾಗಿ ತೊನಶ್ಯಾಳ ಸೀಮೆಯಲ್ಲಿರುವ ಹೊಲಗಳ ಕಾವಲು ಕಾಯುವ ಕಾಯಕದಲ್ಲಿ ತೊಡಗಿಕೊಂಡಿದ್ದರಿಂದ ಕಗ್ಗತ್ತಲೆಯ ಅಮವಾಸ್ಯೆಯ ಜಿಡಿಮಳೆಯಲ್ಲಿಯೂ ಎಲ್ಲಿ ದಾರಿ ತಪ್ಪದೆ ಮಾರ್ಗದರ್ಶಿಯಾಗಿ ಇವರೆಲ್ಲರನ್ನು ಮುಳವಾಡ ಸರಕಾರಿ ಪ್ರವಾಸಿ ಮಂದಿರಕ್ಕೆ ಕರೆದುಕೊಂಡು ಹೋದರು.

ಬಡತನದ ಬವಣೆಯಲ್ಲಿ ಬೆಂದು ಬೆಂಡಾದ ಈರಪ್ಪ ಖಾಡಿಯವರು ಹೊಟ್ಟೆ ಹೊರೆದುಕೊಳ್ಳಲು ಹೊಲಗಳ ಕಾವಲುಗಾರರಾಗಿ ಕೂಲಿ ಕೆಲಸ ಮಾಡಿ ಜೀವನ ಸಾಗಿಸುತ್ತಿದ್ದರು. ಸಾರವಾಡದಲ್ಲಿ ವೈಯಕ್ತಿಕ ಚಳುವಳಿ ಮಾಡಲು ಆಗಮಿಸಿದ ಮುರಿಗೆಪ್ಪ ಸುಗಂಧಿಯವರ ಉಗ್ರವಾದ ಭಾಷಣವನ್ನು ಕೇಳಿ ಪ್ರಚೋದನೆಗೊಂಡು ಮುಳವಾಡ ಸರಕಾರಿ ಪ್ರವಾಸಿ ಮಂದಿರ ಸುಟ್ಟು ಹಾಕಲು ಎಲ್ಲ ಸ್ವಾತಂತ್ರ್ಯ ಯೋಧರೊಂದಿಗೆ ತಾವು ಕೈಜೋಡಿಸಿ ಜೈಲುವಾಸ ಅನುಭವಿಸಿದರು. ಮರಳಿ ಬಂದ ನಂತರ ಅಪ್ಪಟ ದೇಶಭಕ್ತರಾಗಿ ಪ್ರಾಮಾಣಿಕ ದುಡಿಮೆಯಿಂದ ಜೀವನ ಸಾಗಿಸಿದರು. ಕೇಂದ್ರ ಸರಕಾರ ಹಾಗೂ ರಾಜ್ಯ ಸರಕಾರಗಳು ಉಚಿತ ನಿವೇಶನ, ಸರಕಾರಿ ಜಮೀನು ಹಾಗೂ ಮಾಶಾಸನವನ್ನು ಕಷ್ಟ ಪರಿಸ್ಥಿತಿಯಲ್ಲಿರುವ, ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನು, ಮನ, ಧನವನ್ನು ಅರ್ಪಿಸಿದ ಸ್ವಾತಂತ್ರ್ಯ ಯೋಧರಿಗೆ ಮಂಜೂರು ಮಾಡುವ ಪೂರ್ವದಲ್ಲಿಯೇ ಶ್ರೀಯುತರು ದೈವಾಧೀರಾದರು.

## ಶ್ರೀ ನಂದಬಸಪ್ಪ ಈಶ್ವರಪ್ಪ ಲಿಂಗದಳ್ಳಿ :

ಶ್ರೀ ನಂದಬಸಪ್ಪ ಈಶ್ವರಪ್ಪ ಲಿಂಗದಳ್ಳಿಯವರು ಸಾರವಾಡದ ಶ್ರೀಮಂತ ಜಮೀನದಾರರ ಕುಟುಂಬದಲ್ಲಿ ಜನಿಸಿದವರು. ಮನೆಯಲ್ಲಿ ಯಾವ ಕೊರತೆಯಿರಲಿಲ್ಲ, ಅಂದಿನ ಮೂರನೇ ತರಗತಿಯವರೆಗೆ ಓದು ಮುಂದುವರೆಸಿ ವ್ಯವಹಾರ ಮಾಡಿಕೊಂಡಿದ್ದರು. ಹಿರಿಯ ಸ್ವಾತಂತ್ರ್ಯಯೋಧ ಶ್ರೀ ಗಿರಮಲ್ಲಪ್ಪ ವಾಲಿಯವರ ಗರಡಿಯಲ್ಲಿ ಪಳಗಿದ ಶ್ರೀ ನಂದಬಸಪ್ಪ ಲಿಂಗದಳ್ಳಿಯವರು ವೈಯಕ್ತಿಕ ಹಾಗೂ ಉಪ್ಪಿನ ಸತ್ಯಾಗ್ರಹಗಳಲ್ಲಿ ಹಾಗೂ ತಾರು ತಂತಿ ಕತ್ತರಿಸುವ, ಅಂಚೆ ಕಚೇರಿ ಧ್ವಂಸಗೊಳಿಸುವ ವಿಧ್ವಂಸಕ ಕಾರ್ಯಗಳಲ್ಲಿ ಭಾಗವಹಿಸಿ



ಆರು ತಿಂಗಳ ಜೈಲುವಾಸ ಅನುಭವಿಸಿದರು. ಮುಂದೆ ಇವರು ಚಲೆಜಾವ್ ಚಳುವಳಿಯಲ್ಲಿ ಭಾಗವಹಿಸಲಿಲ್ಲ. ಶ್ರೀಮಂತ ಮನೆತನದಲ್ಲಿ ಜನಿಸಿದ ಶ್ರೀಯುತರು ಸರಕಾರದ ಉಚಿತ ನಿವೇಶನ, ಮಾಶಾಸನ ಯಾವುದನ್ನು ಪಡೆಯಲಿಲ್ಲ. ಆದರೆ ಗಾಂಧೀಜಿಯವರ ತತ್ವಗಳನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡು ಆದರ್ಶ ಜೀವನ ನಡೆಸಿದರು.

## ಶ್ರೀ ಗುರುಪಾದಯ್ಯ ಚಂದ್ರಯ್ಯ ಮಠ :

ಶ್ರೀ ಗುರುಪಾದಯ್ಯ ಚಂದ್ರಯ್ಯ ಮಠರವರು ಸಾರವಾಡದ ಚಂದ್ರಯ್ಯನ ಮಠದ ಶ್ರೀಮಂತ ಸ್ವಾಮಿಗಳು ಸಾಕಷ್ಟು ಜಮೀನುಗಳನ್ನು ಹೊಂದಿದ್ದು, ವಿಸ್ತಾರವಾದ ಶ್ರೀಮಠದ ಆಸ್ತಿಯಿದ್ದು ಸ್ಥಿತಿವಂತರಾಗಿದ್ದರು. ದೊಡ್ಡವಾಲಿಯವರೊಂದಿಗೆ ನಿಕಟ ಸಂಬಂಧ ಹೊಂದಿದ ಶ್ರೀಯುತರು ಅವರೊಂದಿಗೆ ವೈಯಕ್ತಿಕ ಹಾಗೂ ಉಪ್ಪಿನ ಸತ್ಯಾಗ್ರಹದಲ್ಲಿ ಮಾತ್ರ ಸಹಚರರಾಗಿ ಭಾಗವಹಿಸಿ ಆರು ತಿಂಗಳ ಜೈಲುವಾಸವನ್ನು ಅನುಭವಿಸಿದ್ದರು. ಮಹಾತ್ಮಾಗಾಂಧೀಜಿಯವರ ವಿಧಾಯಕ ಕಾರ್ಯಕ್ರಮಗಳನ್ನು ಮನಸಾರ ಮೆಚ್ಚಿಕೊಂಡು ಗ್ರಾಮ ಸುಧಾರಣೆಯಲ್ಲಿ ತೊಡಗಿಕೊಂಡರು. ಈ ಗ್ರಾಮದ ಸ್ವಾತಂತ್ರ್ಯ ಯೋಧರು ಜಾತ್ರೆ ಉತ್ಸವಗಳಲ್ಲಿ ಪ್ರಯೋಗಿಸುವ ಅಕ್ಷಯಾಂಬರ ನಾಟಕದಲ್ಲಿ ಶ್ರೀಕೃಷ್ಣನ ಪಾತ್ರಧಾರಿಗಳಾಗಿ ಅಮೋಘ ಪ್ರದರ್ಶನವನ್ನು ನೀಡಿರುವುದನ್ನು ಸಾರವಾಡದ ಹಳೆ ತಲೆಮಾರಿನ ಜನ ಇನ್ನೂ ಮಾತನಾಡಿಕೊಳ್ಳುತ್ತಿದ್ದಾರೆ. ಶ್ರೀಯುತ ಗುರುಪಾದಯ್ಯ ಮಠರವರು ತಮ್ಮ ಶ್ರೀಮಠದ ಮುಂದುಗಡೆಯಿರುವ ಬಯಲು ಜಾಗದಲ್ಲಿ ನಾಟಕ, ಬಯಲಾಟಗಳನ್ನಾಡಲು ಉಚಿತವಾಗಿ ನೀಡಿ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಪ್ರೋತ್ಸಾಹ ನೀಡಿ ಜನ ಸಾಮಾನ್ಯರ ಪ್ರೀತಿಗೆ ಪಾತ್ರರಾಗಿದ್ದರು.

ಹೀಗೆ ವಿಜಯಪುರ ಜಿಲ್ಲೆಯ ದೋಣಿ ನದಿ ತೀರದ ಸಾರವಾಡ ಗ್ರಾಮದ ಸ್ವಾತಂತ್ರ್ಯಯೋಧರು ದೇಶದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ತನು, ಮನ, ಧನವನ್ನರ್ಪಿಸಿ ತ್ಯಾಗ, ಬಲಿದಾನಗೈದು ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟು ಸುತ್ತಮುತ್ತಲ ಹಳ್ಳಿಗಳಲ್ಲಿ ಮಾದರಿ ಗ್ರಾಮವನ್ನಾಗಿ ಮಾಡಿ ಮಹಾತ್ಮಾ ಗಾಂಧೀಜಿಯವರ ರಾಮರಾಜ್ಯದ ಕನಸು ನನಸು ಮಾಡಿರುತ್ತಾರೆ. ಇಂದು ಆ ಹದಿಮೂರು ಜನ ವೀರಯೋಧರು ಅವರಿಗೆ ನೈತಿಕ ಧೈರ್ಯ ತುಂಬಿ ಮನೆತನದ ಗೌರವಾದರಗಳನ್ನು ಕಾಪಾಡಿಕೊಂಡು ಆತ್ಮ ಸ್ಥೈರ್ಯವನ್ನು ತುಂಬಿದ

ಗೌರವಾನ್ವಿತ ಪೂಜ್ಯ ಮಾತೆಯರಿಗೆ ಗೌರವಪೂರ್ವಕ ಶ್ರದ್ಧಾಂಜಲಿಯನ್ನು ಈ ಭಾರತ ಸ್ವಾತಂತ್ರ್ಯದ ಎಪ್ಪತ್ತೈದನೆಯ ಅಮೃತ ಮಹೋತ್ಸವದ ಸಂದರ್ಭಧಲ್ಲಿ ಸಲ್ಲಿಸುತ್ತೇನೆ.


**ಗಂಡು ಮೆಟ್ಟಿನ ಸಾರವಾಡದ ಸ್ವಾತಂತ್ರ್ಯವೀರರೆ**
**ನಿಮಗಿದೋ ಅಮೃತೋತ್ಸವದ ನಮನ**
**ಭಾರತಾಂಬೆಯ ದಾಸ್ಯ ಸಂಕೊಲೆಯ ಬಿಡಿಸಿ**
**ತನುಮನಧನವನರ್ಪಿಸಿ ಹಂಗು ಹರಿದು**
**ಹೋರಾಡಿ ಸ್ವಾತಂತ್ರ್ಯ ಪಡೆದ ನಿಮಗಿದೋ**
**ನವತರುಣರ ಸಾವಿರದ ನಮನ ನಮನ ॥**

ಜೈಹಿಂದ !!!


❖ ❖ ❖

# ಅನುಬಂಧ

## ಛಾಯಾಚಿತ್ರಗಳು



ಶ್ರೀ ಗಿರಿಮಲ್ಲಪ್ಪ. ಶಿ. ವಾಲಿ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು



ಶ್ರೀ ಮರುಳ ಸಿದ್ಧಪ್ಪ ಶಿ.ವಾಲಿ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು




ಶ್ರೀ ಈಶ್ವರಪ್ಪ. ನಿಂ. ಜುಮನಾಳ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು



ಶ್ರೀ ಚನ್ನಪ್ಪ. ಮಲ್ಲಪ್ಪ. ಗುಡದಿನ್ನಿ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು




ಶ್ರೀ ಈಶ್ವರಪ್ಪ. ತು. ಅರ್ಜುಣಗಿ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು



ದಿ॥ ಶ್ರೀ ಬಸಪ್ಪ. ಅ. ಬಳಗಲಿ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು



ಶ್ರೀ ಸಿದಗೊಂಡಪ್ಪ. ಸಾವಳಗಿ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು



ಶ್ರೀ ಪಾಂಡು. ಗೋ. ಪರೀಟ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು



ಶ್ರೀ ಶಂಕ್ರಯ್ಯ. ಮಲ್ಲಯ್ಯ. ಪೂಜಾರಿ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು



ಶ್ರೀ ಗುರುಪಾದಯ್ಯ. ಚ. ಮಠ
ಹಿರಿಯ ಸ್ವಾತಂತ್ರ್ಯ ಹೋರಾಟಗಾರರು







ಮಹಾತ್ಮಾ ಗಾಂಧಿ ಸರ್ಕಲ್, ಸಾರವಾಡ









ಸರಕಾರಿ ಪ್ರವಾಸಿ ಮಂದಿರ, ಮುಳವಾಡ



ಶ್ರೀ ವಾಲಿ ಸಹೋದರರ ಕಿರಾಣಿ ಹಾಗು ಬಟ್ಟೆ ಅಂಗಡಿ ಮತ್ತು ಸ್ವಾತಂತ್ರ್ಯ ಯೋಧರ ಕಾಂಗ್ರೆಸ್ ಸಂಸ್ಥೆಯ ಕಾರ್ಯಾಲಯ, ಸಾರವಾಡ

## ಅಮೃತ ಮಹೋತ್ಸವ ಪ್ರಕಟಣೆ – ೭೫ ಕಿರುಪುಸ್ತಕಗಳ ಪಟ್ಟಿ
## ಸ್ವಾತಂತ್ರ್ಯ ಹೋರಾಟದಲ್ಲಿ ಕರ್ನಾಟಕ

| ಕ್ರಸಂ. | ಪುಸ್ತಕದ ಹೆಸರು | ಲೇಖಕರ ಹೆಸರು | ಬೆಲೆ |
|---|---|---|---|
| ೧. | ತುರುವನೂರು | ಡಾ. ಪಿ. ಯಶೋದಾ ರಾಜಶೇಖರಪ್ಪ | ೩೦/– |
| ೨. | ಚಿತ್ರದುರ್ಗ | ಡಾ. ಬಿ. ರಾಜಶೇಖರಪ್ಪ | ೩೦/– |
| ೩. | ರಾಮಸ್ವಾಮಿ ವೃತ್ತ | ಮಂಜುನಾಥ ಹೆಚ್.ಎಲ್. | ೩೦/– |
| ೪. | ಸುಬ್ಬರಾಯನ ಕೆರೆ | ಡಾ. ಇಂದಿರಾ ಬಿ.ಪಿ. | ೩೦/– |
| ೫. | ಬದನವಾಳು | ಡಾ. ಇಂದಿರಾ ಬಿ.ಪಿ. | ೩೦/– |
| ೬. | ತಗಡೂರು | ಡಾ. ಎಚ್.ಎಸ್. ಉಷಾರಾಣಿ | ೩೦/– |
| ೭. | ಶಿವಪುರ | ಡಾ. ಲಿಂಗರಾಜು | ೩೦/– |
| ೮. | ಮಂಡ್ಯ | ಡಾ. ಶಿವರಾಮು ಎಸ್. | ೩೦/– |
| ೯. | ಚಾಮರಾಜನಗರ | ಡಾ. ಸುಂದ್ರೇಶ ಎನ್. | ೩೦/– |
| ೧೦. | ಗುಂಡ್ಲುಪೇಟೆ | ಕವಿತಾ ಎ. | ೩೦/– |
| ೧೧. | ಗೊರೂರು | ಡಾ. ಯೋಗೇಶ್ ಎನ್.ಇ. | ೩೦/– |
| ೧೨. | ಅರಸೀಕೆರೆ | ಡಾ. ಮಂಜುನಾಥ ಜಿ.ಆರ್. | ೩೦/– |
| ೧೩. | ಹೊಸರಿತ್ತಿ | ಡಾ. ಹೇಮಪ್ಪ ಬ. ಕೆಂಚಳ್ಳಿ | ೩೦/– |
| ೧೪. | ಕನ್ನೇಶ್ವರ | ಡಾ. ಚಾಮರಾಜ ಕಮ್ಮಾರ | ೩೦/– |
| ೧೫. | ಚಳ್ಳಕೂಡ್ಲೂರು | ರಾಮಣ್ಣ ಹವಳೆ | ೩೦/– |
| ೧೬. | ನ್ಯಾಷನಲ್ ಹೈಸ್ಕೂಲು | ಟಿ.ಕೆ. ತಿಮ್ಮರಾಜ ಶೆಟ್ಟಿ | ೩೦/– |
| ೧೭. | ಬನಪ್ಪ ಪಾರ್ಕ್ | ರಮೇಶ ದೊಡ್ಡಪುರ | ೩೦/– |
| ೧೮. | ಮಲ್ಲೇಶ್ವರ | ಕೆ.ಎಲ್. ನಟರಾಜ್ | ೩೦/– |
| ೧೯. | ದಂಡುಪ್ರದೇಶ | ಪ್ರಮೋದ್ ನ. ಗೋ. | ೩೦/– |
| ೨೦. | ದೇವನಹಳ್ಳಿ | ಕೆ.ಆರ್. ನರಸಿಂಹನ್ | ೩೦/– |
| ೨೧. | ದೊಡ್ಡಬಳ್ಳಾಪುರ | ಡಿ.ಎಂ. ಘನಶ್ಯಾಮ | ೩೦/– |
| ೨೨. | ರಾಮನಗರ | ಎಸ್. ಶರತ್ ಚಂದ್ರ | ೩೦/– |
| ೨೩. | ಕನಕಪುರ | ಡಾ. ಎಸ್.ಎಚ್. ಭುವನೇಶ್ವರ | ೩೦/– |
| ೨೪. | ಶ್ರೀನಿವಾಸಪುರ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೫. | ಬಂಗಾರಪೇಟೆ | ಪ್ರೊ. ಕೆ.ಆರ್. ಜಯಶ್ರೀ | ೩೦/– |
| ೨೬. | ವಿದುರಾಶ್ವತ್ಥ | ಡಾ. ಎಸ್.ಜಿ. ರಾಮದಾಸ ರೆಡ್ಡಿ | ೩೦/– |
| ೨೭. | ಈಸೂರು | ಮಾರ್ಪಳ್ಳಿ ಆರ್. ಮಂಜುನಾಥ್ | ೩೦/– |
| ೨೮. | ನಗರ(ಬಿದನೂರು) | ಚಿನ್ಮಯ ಎಂ.ಸಿ. | ೩೦/– |
| ೨೯. | ಚನ್ನಗಿರಿ | ಡಾ. ಕೆಳದಿ ವೆಂಕಟೇಶ ಜೋಯಿಸ್ | ೩೦/– |
| ೩೦. | ದಾವಣಗೆರೆ | ಸಹನಾ ಚೇತನ್ | ೩೦/– |
| ೩೧. | ಸಿಂದಗಿ | ಡಾ. ರಮೇಶ ಎಸ್. ಕತ್ತಿ | ೩೦/– |
| ೩೨. | ಮಸಬಿನಾಳ | ಶಂಕರ ಬೈಚಬಾಳ | ೩೦/– |
| ೩೩. | ಸಾರವಾಡ | ಡಾ. ಸೋಮಶೇಖರ ವಾಲಿ | ೩೦/– |
| ೩೪. | ಹಲಸಂಗಿ | ಶ್ರೀ ಸುಮಿತ್ ಮೇತ್ರಿ | ೩೦/– |

| | | | |
|---|---|---|---|
| ೩೫. | ನರಗುಂದ | ಡಾ. ನಿಂಗು ಸೊಲಗಿ | ೩೦/– |
| ೩೬. | ಮುಂಡರಗಿ | ಡಾ. ಉಮೇಶ ತಿಮ್ಮಾಪುರ | ೩೦/– |
| ೩೭. | ಹಲಗಲಿ | ಡಾ. ವಿಜಯಶ್ರೀ ಇಟ್ಟಣ್ಣವರ | ೩೦/– |
| ೩೮. | ಬಿಸನಾಳ | ಡಾ. ವಿನಯಕುಮಾರ್ ಹಿರೇಮಠ | ೩೦/– |
| ೩೯. | ಬಾಗಲಕೋಟೆ | ರಾಮ ಮನಗೂಳಿ | ೩೦/– |
| ೪೦. | ಬಾದಾಮಿ | ಡಾ. ಪ್ರಕಾಶ ಗ. ಖಾಡೆ | ೩೦/– |
| ೪೧. | ಸುರಪುರ | ಶ್ರೀನಿವಾಸ ಜಾಲವಾದಿ | ೩೦/– |
| ೪೨. | ಕೆಂಭಾವಿ | ನಿಂಗನಗೌಡ ಹ. ದೇಸಾಯಿ | ೩೦/– |
| ೪೩. | ರಾಜನಕೋಳೂರು | ರಾಘವೇಂದ್ರ ಜಹಗೀರದಾರ | ೩೦/– |
| ೪೪. | ಭಾಲ್ಕಿ | ಡಾ. ರಘುಶಂಖ ಭಾತಂಬ್ರಾ | ೩೦/– |
| ೪೫. | ಗೋರಟಾ | ಷ.ಬ್ರ. ಡಾ. ರಾಜಶೇಖರ ಶಿವಾಚಾರ್ಯ ಸ್ವಾಮಿಗಳು | ೩೦/– |
| ೪೬. | ಕೇಂದ್ರ ಮೈದಾನ | ಡಾ. ವಸಂತಕುಮಾರ್ ಪೆರ್ಲ | ೩೦/– |
| ೪೭. | ರಾಮಶಾಲಾ ಬಯಲು | ರಾಮಣ್ಣ ಹವಳೆ | ೩೦/– |
| ೪೮. | ಉಳ್ಳಾಲ | ಡಾ. ಜ್ಯೋತಿ ಚೇಳ್ಯಾರು | ೩೦/– |
| ೪೯. | ಅಮರಸುಳ್ಯ | ಸಹನಾ ಕಾಂತಬೈಲು | ೩೦/– |
| ೫೦. | ಅಜ್ಜರಕಾಡು ಮೈದಾನ | ಡಾ. ಪೃಥ್ವೀರಾಜ ಕವತ್ತಾರು | ೩೦/– |
| ೫೧. | ಬಸರೂರು–ಕುಂದಾಪುರ | ಮಂಜುನಾಥ್ ಚಾಂದ್ | ೩೦/– |
| ೫೨. | ಪೊನ್ನಂಪೇಟೆ | ಸೊಮೆಯಂಡ ಕೌಸಲ್ಯ ಸತೀಶ್ | ೩೦/– |



| | | | |
|---|---|---|---|
| ೫೩. | ಮಡಿಕೇರಿ | ಪ್ರೊ. ಕೆ.ಆರ್. ದೀಕ್ಷಿತ್ | ೩೦/– |
| ೫೪. | ಅಜ್ಜಂಪುರ | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೫. | ಚಿಕ್ಕಮಗಳೂರು | ಜಿ.ಸ. ಪ್ರಭುಲಿಂಗ ಶಾಸ್ತ್ರಿ | ೩೦/– |
| ೫೬. | ಕಲಬುರಗಿ | ಡಾ. ಶಂಭುಲಿಂಗವಾಣಿ | ೩೦/– |
| ೫೭. | ಮುಧೋಳ–ಸೇಡಂ | ಮುಡಬಿ ಗುಂಡೇರಾವ | ೩೦/– |
| ೫೮. | ಅಂಕೋಲಾ | ಶಾಂತಾರಾಮ ನಾಯಕ | ೩೦/– |
| ೫೯. | ಶಿರಸಿ | ಪದ್ಮಾಕರ ಮಡಗಾಂವಕರ | ೩೦/– |
| ೬೦. | ಕಾರವಾರ | ಡಾ. ಉದಯ ಶಂಕರ ಪುರಾಣಿಕ | ೩೦/– |
| ೬೧. | ಬಳ್ಳಾರಿ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೨. | ಹೊಸಪೇಟೆ | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೩. | ಕೊಟ್ಟೂರು | ಡಾ. ಮೃತ್ಯುಂಜಯ ರುಮಾಲೆ | ೩೦/– |
| ೬೪. | ಕೂಡ್ಲಿಗಿ | ಡಾ. ಕೆ. ಸತೀಶ | ೩೦/– |
| ೬೫. | ಕಿತ್ತೂರು | ಪ್ರಕಾಶ ಗಿರಿಮಲ್ಲನವರ | ೩೦/– |
| ೬೬. | ಹುದಲಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೭. | ಬೆಳಗಾವಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೮. | ಹುಲಕುಂದ | ಪ್ರಕಾಶ ಗಿರಿಮಲ್ಲನವರ | ೩೦/– |
| ೬೯. | ಬೆಂಗೇರಿ | ಪ್ರಕಾಶ ಗಿರಿಮಲ್ಲನವರ | ೩೦/– |
| ೭೦. | ಕೊಪ್ಪಳ | ಮಹೇಶ ಬಳ್ಳಾರಿ | ೩೦/– |

| | | | |
|---|---|---|---|
| ೭೧. | ಗಂಗಾವತಿ | ರಮೇಶ ಸಿ. ಬನ್ನಿಕೊಪ್ಪ | ೩೦/– |
| ೭೨. | ಅಳವಂಡಿ | ಡಾ. ಪ್ರಕಾಶ ಬಳ್ಳಾರಿ | ೩೦/– |
| ೭೩. | ತುಮಕೂರು | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೪. | ಮಧುಗಿರಿ | ಡಾ. ಬಿ. ನಂಜುಂಡಸ್ವಾಮಿ | ೩೦/– |
| ೭೫. | ತಾವರೆಕೆರೆ | ಪ್ರೊ. ಕೆ. ಪುಟ್ಟರಂಗಪ್ಪ | ೩೦/– |

❖ ❖ ❖